ಗ್ರಾಮೀಣ ಮಹಿಳಾ ಕಾರ್ಮಿಕರ ಸಮಸ್ಯೆಗಳು – ಬಂಟ್ವಾಳ ತಾಲೂಕಿನಲ್ಲಿ ಒಂದು ಪ್ರಕರಣ ಅಧ್ಯಯನ

ಕನ್ನಡ ವಿಶ್ವವಿದ್ಯಾಲಯ ಹಂಪಿಗೆ ಎಂ.ಫಿಲ್ ಪದವಿಗಾಗಿ

(ಅಭಿವೃದ್ಧಿ ಅಧ್ಯಯನ)

ಸಾದರ ಪಡಿಸಿದ ಸಂಪ್ರಬಂಧ

ಸಂಶೋಧಕರು

ದಿವ್ಯ

ನೋಂದಣಿ ಸಂಖ್ಯೆ: KTSMDS-೦೦೫೪೮

ಮಾರ್ಗದರ್ಶಕರು

ಡಾ. ವಿ.ಬಾಸಿಲ್ ಹನ್ಸ್ ಎಂ.ಎ., ಎಂ.ಫಿಲ್., ಪಿಹೆಚ್.ಡಿ

೨೦೧೨

ಕರ್ನಾಟಕ ತಿಯೋಲಾಜಿಕಲ್ ಸಂಶೋಧನ ಕೇಂದ್ರ

ಬಲ್ಮಠ, ಮಂಗಳೂರು – ೫೭೫ ೦೦೧

995

ನಾಗರಾಜ ಹಕ್ಕ
995
AKSHARA GRANTHALAYA
ACC.NO. 048803

995

995

ಗ್ರಾಮೀಣ ಮಹಿಳಾ ಕಾರ್ಮಿಕರ ಸಮಸ್ಯೆಗಳು – ಬಂಟ್ವಾಳ ತಾಲೂಕಿನಲ್ಲಿ ಒಂದು ಪ್ರಕರಣ ಅಧ್ಯಯನ

ಕನ್ನಡ ವಿಶ್ವವಿದ್ಯಾಲಯ ಹಂಪಿಗೆ ಎಂ.ಫಿಲ್ ಪದವಿಗಾಗಿ
(ಅಭಿವೃದ್ಧಿ ಅಧ್ಯಯನ)
ಸಾದರ ಪಡಿಸಿದ ಸಂಪ್ರಬಂಧ

ಸಂಶೋಧಕರು
ದಿವ್ಯ
ನೋಂದಣಿ ಸಂಖ್ಯೆ: KTSMDS-೦೦೫೪೮

ಮಾರ್ಗದರ್ಶಕರು
ಡಾ. ವಿ.ಬಾಸಿಲ್ ಹನ್ಸ್ ಎಂ.ಎ., ಎಂ.ಫಿಲ್., ಪಿಹೆಚ್.ಡಿ

೨೦೧೨

ಕರ್ನಾಟಕ ತಿಯೋಲಾಜಿಕಲ್ ಸಂಶೋಧನ ಕೇಂದ್ರ
ಬಲ್ಮಠ, ಮಂಗಳೂರು – ೫೭೫ ೦೦೧

331.483
DIV 9
048803

ಯೋಗ್ಯಾತಾ ಪತ್ರ

ದಿವ್ಯ ಅವರು ನನ್ನ ಸಲಹೆ ಮತ್ತು ಮಾರ್ಗದರ್ಶನದಲ್ಲಿ **ಗ್ರಾಮೀಣ ಮಹಿಳಾ ಕಾರ್ಮಿಕರ ಸಮಸ್ಯೆಗಳು - ಬಂಟ್ವಾಳ ತಾಲೂಕಿನಲ್ಲಿ ಒಂದು ಪ್ರಕರಣ ಅಧ್ಯಯನ** ಎಂಬ ಶೀರ್ಷಿಕೆಯ ಈ ಸಂಪ್ರಬಂಧವನ್ನು ಎಂ.ಫಿಲ್ ಪದವಿ ಪ್ರಾಪ್ತಿಗಾಗಿ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಬೇಕೆಂದು ಸಿದ್ಧಪಡಿಸಿದ್ದಾರೆ. ಈ ಸಂಪ್ರಬಂಧವು ಸಂಶೋಧಕರ ಸ್ವಂತ ಪರಿಶ್ರಮ, ವಿಶ್ಲೇಷಣೆ, ಅಭಿಪ್ರಾಯ ಸಂಗ್ರಹ ಮತ್ತು ಸಂಶೋಧನೆಯ ಫಲಸ್ವರೂಪವಾಗಿದೆ. ಇವರು ಈ ಸಂಪ್ರಬಂಧವನ್ನು ಅಥವಾ ಇದರ ಯಾವುದೇ ಭಾಗವನ್ನು ಈ ಮೊದಲು ಯಾವುದೇ ಪದವಿಗಾಗಿ ಅಥವಾ ಇನ್ನಿತರ ಉದ್ದೇಶಗಳಿಗಾಗಿಯಾಗಲಿ ಬಳಸಿಕೊಂಡಿಲ್ಲ.

ಡಾ. ವಿ. ಬಾಸಿಲ್ ಹನ್ಸ್

ಸಂಶೋಧನಾ ಮಾರ್ಗದರ್ಶಕರು

ಕರ್ನಾಟಕ ತಿಯೋಲಾಜಿಕಲ್ ಸಂಶೋಧನ ಕೇಂದ್ರ

ಬಲ್ಮಠ, ಮಂಗಳೂರು.

ಪ್ರಮಾಣ ಪತ್ರ

ಕನ್ನಡ ವಿಶ್ವವಿದ್ಯಾಲಯ, ಹಂಪಿಗೆ ಎಂ.ಫಿಲ್ ಪದವಿಗಾಗಿ ಸಾದರ ಪಡಿಸಿದ **ಗ್ರಾಮೀಣ ಮಹಿಳಾ ಕಾರ್ಮಿಕರ ಸಮಸ್ಯೆಗಳು – ಬಂಟ್ವಾಳ ತಾಲೂಕಿನಲ್ಲಿ ಒಂದು ಪ್ರಕರಣ ಅಧ್ಯಯನ** ಎಂಬ ಈ ಸಂಪ್ರಬಂಧವು ನನ್ನ ಸ್ವತಂತ್ರ ಕೃತಿಯಾಗಿದ್ದು ವಿಶ್ಲೇಷಣೆ ಮತ್ತು ಅಧ್ಯಯನದ ಫಲಶ್ರುತಿಯಾಗಿದೆ. ಕರ್ನಾಟಕ ತಿಯೋಲಾಜಿಕಲ್ ಸಂಶೋಧನಾ ಕೇಂದ್ರದಲ್ಲಿ ಡಾ. ವಿ. ಬಾಸಿಲ್ ಹನ್ಸ್ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ ಈ ಸಂಪ್ರಬಂಧವನ್ನು ಬೇರಾವುದೇ ಪದವಿ, ಡಿಪ್ಲೋಮಾ ಅಥವಾ ತತ್ಸಮಾನ ಉಪಾಧಿಗಳ ಪ್ರಾಪ್ತಿಗಾಗಿ ಅಥವಾ ಆರ್ಥಿಕ ಲಾಭಕ್ಕಾಗಿ ಇಡಿಯಾಗಿ ಅಥವಾ ಬಿಡಿಯಾಗಿ ಬಳಸಿಕೊಂಡಿಲ್ಲವೆಂದು ನಾನು ಈ ಮೂಲಕ ದೃಢಪಡಿಸುತ್ತೇನೆ.

ದಿವ್ಯ

ಸಂಶೋಧಕರು

ಕರ್ನಾಟಕ ತಿಯೋಲಾಜಿಕಲ್ ಸಂಶೋಧನ ಕೇಂದ್ರ

ಬಲ್ಮಠ, ಮಂಗಳೂರು.

ಗ್ರಾಮೀಣ ಮಹಿಳಾ ಕಾರ್ಮಿಕರ ಸಮಸ್ಯೆಗಳು – ಬಂಟ್ವಾಳ ತಾಲೂಕಿನಲ್ಲಿ ಒಂದು ಪ್ರಕರಣ ಅಧ್ಯಯನ

ಅಧ್ಯಯನದ ವಿವರಗಳು

ಅಧ್ಯಾಯ - ೧

ಪ್ರವೇಶ, ಅಧ್ಯಯನದ ಉದ್ದೇಶ, ಸ್ವರೂಪ ಮತ್ತು ವ್ಯಾಪ್ತಿ

ಅಧ್ಯಾಯ -೧

ಪ್ರವೇಶ,ಅಧ್ಯಯನದ ಉದ್ದೇಶ,ಸ್ವರೂಪ ಮತ್ತು ವ್ಯಾಪ್ತಿ

೧.೧.ಪ್ರವೇಶ

ಭಾರತದಲ್ಲಿನ ಬ್ರಿಟಿಷ್ ಆಡಳಿತ ಕೇವಲ ರಾಜಕೀಯ, ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ವ್ಯವಸ್ಥೆಗಳಲ್ಲಿ ಪರಿಣಾಮ ಬೀರದೆ, ಸ್ತ್ರೀಯರ ಶಿಕ್ಷಣದ ಮೇಲೂ ಮಹತ್ತರವಾದ ಪರಿಣಾಮ ಬೀರಿತು. ಮಾತ್ರವಲ್ಲದೆ, ಹಲವಾರು ಕ್ರೈಸ್ತ ಮಿಶನರಿಗಳು ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಹೆಚ್ಚಿನ ಪ್ರಾಶಸ್ತ್ಯವನ್ನು ನೀಡಿದರು. ಹಲವಾರು ಧೀಮಂತ ವ್ಯಕ್ತಿಗಳು ಮಹಿಳೆಯರಿಗಾಗುತ್ತಿದ್ದ ತಾರತಮ್ಯ, ಅನ್ಯಾಯಗಳ ಬಗ್ಗೆ ಜಾಗೃತಿ ಮೂಡಿಸಿ ಅವುಗಳನ್ನು ತೊಡೆದು ಹಾಕಲು ಶ್ರಮಿಸಿದರು. ಇದರ ಪರಿಣಾಮವಾಗಿ ವಿವಾಹ ವಯಸ್ಸಿನ ಏರಿಕೆ, ಸತಿ ಪದ್ಧತಿಯ ನಿಲುಗಡೆಯಾಗಿ, ಹೆಣ್ಣು ಮಕ್ಕಳ ಚಲನವಲನ, ಉದ್ಯೋಗವಕಾಶ ಹಾಗೂ ಸ್ವಾವಲಂಬನೆಯ ದಾರಿ ಮುಕ್ತವಾಯಿತು.

ಅನಾದಿ ಕಾಲದಿಂದಲೂ, ಪುರುಷ ಪ್ರಧಾನ ದೇಶವಾದ ಭಾರತದಲ್ಲಿ (ಯು.ಎನ್.ಡಿ.ಪಿ ಯ ವರದಿಯ ಪ್ರಕಾರ ಯಾವ ದೇಶದಲ್ಲೂ ಮಹಿಳೆಯ ಸ್ಥಾನ ಪುರುಷನ ಸ್ಥಾನದಷ್ಟು ಉನ್ನತ ಮಟ್ಟದಲ್ಲಿಲ್ಲ) ಸಮಾಜವೇ ಸೃಷ್ಟಿಸಿದ ಅಸಮಾನತೆಯಿಂದ ಆಸ್ತಿಯ ಹಕ್ಕಿನಲ್ಲಿ, ವಿದ್ಯಾಭ್ಯಾಸದ ಮಟ್ಟದಲ್ಲಿ, ಉದ್ಯೋಗ ಅವಕಾಶದಲ್ಲಿ ಸತತವಾಗಿ ಆಕೆಯು ವಂಚಿತಳಾಗುತ್ತಿದ್ದಾಳೆ. ಸಮಾಜದಲ್ಲಿ ಪರಂಪರೆಯಿಂದ ಬಂದ ಆಚಾರ ವಿಚಾರಗಳು, ಸಂಸ್ಕೃತಿಗಳು ಮಹಿಳೆಗೆ ಸ್ವಾವಲಂಬಿಯಾಗಿ ಬದುಕಲು ಅನಾನುಕೂಲ ಮಾಡಿವೆ. ಪುರುಷರಿಗೆ ಅಡಿಯಾಳಾಗಿ ಬದುಕುವ ಮಹಿಳೆಯರು ತನ್ನ ಭಾವನೆಗಳನ್ನು ತನ್ನ ಕುಟುಂಬದ ಸದಸ್ಯರೊಂದಿಗೆ ಹಾಗೂ ಸಮಾಜದ ಇತರರೊಡನೆ ಮುಕ್ತವಾಗಿ ಚರ್ಚಿಸಲು ಅವಕಾಶವಿಲ್ಲ. ಗ್ರಾಮೀಣ ಸಮಾಜದಲ್ಲಿ ನಡೆಯುವ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಭಾಗವಹಿಸಲು ಮಹಿಳೆಯರಿಗೆ ಅವಕಾಶವಿಲ್ಲ. ಸಾಮಾಜಿಕ ಪದ್ಧತಿಗಳು ಆಕೆಯನ್ನು ಶಿಕ್ಷಣದಿಂದ ವಂಚಿತಳನ್ನಾಗಿ ಮಾಡಿದೆ. ಆರ್ಥಿಕ ಸ್ವಾವಲಂಬನೆಯೂ ಇಲ್ಲದೇ ಪುರುಷರಿಗೆ ಅಧೀನರಾಗಿ, ಮನೆಯ ನಾಲ್ಕು ಗೋಡೆಗಳ ಮಧ್ಯೆಯೇ ಇರಬೇಕು. ಮಹಿಳೆಯು ಮನೋಧೈರ್ಯವನ್ನು ಹೊಂದಿದ್ದರೆ, ಆರ್ಥಿಕ ಮಟ್ಟವನ್ನು ಸುಧಾರಿಸಿಕೊಂಡು ಗೌರವಪೂರ್ಣ ಜೀವನ ನಡೆಸಬಹುದು. ಈ ಯುಗದಲ್ಲಿ ಮಹಿಳೆಯು ತಾನು ಸಂಪೂರ್ಣವಾಗಿ ತನ್ನ ಹಕ್ಕು ಮತ್ತು

ಬಾಧ್ಯತೆಗಳ ಅರಿವನ್ನು ಹೊಂದಿರುವ ಪ್ರಜೆಯೆಂದೆನಿಸಿಕೊಳ್ಳುವ ಮೂಲಕ ಶಿಕ್ಷಣದ ಹೊಸಯುಗದ ಹೊಸ್ತಿಲಲ್ಲಿ ನಿಂತಿದ್ದಾಳೆ. ರಾಷ್ಟ್ರದ ಏಳಿಗೆ ಮತ್ತು ಪ್ರಗತಿಯಲ್ಲಿ ಮಹಿಳೆಯ ಕೊಡುಗೆಯನ್ನು ಸಮಾನವಾಗಿ ಗುರುತಿಸಲಾಗುತ್ತಿದೆ. ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ ಬೆಳವಣಿಗೆಯಿಂದಾಗಿ ಮತ್ತು ಶಿಕ್ಷಣದಿಂದಾಗಿ ಆರ್ಥಿಕ ಚಟುವಟಿಕೆಗಳಲ್ಲಿ ಮಹಿಳೆಯರು ತಮ್ಮನ್ನು ತಾವು ತೊಡಗಿಸಿಕೊಳ್ಳುತ್ತಿದ್ದಾರೆ. ಸರಕಾರ ಹಾಗೂ ಸರಕಾರೇತರ ಸಂಸ್ಥೆಗಳು ಸಲಹೆ, ತರಬೇತಿ ಹಾಗೂ ಹಣಕಾಸಿನ ಸೌಲಭ್ಯವನ್ನು ಒದಗಿಸುತ್ತಾ ಬಂದಿದೆ. ಇಂದು ಪಟ್ಟಣ ಮಾತ್ರವಲ್ಲದೆ, ಗ್ರಾಮೀಣ ಪ್ರದೇಶದಲ್ಲೂ ಸ್ವಸಹಾಯ ಸಂಘದ ಕ್ರಾಂತಿಯಿಂದಾಗಿ, ಮಹಿಳೆಯೂ ಸ್ವಾವಲಂಬನೆಯ ಜೀವನಕ್ಕೆ ಅಡಿಪಾಯ ಹಾಕಿದ್ದಾಳೆ.

ನಮ್ಮ ಸಂವಿಧಾನದ ಪ್ರಕಾರ, ಮಹಿಳೆಯು ಕೂಡಾ ಪುರುಷರಂತೆ ಸಮಾನವಾದ ಹಕ್ಕುಗಳನ್ನು ಹೊಂದಿದ್ದಾಳೆ. ಸಂವಿಧಾನವು ಅವಳಿಗೆ ಶಿಕ್ಷಣ ಮತ್ತು ಉದ್ಯೋಗದಲ್ಲಿ ಸಮಾನವಾದ ಅವಕಾಶವನ್ನು ಕಲ್ಪಿಸಿದೆ. ೨೦೧೧ರ ಜನಗಣತಿಯ ಪ್ರಕಾರ ಕಳೆದ ಹತ್ತು ವರ್ಷಗಳಲ್ಲಿ ಭಾರತದ ಜನಸಂಖ್ಯೆಯು ೧.೨೧ ಬಿಲಿಯನ್ ಏರಿಕೆಯಾಗಿದೆ. ಈ ಅಂಕಿ ಅಂಶಗಳಲ್ಲಿ ಪುರುಷರ ಸಂಖ್ಯೆಯು ೬೨೩.೭ ಮಿಲಿಯನ್ ಆಗಿದ್ದರೆ, ಮಹಿಳೆಯರ ಸಂಖ್ಯೆಯು ೫೮೬.೫ ಮಿಲಿಯನ್ ಆಗಿದೆ. ೨೦೦೧ರ ಜನಗಣತಿಯ ವರದಿಯ ಪ್ರಕಾರ ೬೪.೮೩ ಶೇಕಡಾ ರಷ್ಟಿದ್ದ ಸಾಕ್ಷರತಾ ಪ್ರಮಾಣವು ೨೦೧೧ನೇ ಜನಗಣತಿಯ ಅವಧಿಯಲ್ಲಿ ಶೇಕಡಾ ೭೪.೦೪ಕ್ಕೆ ಏರಿಕೆಯಾಗಿದೆ. ಇದರಲ್ಲಿ ಪುರುಷರ ಪ್ರಮಾಣ ಶೇಕಡಾ ೮೨.೧೪ ಆಗಿದ್ದು, ಮಹಿಳೆಯರ ಪ್ರಮಾಣ ಶೇಕಡಾ ೬೫.೪೬ ಆಗಿದೆ. ಮಹಿಳೆಯರಿಗಿರುವ ಉದ್ಯೋಗಾವಕಾಶಗಳ ಬಗ್ಗೆ ಹೇಳುವುದಾದರೆ, ನಗರ ಪ್ರದೇಶದಲ್ಲಿ ಶೇಕಡಾ ೦.೩ರಷ್ಟಿದೆ. ೨೦ ವರ್ಷಗಳ ಹಿಂದೆ ಅದು ಶೇಕಡಾ ೮ ರಷ್ಟಿದ್ದು, ಒಟ್ಟಾರೆ ಮಹಿಳಾ ಉದ್ಯೋಗಿಗಳ ಸಂಖ್ಯೆ ಶೇಕಡಾ ೪ ಕ್ಕಿಂತ ಕಡಿಮೆಯಾಗಿದೆ.

ಕೃಷಿ ವಲಯದಲ್ಲೂ ಮಹಿಳೆಯರು ಪ್ರಮುಖ ಪಾತ್ರವನ್ನು ವಹಿಸುತ್ತಾರೆ. ಕೃಷಿಯನ್ನು ಜೀವನದ ನಿರ್ವಹಣೆಗಾಗಿ ಕೈಗೊಳ್ಳುವವರೆಗೆ ಕುಟುಂಬವು ಸ್ತ್ರೀ ಪ್ರಧಾನವಾಗಿತ್ತು. ಕೃಷಿಯು ಕುಟುಂಬದ ಮಿತಿಯನ್ನು ಮೀರಿ ಮಾರುಕಟ್ಟೆಗೆ ವಿಸ್ತೃತಗೊಂಡ ಹಾದಿ ಅದು ಪುರುಷ ಪ್ರಧಾನವಾಗಿ ಪರಿವರ್ತನೆಹೊಂದಿತ್ತೆನ್ನಬಹುದು. ಮಾತ್ರವಲ್ಲ, ಸ್ತ್ರೀ-ಪುರುಷರ ಕೆಲಸದಲ್ಲಿ ತಾರತಮ್ಯ ಉಂಟಾಗಲಾರಂಬಿಸಿತು. ಕೈಗಾರಿಕೆಗಳು ಬೆಳೆದಂತೆ ಪುರುಷರು ಪ್ರಮುಖ ದುಡಿಮೆಗಾರರೆನಿಸಿದರೆ, ಸ್ತ್ರೀಯರು ಪೂರಕ ದುಡಿಮೆಗಾರರೆನಿಸಿಕೊಂಡರು. ಕೃಷಿ ಮತ್ತು

ಕೃಷಿಯೇತರ ಚಟುವಟಿಕೆಗಳಿಗೂ ಮಹಿಳೆಯರು ಹೆಚ್ಚಿನ ಮಹತ್ವವನ್ನು ನೀಡುತ್ತಾರೆ. ಆಫ್ರೀಕಾದಲ್ಲಿ ಶೇಕಡಾ ೭೮ರಷ್ಟು ಮಹಿಳೆಯರು ಕೃಷಿಯಲ್ಲಿ ಭಾಗವಹಿಸಿದರೆ, ಶೇಕಡಾ ೮೦ರಷ್ಟು ಮಹಿಳೆಯರು ಏಷ್ಯಾದಲ್ಲಿ ಮತ್ತು ಶೇಕಡಾ ೨೫ರಿಂದ ೪೦ರಷ್ಟು ಮಹಿಳೆಯರು ಲ್ಯಾಟಿನ್ ಅಮೇರಿಕಾದಲ್ಲಿ ಬಾಗವಹಿಸುತ್ತಾರೆ. ಆದರೆ, ಗ್ರಾಮೀಣ ಪ್ರದೇಶದಲ್ಲಿ ಮಹಿಳೆಯರು ಕೃಷಿ ವಲಯದಲ್ಲಿ ಹಲವಾರು ರೀತಿಯ ತಾರತಮ್ಯಗಳಿಗೆ ಒಳಗಾಗುತ್ತಾರೆ. ಉದಾಹರಣೆಗೆ, ಲಿಂಗತಾರತಮ್ಯ, ಸಮಾನ ಅವಧಿಯ ಕೆಲಸಕ್ಕೆ ಪುರುಷರಿಗೆ ಹೆಚ್ಚು ಸಂಬಳ ಹಾಗೂ ಮಹಿಳೆಯರಿಗೆ ಕಡಿಮೆ ಸಂಬಳ ಇತ್ಯಾದಿ. ಸ್ತ್ರೀ ಶೋಷಣೆ ಐತಿಹಾಸಿಕ ಸತ್ಯ. ಲಿಂಗತಾರತಮ್ಯ ಮತ್ತು ಸ್ತ್ರೀಶಕ್ತೀಕರಣ ಕ್ಲೀಷೆ ಎನಿಸಿದರೂ, ಅವರ ಬೇಡಿಕೆ ಮತ್ತು ನಮ್ಮೆಲ್ಲರ ಅಗತ್ಯ.

ಮಹಿಳೆಯರು ಮಾಡುವ ಅನೇಕ ಕೆಲಸಗಳು ಕಣ್ಣಿಗೆ ಗೋಚರಿಸದೇ ಇರುವಂತಹವು ಮಾತ್ರವಲ್ಲದೆ, ಆರ್ಥಿಕ ಚಟುವಟಿಕೆಗಳು ಮಾರುಕಟ್ಟೆಗೆ ಸಂಬಧಪಟ್ಟಿವೆ. ಪುರುಷರು ಮಾರುಕಟ್ಟೆ ವ್ಯವಹಾರದಲ್ಲಿ ಮಹತ್ತರವಾದ ಪಾತ್ರವನ್ನು ವಹಿಸುತ್ತಾರೆ. ಮಹಿಳೆಯರು ಹೆಚ್ಚಾಗಿ ಮನೆವಾರ್ತೆಯನ್ನು ನೋಡಿಕೊಳ್ಳುವುದು ಮಾತ್ರವಲ್ಲದೆ, ಕೃಷಿ ಮತ್ತು ಅದಕ್ಕೆ ಸಂಬಂಧಪಟ್ಟ ಚಟುವಟಿಕೆಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಳ್ಳುವುದು, ಇತ್ಯಾದಿ. ಆದರೂ, ಅವರು ಮಾಡುವ ಕೆಲಸಗಳು ಕಣ್ಣಿಗೆ ಗೋಚರಿಸದೇ ಇರುವುದರಿಂದ ಮಾರುಕಟ್ಟೆ ವ್ಯಾಪ್ತಿಗೆ ಬರುವುದಿಲ್ಲ. ದಿನದಲ್ಲಿ ಮಹಿಳೆಯರು ಹೆಚ್ಚು ಗಂಟೆಗಳ ಕಾಲ ದುಡಿಯುತ್ತಾರೆ ಮತ್ತು ಅವರ ಕೆಲಸಗಳು ಪುರುಷರಿಗಿಂತ ಹೆಚ್ಚು ತ್ರಾಸದಾಯಕವಾಗಿರುತ್ತದೆ. ಜೀವನೋಪಾಯಕ್ಕಾಗಿ ಬೇಸಾಯವಾಗಿರಲಿ ಇಲ್ಲವೆ ವಾಣಿಜ್ಯ ಆಧಾರಿತ ಬೇಸಾಯವೇ ಆಗಿರಲಿ, ಕೃಷಿಯಲ್ಲಿ ಮಹಿಳೆಯರ ಕೊಡುಗೆ ಅಪಾರವಾದುದು. ಪುರುಷರ ಹೆಚ್ಚಿನ ಕೃಷಿ ಕೆಲಸಗಳು ಪ್ರಾಣಿಗಳನ್ನು, ಯಾಂತ್ರಿಕ ಅಥವಾ ವಿದ್ಯುತ್ ಶಕ್ತಿಯನ್ನು ಉಪಯೋಗಿಸುವಂಯದ್ದಾಗಿದ್ದರೆ, ಮಹಿಳೆಯರದ್ದು ಹೆಚ್ಚಾಗಿ ದೈಹಿಕ ಶ್ರಮವನ್ನು ಅವಲಂಬಿಸಿದೆ. ಭತ್ತದ ಬೇಸಾಯದಲ್ಲಿ ಹೆಚ್ಚು ಕಷ್ಟದಾಯಕವಾದ ಮತ್ತು ಶ್ರಮ ಆಧಾರಿತ ಕೆಲಸವಾದ ನಾಟಿ ಮಾಡುವುದನ್ನು ಸಂಪೂರ್ಣವಾಗಿ ಮಹಿಳೆಯರೇ ಯಾವುದೇ ಸಲಕರಣೆಗಳ ಸಹಾಯವಿಲ್ಲದೆ ನಿರ್ವಹಿಸುತ್ತಾರೆ. ಆದುದರಂದ ಅವರ ಕೆಲಸವನ್ನು ಕೌಶಲ್ಯರಹಿತ ಮತ್ತು ಕಡಿಮೆ ಉತ್ಪಾದಕ ಎಂದು ಪರಿಗಣಿಸಲಾಗುತ್ತದೆ. ಹಾಗಾಗಿ ಮಹಿಳೆಯರು ಪುರುಷರಿಗಿಂತ ಹೆಚ್ಚು ಸಮಯ ಕಠಿಣ ದುಡಿಮೆ ಮಾಡಿದರೂ ಅವರಿಗೆ ಕಡಿಮೆ ಸಂಬಳ ನೀಡಲಾಗುತ್ತದೆ.

ಮಹಿಳೆಯರು ದುಡಿಯುವಂತಹ ಕ್ಷೇತ್ರಗಳಲ್ಲಿ ತಂತ್ರಜ್ಞಾನವನ್ನು ಪರಿಚಯಿಸಿದಾಗ ಮಹಿಳಾ ಕಾರ್ಮಿಕರಿಗೆ ಕೆಲಸ ತಪ್ಪಿ ಹೋಗಿ ಪುರುಷರಿಗೆ ಉದ್ಯೋಗ ಸೃಷ್ಟಿಯಾಗುತ್ತದೆ. ಅಂದರೆ ಹಿಂದೆ ಸಾಂಪ್ರದಾಯಿಕವಾಗಿ ಮಹಿಳೆಯರೇ ನಿರ್ವಹಿಸುತ್ತಿದ್ದ ಕೆಲಸಗಳು ಇಂದು ಯಾಂತ್ರೀಕರಣದಿಂದಾಗಿ ಪುರುಷರ ಪಾಲಾಗಿದೆ. ದೈಹಿಕ ಶ್ರಮಕ್ಕೆ ಬದಲಾಗಿ ತಂತ್ರಜ್ಞಾನಕ್ಕೆ ಹೆಚ್ಚಿನ ಪ್ರಾಧಾನ್ಯತೆ ನೀಡಿರುವುದರಿಂದ ಮಹಿಳೆಯರ ಪಾಲ್ಗೊಳ್ಳುವಿಕೆ, ಕೌಶಲ್ಯ ಮತ್ತು ಜ್ಞಾನವನ್ನು ಕಡೆಗಣಿಸಲಾಗಿದೆ. ಹಿಂದೆ ಕೃಷಿ ಉತ್ಪನ್ನಗಳನ್ನು ಇತರ ಸರಕುಗಳೊಂದಿಗೆ ವಿನಿಮಯ ಮಾಡಿಕೊಳ್ಳುವ ಸ್ವಾತಂತ್ರ್ಯವನ್ನು ಹೊಂದಿದ್ದರು. ಆದರೆ, ಇತ್ತೀಚೆಗೆ ವಿದೇಶೀ ಸಹಭಾಗಿತ್ವದಿಂದಾಗಿ ವಾಣಿಜ್ಯ ಬೆಲೆಯಾಧಾರಿತ ಕೃಷಿಯನ್ನು ವ್ಯಾಪಕವಾಗಿ ಅನುಸರಿಸಲಾಗುತ್ತಿದೆ. ಇದರಿಂದಾಗಿ, ಗ್ರಾಮೀಣ ಮಹಿಳೆಯರು ತಮ್ಮ ಸಾಂಪ್ರದಾಯಿಕ ವೃತ್ತಿಯನ್ನು ಕಳೆದುಕೊಳ್ಳುತ್ತಾರೆ. ಅನಕ್ಷರತೆ, ಅಲ್ಪಶಿಕ್ಷಣ ಮತ್ತು ಅವರ ಬಗ್ಗೆ ಇರುವ ಪೂರ್ವಾಗ್ರಹ ಪೀಡಿತ ನಿಲುವುಗಳು ಮಹಿಳೆಯರ ಕೌಶಲ್ಯ ಅಭಿವೃದ್ಧಿಗೆ ಇರುವ ಪ್ರಮುಖ ಅಡ್ಡಿಗಳಾಗಿವೆ.

ದೇಶದಲ್ಲಿ ಒಟ್ಟು ಮಹಿಳಾ ಜನಸಂಖ್ಯೆಯಲ್ಲಿ ಗ್ರಾಮೀಣ ಮಹಿಳೆಯರ ಪಾಲು ಹೆಚ್ಚು ಕಡಿಮೆ ಶೇಕಡಾ ೭೫ರಷ್ಟಿದೆ. ಆದರೆ, ನಗರ ಪ್ರದೇಶಗಳ ಮಹಿಳೆಯರಿಗೆ ಹೋಲಿಸಿದರೆ, ಗ್ರಾಮೀಣ ಪ್ರದೇಶದ ಮಹಿಳೆಯರು ಹೆಚ್ಚಿನ ಎಲ್ಲಾ ಸೌಲಭ್ಯಗಳಿಂದ ವಂಚಿತರಾಗಿದ್ದಾರೆ. ಹೆಚ್ಚಿನ ಎಲ್ಲಾ ಗ್ರಾಮೀಣ ಮಹಿಳೆಯರು ಬಡವರೂ, ಮುಗ್ಧರೂ, ಅನಕ್ಷರಸ್ಥರೂ ಮತ್ತು ತುಳಿತಕ್ಕೊಳಗಾದವರಾಗಿದ್ದಾರೆ. ಗ್ರಾಮೀಣ ಮಹಿಳೆಯರು ಅಸಂಘಟಿತರಾಗಿದ್ದು ಸೂಕ್ತ ಪ್ರಾತಿನಿಧ್ಯವನ್ನು ಹೊಂದಿಲ್ಲ. ಗ್ರಾಮೀಣ ಮಹಿಳೆಯರಿಗೆ ತರಬೇತಿ ನೀಡುವುದರ ಮೂಲಕ ಹೆಚ್ಚು ಸಶಕ್ತರನ್ನಾಗಿಸಬಹುದು.

೧.೨. ಗ್ರಾಮೀಣ ಅಭಿವೃದ್ಧಿ

ದೇಶದ ಅಭಿವೃದ್ಧಿಯಲ್ಲಿ ಗ್ರಾಮೀಣ ಅಭಿವೃದ್ಧಿಯು ಮಹತ್ತರವಾದ ಪಾತ್ರವನ್ನು ವಹಿಸುತ್ತದೆ. ಹೆಚ್ಚು ಗ್ರಾಮೀಣ ಪ್ರದೇಶಗಳನ್ನೊಳಗೊಂಡಿರುವುದರಿಂದ, ಭಾರತವು ಹಳ್ಳಿಗಳ ನಾಡು ಎಂಬ ಬಿರುದು ಪಡೆದುಕೊಂಡಿದೆ. ಸುಮಾರು ಶೇಕಡಾ ೮೨.೫ರಷ್ಟು ಮಹಿಳೆಯರು ಗ್ರಾಮೀಣ ಪ್ರದೇಶದಲ್ಲಿ ವಾಸಿಸುತ್ತಿದ್ದಾರೆ. ಶೇಕಡಾ ೬೮ರಷ್ಟು ಜನರು ಕೃಷಿಯನ್ನು ತಮ್ಮ ಉದ್ಯೋಗವನ್ನಾಗಿರಿಸಿಕೊಂಡಿರುವುದರಿಂದ ಇಲ್ಲಿ ಕೃಷಿಯು ಅರ್ಥವ್ಯವಸ್ಥೆಯ ಬೆನ್ನೆಲುಬಾಗಿದೆ

ಹಾಗೂ ರಾಷ್ಟ್ರೀಯ ಆದಾಯದಲ್ಲಿಯೂ ಪ್ರಮುಖ ಪಾತ್ರವಹಿಸುತ್ತಿದೆ. ಕೃಷಿಯಲ್ಲಿನ ಹೆಚ್ಚಿನ ಚಟುವಟಿಕೆಗಳು ಮಹಿಳೆಯರನ್ನು ಆಧರಿಸಿರುವುದರಿಂದ ಕೃಷಿಯಲ್ಲಿ ಮಹಿಳೆಯರು ಕೇಂದ್ರ ಬಿಂದುವಾಗಿದ್ದಾರೆ.

ಬ್ಲೇಕ್ಲಿ(೧೯೮೮), ಅವರ ಪ್ರಕಾರ ಗ್ರಾಮೀಣ ಎಂದರೆ, "ಈ ಮೊದಲೇ ಗ್ರಾಮೀಣ ಪ್ರದೇಶವನ್ನು ಅರ್ಥೈಸಲು ಬಳಸಲಾದ ಪ್ರಮುಖ ಲಕ್ಷಣಗಳು- ಸಾಮಾನ್ಯ ಜೀವನ, ಕೃಷಿ, ಮಂದ ಬುದ್ಧಿ, ಸಮಾನತೆ ಮತ್ತು ಸಣ್ಣತನ."

ಡೇವರ್ಸ್ ಮತ್ತು ಬ್ರೌನ್(೧೯೮೫) ರವರು "ಗ್ರಾಮೀಣ ಪ್ರದೇಶವನ್ನು ಸಾಮಾಜಿಕ, ಭೌಗೋಳಿಕ ಮತ್ತು ಆರ್ಥಿಕ ವಿಷಯಗಳ ಆಧಾರದ ಮೇಲೆ ೭ ವಿಭಾಗಗಳನ್ನಾಗಿ ವರ್ಗೀಕರಿಸಿದ್ದಾರೆ. ಆರ್ಥಿಕ ವಿಷಯವು ಕೃಷಿ, ಉತ್ಪಾದನೆ, ಗಣಿಗಾರಿಕೆ ಮತ್ತು ನಿವೃತ್ತ ಜನರ ಅಭಿವೃದ್ಧಿ ಎಂದೂ, ಭೌಗೋಳಿಕ ವಿಷಯವು ಸಂಯುಕ್ತವಾಗಿದ್ದರೂ, ರಾಜ್ಯಗಳ ಒಳ ಆಡಳಿತದಲ್ಲಿ ಸ್ವತಂತ್ರವಾದ ಒಡೆತನ ಹೊಂದಿರುವ ಸರಾಸರಿ ಭೂಮಿಯಾಗಿದೆ.

ಗ್ರಾಮೀಣ ಪ್ರದೇಶದ ಸುಮಾರು ಶೇಕಡಾ ೭೦ರಷ್ಟು ಜನರು ಭಾರತದ ಸುಸ್ಥಿರ ಅಭಿವೃದ್ಧಿಯಲ್ಲಿ ಪ್ರಮುಖ ಪಾತ್ರವಹಿಸುತ್ತಾರೆ. ಗ್ರಾಮೀಣ ಜನರ ಮುಖ್ಯ ಸಾಮರ್ಥ್ಯವೆಂದರೆ, ಕೃಷಿ ಮತ್ತು ಸಾಂಪ್ರಮುಖ ಪಾತ್ರವಹಿಸುತ್ತಾರೆ. ಗ್ರಾಮೀಣ ಜನರ ಮುಖ್ಯ ಸಾಮರ್ಥ್ಯವೆಂದರೆ, ಕೃಷಿ ಮತ್ತು ಸಾಂಸ್ಕೃತಿಕ ವೈವಿಧ್ಯತೆ. ಆದರೆ, ಗ್ರಾಮೀಣ ಜನರ ಪ್ರಮುಖ ಸಮಸ್ಯೆಯೆಂದರೆ, ಅನಕ್ಷರತೆ ಮತ್ತು ಉತ್ತಮ ರೀತಿಯ ತಾಂತ್ರಿಕ ಸೌಲಭ್ಯ ಇಲ್ಲದೆ ಇರುವುದು. ಸರಕಾರ ಈ ಬಗ್ಗೆ ಹೆಚ್ಚಿನ ನಿಗಾ ವಹಿಸಿದರೆ, ಗ್ರಾಮೀಣ ಪ್ರದೇಶವು ದೇಶಕ್ಕೆ ಮಾದರಿಯಾಗಿ ಪರಿಣಮಿಸುತ್ತದೆ.

ಗ್ರಾಮೀಣ ಜನರು ಎಂದ ಕೂಡಲೇ ಬಹಳಷ್ಟು ನಗರವಾಸಿಗಳ ಮನಸ್ಸಿನಲ್ಲಿ ತಕ್ಷಣ ಮೂಡುವುದು ಅನಾಗರಿಕರು, ಅನಕ್ಷರಸ್ಥರು, ಬುದ್ಧಿ ಇಲ್ಲದವರು, ಸಾಮಾನ್ಯಜ್ಞಾನ ಇಲ್ಲದವರು ಎಂಬ ಕಲ್ಪನೆ. ಆದರೆ ಗ್ರಾಮೀಣ ಜನರ ಸಾಧನೆಗಳು ಉತ್ತುಂಗ ಮಟ್ಟದಲ್ಲಿದ್ದು ಬಹಳಷ್ಟು ಮಂದಿ ಮೆರೆದವರೆಲ್ಲರೂ ಗ್ರಾಮೀಣ ಬದುಕಿನಿಂದಲೇ ಪ್ರಾರಂಬಿಸಿದವರು, ಎಂಬುದು ನಗರವಾಸಿಗಳಿಗೆ ಮನದಟ್ಟಾಗುವುದಿಲ್ಲ. ಗ್ರಾಮೀಣರು ಇಲ್ಲದಿದ್ದರೆ ನಗರವಾಸಿಗಳ ಜೀವನಸ್ಥಿತಿ ಊಹಿಸಲು ಸಾಧ್ಯವಿಲ್ಲ. ಅದರಲ್ಲೂ ಗ್ರಾಮೀಣ ಮಹಿಳೆಯರು ಅತ್ಯುತ್ತಮ ಆಡಳಿತಗಾರರಾಗಿ ತಮ್ಮ ಕೆಲಸಗಳನ್ನು ನಾನಾ ಪಾತ್ರದಲ್ಲಿ ನಿರ್ವಹಿಸುತ್ತಿದ್ದಾರೆ.

೧.೩. ಗ್ರಾಮೀಣ ಮಹಿಳೆ

ಭಾರತದ ಸಮಾಜದಲ್ಲಿ ಮಹಿಳೆಯು ಬಹುಮುಖ್ಯವಾದ ಪಾತ್ರವನ್ನು ವಹಿಸುತ್ತಾಳೆ ಮಾತ್ರವಲ್ಲದೆ, ಸುಮಾರು ಶೇಕಡಾ ೫೦ರಷ್ಟು ಮಹಿಳೆಯರು ಗ್ರಾಮೀಣ ಪ್ರದೇಶಗಳಲ್ಲಿ ವಾಸ ಮಾಡುತ್ತಾರೆ. ಸಾಮಾಜಿಕ, ರಾಜಕೀಯ ಹಾಗೂ ಆರ್ಥಿಕ ದೃಷ್ಟಿಯಿಂದ ಗ್ರಾಮೀಣ ಮಹಿಳೆಯರು ನಗರ ಪ್ರದೇಶದ ಮಹಿಳೆಯರಿಗಿಂತ ತೀರಾ ಹಿಂದುಳಿದಿದ್ದಾರೆ. ಭಾರತೀಯ ಸಂಪ್ರದಾಯದಂತೆ ಹೆಣ್ಣನ್ನು ದೇವತೆಗೆ ಹೋಲಿಸಲಾಗುತ್ತದೆ. ಆದರೂ ಅವರು ಸಾಮಾಜಿಕ ಪಿಡುಗುಗಳಿಗೆ ಬಲಿಯಾಗುತ್ತಾರೆ. ಭಾರತೀಯ ಸಂವಿಧಾನ ಮಹಿಳೆಯರಿಗೆ ಪುರುಷರೊಂದಿಗೆ ಸಮಾನವಾದ ಹಕ್ಕುಗಳನ್ನು ನೀಡಿದೆ. ಆದರೆ, ಪುರುಷ ಪ್ರಧಾನ ಸಂಪ್ರದಾಯಗಳು ಅಸ್ತಿತ್ವದಲ್ಲಿರುವ ಈ ಸಮಾಜದಲ್ಲಿ ಮಹಿಳೆಯರ ಜೀವನಶೈಲಿಯನ್ನು ಶತಮಾನಗಳಷ್ಟು ಹಳೆಯದಾದ ರೂಡಿ ರಿವಾಜುಗಳು ನಿರ್ಧರಿಸುತ್ತದೆ. ಹೆಚ್ಚಿನ ಭಾರತೀಯ ಕುಟುಂಬಗಳಲ್ಲಿ ಹೆಣ್ಮಕ್ಕಳನ್ನು ಒಂದು ಹೊರೆಯೆಂದೇ ಭಾವಿಸಲಾಗುತ್ತದೆ ಮತ್ತು ಅವರು ಪುರುಷರಿಗೆ ಅಡಿಯಾಳಾಗಿರಬೇಕೆಂದು ತಿಳಿಸಲಾಗುತ್ತದೆ. ಮಹಿಳೆಯರು ಪುರುಷರ ಜೀವನದ ಒಂದು ಭಾಗದಂತೆಯೇ ಕೆಲಸ ಮಾಡುವರು. ಪುರುಷರಿಗೆ ಅಧೀನರಾಗಿ, ವಿಧೇಯರಾಗಿ, ಸಂಪೂರ್ಣವಾಗಿ ಶರಣಾಗತರಾಗಿ ಅವರು ನಡೆದುಕೊಳ್ಳುತ್ತಾರೆ. ಭಾರತೀಯ ಪರಂಪರೆಯಲ್ಲಿ ವೈಭವೀಕರಿಸಲಾಗಿರುವ 'ಪಾತಿವ್ರತ್ಯ'ದ ಕಲ್ಪನೆಯು ಅವರಿಗೆ ಅರ್ಥವಾಗಿದೆ; ಎನ್ನುವುದಕ್ಕಿಂತ ಅದನ್ನು ಮೌನವಾಗಿ ಸ್ವೀಕರಿಸಿದವರಂತೆ ಅವರು ನಡೆದುಕೊಳ್ಳುವರು. ಮಹಿಳೆಯರು ಕುಟುಂಬದ ಬೆನ್ನೆಲುಬಿದ್ದಂತೆ. ಕುಟುಂಬದ ನಿತ್ಯ ವ್ಯವಹಾರಗಳಿಗಾಗಿ ತಮ್ಮ ಜೀವನವನ್ನು ಬಿಡುವಿಲ್ಲದಂತೆ ತೇಯುವರು. ಗೃಹಕೃತ್ಯಗಳನ್ನು ಪುರುಷರು ಹಂಚಿಕೊಂಡು ಮಾಡುವ ಕ್ರಮವೇ ಭಾರತದ ಗ್ರಾಮಗಳಲ್ಲಿಲ್ಲವಾದ್ದರಿಂದ ಅದು ಸಂಪೂರ್ಣವಾಗಿ ಸ್ತ್ರೀಯರಕೆಲಸವೇ ಆಗಿರುತ್ತದೆ. ಆಹಾರ, ನೀರು, ಉರುವಲು, ಮೇವು ಮತ್ತು ಆರೋಗ್ಯ ಸೌಲಭ್ಯಗಳ ಕೊರತೆ ಗ್ರಾಮೀಣ ಮಹಿಳೆಯರು ಎದುರಿಸುತ್ತಿರುವ ಪ್ರಮುಖ ಸಮಸ್ಯೆಗಳಾಗಿವೆ. ಇದಲ್ಲದೆ, ನೈಸರ್ಗಿಕ ಪರಿಸರದ ಅವನತಿಯಿಂದಾಗಿ ಮತ್ತು ಜಾಗತೀಕರಣದ ಹೊಡೆತದಿಂದಾಗಿ ಹಲವಾರು ಸಾಂಪ್ರದಾಯಿಕ ವೃತ್ತಿಗಳು ನಶಿಸುತ್ತಿರುವುದರಿಂದ ಮಹಿಳೆಯರಿಗೆ ತಮ್ಮ ಕುಟುಂಬವನ್ನು ಸಲಹುವುದು ಪ್ರಸ್ತುತ ಕಷ್ಟಸಾಧ್ಯವಾದ ಮಾತಾಗಿದೆ.

ಪುರುಷ ಪ್ರಧಾನ ಸಮಾಜದಲ್ಲಿ ಪುರುಷರಿಗೆ ಅಡಿಯಾಳಾಗಿ ಬದುಕುವ ಮಹಿಳೆಯರು ತಮ್ಮ ಭಾವನೆಗಳನ್ನು ತಮ್ಮ ಕುಟುಂಬದ ಸದಸ್ಯರೊಂದಿಗೆ ಹಾಗೂ ಸಮಾಜದ ಇತರರೊಡನೆ

ಮುಕ್ತವಾಗಿ ಚರ್ಚಿಸಲು ಅವಕಾಶವಿಲ್ಲ. ಗ್ರಾಮೀಣ ಸಮಾಜದಲ್ಲಿ ನಡೆಯುವ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ಮಹಿಳೆಯರಿಗೆ ಅವಕಾಶವಿಲ್ಲ. ಅವರು ಮನೆಯ ನಾಲ್ಕು ಗೋಡೆಗಳ ಮಧ್ಯೆಯೇ ಇರಬೇಕು. ಆದರೆ, ಬುಡಕಟ್ಟು ಜನಾಂಗದ ಮಹಿಳೆಯರು ತಮ್ಮ ಪುರುಷರೊಂದಿಗೆ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸುವ ಮತ್ತು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುವ ಪೂರ್ಣಸ್ವಾತಂತ್ರ್ಯವನ್ನು ಹೊಂದಿರುತ್ತಾರೆ.

ಗ್ರಾಮೀಣ ಮಹಿಳೆಯು ಕೃಷಿಯಲ್ಲಿ ಪ್ರಮುಖವಾದ ಪಾತ್ರವನ್ನು ವಹಿಸುತ್ತಾಳೆ. ಆಕೆ ಪುರುಷರಿಗಿಂತ ಭಿನ್ನವಾಗಿ ಮನೆಯಲ್ಲಿ ಹಾಗೂ ಕೃಷಿಕ್ಷೇತ್ರದಲ್ಲಿ ತನ್ನನ್ನು ತಾನು ಸಕ್ರೀಯವಾಗಿ ತೊಡಗಿಸಿಕೊಳ್ಳುತ್ತಾಳೆ. ಮನೆಯಲ್ಲಿ ಮಾಡುವ ಕೆಲಸಗಳು ಹಲವಾರು ರೀತಿಯವು. ಅವುಗಳು ಮನೆಯ ಒಳಗೆ ಹಾಗೂ ಹೊರಗೆ ಶುಚಿಗೊಳಿಸುವ ಕೆಲಸ, ಅಡುಗೆ ಸಿದ್ಧಪಡಿಸುವುದು, ಶಿಶುಗಳ ಹಾಗೂ ಮನೆಯವರ ಪೋಷಣೆ ಹಾಗೂ ಇನ್ನಿತರ ಆದಾಯವಿಲ್ಲದ ದುಡಿಮೆಗಳು. ಕೃಷಿಯಲ್ಲಿ ಕಟಾವು ಮಾಡುವ ಚಟುವಟಿಕೆಗಳು ಪ್ರಾರಂಭವಾದಾಗ, ಕೃಷಿ ಕುಟುಂಬದ ಮಹಿಳೆಯರು ದಿನದಲ್ಲಿ ಮನೆಕೆಲಸ ಮಾತ್ರವಲ್ಲದೆ, ಸುಮಾರು೭ ರಿಂದ ೮ ಗಂಟೆಯ ಕಾಲ ಕೃಷಿ ಭೂಮಿಯಲ್ಲಿ ದುಡಿಯುತ್ತಾರೆ. ಕೃಷಿ ಚಟುವಟಿಕೆಗಳಲ್ಲಿ ಮಹಿಳೆಯರ ಸಹಭಾಗಿತ್ವ ಪ್ರಮುಖವಾದುದ್ದಾಗಿದೆ. ಶೇಕಡಾ ೬೩ರಷ್ಟು ಪುರುಷರು ಕೃಷಿ ಚಟುವಟಿಕೆಯಲ್ಲಿ ಸಹಭಾಗಿಗಳಾಗಿದ್ದರೆ, ಸರಿಸುಮಾರು ಶೇಕಡಾ ೭೮ರಷ್ಟು ಮಹಿಳೆಯರ ಸಹಭಾಗಿತ್ವವನ್ನು ಕಾಣಬಹುದು. ಅದರಲ್ಲೂ, ಗ್ರಾಮೀಣ ಪ್ರದೇಶದ ಮಹಿಳೆಯರಲ್ಲಿ ಶೇಕಡಾ ೫೦ರಷ್ಟು ಮಂದಿ ಕೃಷಿ ಕಾರ್ಮಿಕರಾದರೆ, ಶೇಕಡಾ ೩೭ರಷ್ಟು ಮಂದಿ ಕೃಷಿ ಉತ್ಪಾದಕರು.

ಗ್ರಾಮೀಣ ಮಹಿಳೆಯರ ಸಮಸ್ಯೆಗಳು ಅವರು ವಾಸಿಸುವ ಪರಿಸರವನ್ನು ಹೊಂದಿಕೊಂಡಿದೆ. ದೇಶದ ಪ್ರತಿಯೊಂದು ಗ್ರಾಮಗಳೂ ಒಂದಕ್ಕಿಂತ ಇನ್ನೊಂದು ಭಿನ್ನವಾಗಿದೆ. ಆಯಾ ಹವಾಮಾನಕ್ಕನುಸಾರವಾಗಿ ಅಲ್ಲಲ್ಲಿ ಬೆಳೆಯುವ ಮುಖ್ಯ ಬೆಳೆಗಳನ್ನು ಅವಲಂಬಿಸಿಕೊಂಡು ಮಹಿಳೆಯರ ಬದುಕೂ ಅವರ ದುಡಿತವೂ ರೂಪುಗೊಂಡಿದೆ. ಮಾತ್ರವಲ್ಲದೆ, ಆರ್ಥಿಕ ಪರಿಸ್ಥಿತಿಗಳು, ಆಯಾಯ ಗ್ರಾಮದ ವಾತಾವರಣದಿಂದಾಗಿ ಎಲ್ಲಾ ಗ್ರಾಮಗಳ ಮಹಿಳೆಯರ ಜೀವನ ಕ್ರಮ ಒಂದೇ ತೆರನಾಗಿಲ್ಲ. ವೇಷಭೂಷಣ, ನಡೆ-ನುಡಿ, ಆಹಾರ, ಜೀವನಕ್ರಮ, ದೇವರು, ಆಚಾರ-ವಿಚಾರ, ರೀತಿ-ನೀತಿ, ಧರ್ಮ, ಜಾತಿ, ಸಂಸ್ಕೃತಿಗಳಲ್ಲಿ ಬಹಳಷ್ಟು ವ್ಯತ್ಯಾಸವಿರುವುದರಿಂದ ಒಂದು ಗ್ರಾಮವನ್ನು ಇನ್ನೊಂದು ಗ್ರಾಮಕ್ಕೆ ಹೋಲಿಸಲು ಸಾಧ್ಯವಿಲ್ಲ. ಆದರೆ, ಗ್ರಾಮೀಣ ಮಹಿಳೆಯರ ಆಶೋತ್ತರಗಳು, ಆರ್ಥಿಕ

ಕಷ್ಟಗಳು, ಅನಕ್ಷರತೆ, ಎದುರಿಸುತ್ತಿರುವ ಬಡತನ ಇವೆಲ್ಲಾ ಒಂದೇ ರೀತಿಯದ್ದಾಗಿವೆ. ನಗರಗಳು ಬದಲಾಗಿದ್ದರೂ ಗ್ರಾಮೀಣ ಮಹಿಳೆಯರಲ್ಲಿ ಅಂಧಶ್ರದ್ಧೆ, ಅಜ್ಞಾನ, ಮೌಢ್ಯ ಹಾಗೆಯೇ ಉಳಿದುಕೊಂಡಿದೆ. ನೋಡಲು ಗ್ರಾಮೀಣ ಪ್ರದೇಶವು ಶಾಂತವಾತವರಣದಿಂದ ಕೂಡಿದ್ದರೂ, ಅಲ್ಲಿಯ ಕಠಿಣ ದುಡಿಮೆ, ಬೆಳೆಗಳ ನಷ್ಟ, ಕುಡಿಯುವ ನೀರಿನ ಕಷ್ಟ, ನಡೆಯುವ ಅಂತರಿಕ ಕಲಹಗಳು, ಕುಟುಂಬಗಳ ವೈಮನಸ್ಯ, ನೆರೆಹೊರೆಗಳಲ್ಲಿ ಘರ್ಷಣೆಗಳು ಇತ್ಯಾದಿ, ಎಲ್ಲವೂ ಮಹಿಳೆಯರ ಮನಸ್ಸಿನ ಮೇಲೆ ಗಾಢವಾಗಿ ಪ್ರಭಾವ ಬೀರುತ್ತದೆ. ನಗರದ ಮಹಿಳೆಯರಿಗೆ ದೊರೆಯುವ ಸೌಕರ್ಯ, ಸೌಲಭ್ಯಗಳಿಂದ ಇವರು ವಂಚಿತರು. ಇಂದು ಗ್ರಾಮ ಪ್ರದೇಶಗಳಲ್ಲಿ ಶೇಕಡಾ ೭೦ ರಷ್ಟು ಮಹಿಳೆಯರು ಹೊರ ಕೆಲಸಗಳಲ್ಲಿ ಅಂದರೆ ಕೂಲಿಯಾಗಿ ದುಡಿಯುವರು.

ಭಾರತದಲ್ಲಿ ಸುಮಾರು ಶೇಕಡಾ ೪೮ ರಷ್ಟು ಮಹಿಳೆಯರಿದ್ದು ಸಾಮಾಜಿಕ, ರಾಜಕೀಯ ಹಾಗೂ ಆರ್ಥಿಕ ಅಭಿವೃದ್ಧಿಯಲ್ಲಿ ಸಮಾನವಾಗಿ ಬಾಗವಹಿಸಿ ದೇಶದ ಸುಸ್ಥಿರ ಅಭಿವೃದ್ಧಿಯಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತಾಳೆ. ಹೊರದುಡಿತವಲ್ಲದೆ, ಮನೆಯಲ್ಲಿಯೇ ಕುಳಿತು ನಿರ್ವಹಿಸಬಹುದಾದ, ಆರ್ಥಿಕ ಅಭಿವೃದ್ಧಿಗೆ ಪ್ರಯೋಜನಕಾರಿಯಾಗುವಂತಹ ಅನೇಕ ಉದ್ಯೋಗಗಳು ಗ್ರಾಮಗಳಲ್ಲಿ ಇವೆ. ಇಂದು ಕೂಡ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬೀಡಿಕಟ್ಟುವ ವೃತ್ತಿ ಅನೇಕ ಅನಕ್ಷರಸ್ಥ ಮಹಿಳೆಯರಿಗೆ ದೊಡ್ಡ ವರದಾನವಾಗಿದ್ದು, ಲಕ್ಷಾಂತರ ಕುಟುಂಬಗಳ ಜೀವನ ನಿರ್ವಹಣೆಗೆ ಸಹಕಾರಿಯಾಗಿದೆ. ಕಿರುಹಣಕಾಸು ಮತ್ತು ಕಿರುಉದ್ದಿಮೆ/ಉದ್ದಿಮೆಶೀಲತೆಗಳ ಮೂಲಕ – ಒಂದು ರಾಚನಿಕ ಬದಲಾವಣೆ ಪ್ರಾರಂಭಗೊಂಡಿರುವುದೂ ಸತ್ಯ. ಶಿಕ್ಷಣ, ಜ್ಞಾನ, ಕೌಶಲ್ಯ, ತರಬೇತಿ, ಮಾರ್ಗದರ್ಶನ, ಅನುಭವ, ನಾಯಕತ್ವದಿಂದೊಡಗೂಡಿ ಇಂಥ ಪ್ರಯತ್ನಗಳು ಯಶಸ್ವಿಯಾಗುತ್ತವೆ. ಹಲವೆಡೆ ಸ್ತ್ರೀಯರಿಗೆ ಸ್ತ್ರೀಯರೇ ಮಾದರಿ ಆಗಿದ್ದಾರೆ. ಮೇಲ್ಮುಖ ಚಲನೆ, ಸಮಾನತೆ, ಸ್ವಾವಲಂಬನೆಯ ಒಟ್ಟು ಪರಿಣಾಮವೆಂದರೆ ಮಾನವ ಸಂಪನ್ಮೂಲ ಅಭಿವೃದ್ಧಿ ಮತ್ತು ಸೇರ್ಪಡೆಯುಳ್ಳ ಬೆಳವಣಿಗೆಗೆ ಚಾಲನೆ ಇತ್ತು. ಆಧುನಿಕ ಯುಗದಲ್ಲಿ ಹಿಂದಿನಿಂದ ಬಂದ ಮಡಕೆ ಮಾಡುವ, ಮಣ್ಣಿನ ಗೊಂಬೆಗಳನ್ನು ತಯಾರಿಸುವ, ಬಿದಿರಿನ ಬುಟ್ಟಿಗಳನ್ನು ತಯಾರಿಸುವ ಉದ್ಯಮ ಕುಸಿದು ಬಿದ್ದು, ಈ ಉದ್ಯಮಗಳನ್ನು ನಂಬಿಕೊಂಡಿದ್ದ ಕುಟುಂಬಗಳೆಲ್ಲ ಶೋಚನೀಯ ಸ್ಥಿತಿಯಲ್ಲಿವೆ. ಗ್ರಾಮೀಣ ಪ್ರದೇಶಗಳಲ್ಲಿ ಬೆಳೆಯುವ ಹಣ್ಣು-ಹಂಪಲು, ಹೂವು, ತರಕಾರಿಗಳಿಗೆ ಬರುವ ಹಲವಾರು ರೋಗಗಳು, ಹೊರಪೇಟೆಯಲ್ಲಿ ಸರಿಯಾದ ದರ ಇಲ್ಲದಿರುವುದು,

ನಗರಗಳಿಗೆ ಸರಿಯಾದ ರಸ್ತೆ ಇಲ್ಲದಿರುವುದರಿಂದ ಬೆಳೆಸಿದ ವಸ್ತುಗಳು ಪೋಲಾಗುತ್ತದೆ. ಈ ಎಲ್ಲಾ ಕಾರಣಗಳಿಂದಾಗಿ ಮಹಿಳೆಯರು ಹಲವಾರು ರೀತಿಯ ಸಮಸ್ಯೆಗಳನ್ನು ಎದುರಿಸುತ್ತಾರೆ. ಗ್ರಾಮೀಣ ಪ್ರದೇಶದಲ್ಲಿ ಮಹಿಳೆಯರು ಪುರುಷರಿಗಿಂತ ಕಡಿಮೆ ಆರೋಗ್ಯ ರಕ್ಷಣೆ ಪಡೆಯುತ್ತಾರೆ. ರೋಗದ ಆರಂಭಿಕ ಹಂತದಲ್ಲಿ ಸುಮ್ಮನಿರುವ ಮಹಿಳೆಯರು ಅದು ಉಲ್ಬಣಿಸಿದಾಗ ಮಾತ್ರ ಆಸ್ಪತ್ರೆಗೆ ದಾಖಲಾಗುತ್ತಾರೆ. ಬಡತನವು ಗ್ರಾಮೀಣ ಮಹಿಳೆಯರ ಆರೋಗ್ಯದ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತದೆ. ಬಡ ಕುಟುಂಬಗಳಲ್ಲಿ ಲಾಲನೆ-ಪೋಷಣೆಯಲ್ಲಿ ಗಂಡು ಮತ್ತು ಹೆಣ್ಣು ಮಕ್ಕಳನ್ನು ಸಮಾನವಾಗಿ ಕಾಣಲಾಗುತ್ತದೆ. ಆದರೆ, ಬಡ ಕುಟುಂಬದ ಹೆಣ್ಣು ಮಕ್ಕಳಿಗೆ ಸಣ್ಣ ವಯಸ್ಸಿನಲ್ಲೇ ದುಡಿಯಬೇಕಾದ ಅನಿವಾರ್ಯತೆ ಇದೆ. ಇದು ಅವರ ಆರೋಗ್ಯ ಮತ್ತು ದೈಹಿಕ ಬೆಳವಣಿಗೆಯ ಮೇಲೆ ದುಷ್ಪರಿಣಾಮವನ್ನುಂಟುಮಾಡುತ್ತದೆ. ಭಾರತಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ತಾಯಂದಿರ ಮರಣ ದರವು ಜಗತ್ತಿನಲ್ಲಿಯೇ ಅತೀ ಹೆಚ್ಚಿನದು. ಸಾಂಕ್ರಾಮಿಕ ರೋಗ, ಅಪೌಷ್ಟಿಕತೆ, ಪ್ರಸವ ಕಾಲದ ಮತ್ತು ಪ್ರಸವ ಪೂರ್ವ ಕಾರಣಗಳು ಇದಕ್ಕೆ ಕಾರಣವಾಗಿವೆ. ಗ್ರಾಮೀಣ ಪ್ರದೇಶಗಳಲ್ಲಿ ಶೇಕಡಾ ೮೦ರಷ್ಟು ಹೆರಿಗೆಗಳು ಮನೆಯಲ್ಲಿ ಸಾಂಪ್ರದಾಯಿಕ ಸೂಲಗಿತ್ತಿಯರ ನೆರವಿನಿಂದ ಆಗುತ್ತದೆ. ಈ ರೀತಿಯ ಅವೈಜ್ಞಾನಿಕ ಹೆರಿಗೆ ಪದ್ಧತಿಯು ತಾಯಂದಿರಲ್ಲಿ ಮತ್ತು ನವಜಾತ ಶಿಶುಗಳಲ್ಲಿ ಸೋಂಕನ್ನು ಉಂಟುಮಾಡಬಲ್ಲುದು. ಕಡಿಮೆ ಆಹಾರ ಸೇವನೆ ಮತ್ತು ಹೆಚ್ಚು ದುಡಿಮೆಯಿಂದಾಗಿ, ಮಹಿಳೆಯರು ರಕ್ತಹೀನತೆಯಂತಹ ರೋಗಗಳಿಗೆ ತುತ್ತಾಗುತ್ತಾರೆ. ಶಿಶು ಮರಣ ದರದಲ್ಲಿ ಇಳಿಕೆಯಾಗಿದ್ದರೂ, ಅದರಲ್ಲಿ ಹೆನ್ನು ಶಿಶುಗಳದ್ದೇ ಬಹುಪಾಲು. ಇದರಿಂದಾಗಿ ಕಳೆದ ದಶಕದಿಂದೀಚೆಗೆ, ಹುಡುಗ ಮತ್ತು ಹುಡುಗಿಯರ ನಡುವಿನ ಮರಣ ದರದ ಅಂತರ ಹೆಚ್ಚುತ್ತಲೇ ಇದೆ. ಮಾತ್ರವಲ್ಲದೆ, ರಕ್ತಹೀನತೆಯಿಂದಾಗಿ ಮಹಿಳೆಯರು ಕ್ಷಯದಂತಹ ರೋಗಗಳಿಗೆ ಸುಲಭವಾಗಿ ತುತ್ತಾಗುತ್ತಾರೆ. ಮಾಲಿನ್ಯ ಮತ್ತು ಕೈಗಾರಿಕಾ ತ್ಯಾಜ್ಯಗಳು ಆರೋಗ್ಯದ ಮೇಲೆ ಅಗಾಧವಾದ ಪರಿಣಾಮ ಬೀರುತ್ತದೆ. ಮಹಿಳೆಯರು ಪೌಷ್ಟಿಕಾಂಶದ ಕೊರತೆಯಿಂದ ಮತ್ತು ಇತರ ರೋಗಗಳಿಂದ ಬಳಲುತ್ತಿದ್ದಾರೆ, ಅವರಲ್ಲಿ ರಾಸಾಯನಿಕ ಒತ್ತಡವನ್ನು ಎದುರಿಸುವ ಸಾಮರ್ಥ್ಯ ಕುಸಿದಿರುತ್ತದೆ. ಪ್ರತಿದಿನ ಅಡುಗೆ ಮನೆಯಲ್ಲಿ ಕನಿಷ್ಟ ಮೂರು ಗಂಟೆಗಳನ್ನು ಕಳೆಯುವ ಮಹಿಳೆಯರಲ್ಲಿ ಕಣ್ಣಿನ ಸಮಸ್ಯೆ, ಉಸಿರಾಟದ ಸಮಸ್ಯೆ, ತೀವ್ರವಾದ ಗಂಟಲು ರೋಗ ಮತ್ತು ಶ್ವಾಸಕೋಶದ ಕ್ಯಾನ್ಸರ್ ಕಾಣಿಸಿಕೊಳ್ಳುತ್ತದೆ. ರಕ್ತಹೀನತೆಯಿಂದ ಬಳಲುತ್ತಿರುವವರು ಇಂಗಾಲದ ಮೊನಾಕ್ಸೈಡ್‌ನ

ದುಷ್ಪರಿಣಾಮಗಳಿಗೆ ಒಳಗಾಗುತ್ತಾರೆ. ಇದಲ್ಲದೆ, ಜನಸಂಖ್ಯೆ ಹೆಚ್ಚಾದಂತೆ, ಎಲ್ಲೆಂದರಲ್ಲಿ ತ್ಯಾಜ್ಯಗಳನ್ನು ವಿಲೇವಾರಿ ಮಾಡುವುದರಿಂದ ಕೊಕ್ಕೆಹುಳುಗಳ ಸಂಖ್ಯೆ ಕೂಡಾ ಹೆಚ್ಚಾಗುತ್ತದೆ. ಗ್ರಾಮೀಣ ಮಹಿಳೆಯರಲ್ಲಿ ಹೆಚ್ಚಾಗಿ ಕಂಡುಬರುವ ರಕ್ತಹೀನತೆಗೆ ಇವುಗಳು ನೇರಕಾರಣವಾಗುತ್ತವೆ. ಸರಕಾರವು ಮಹಿಳೆಯರ, ತಾಯಂದಿರ ಮತ್ತು ಶಿಶುಗಳ ಮರಣ ದರವನ್ನು ತಗ್ಗಿಸಲು ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಮಾತ್ರವಲ್ಲದೆ, ಸೂಲಗಿತ್ತಿಯರಿಗೆ ಪ್ರಸವದ ನಂತರ ನಿಗಾ ವಹಿಸುವಿಕೆ ಬಗ್ಗೆ, ಸುರಕ್ಷಿತ ಹೆರಿಗೆಯ ಬಗ್ಗೆ, ಶುಚಿತ್ವದ ಪ್ರಾಮುಖ್ಯತೆ ಬಗ್ಗೆ, ಆರೋಗ್ಯ ಸಂಬಂಧಿ ಸಮಸ್ಯೆಗಳನ್ನು ಗುರುತಿಸಲು ಮತ್ತು ಪರಿಹರಿಸಲು ತರಬೇತಿ ನೀಡಲಾಗುತ್ತದೆ.

ಮಹಿಳೆಯರ ಸಂಖ್ಯೆಯು ಜಗತ್ತಿನ ಒಟ್ಟು ಜನಸಂಖ್ಯೆಯ ಅರ್ಧದಷ್ಟಿದೆ. ಆದರೆ, ಜಗತ್ತಿನಾದ್ಯಂತ ಮಹಿಳೆಯರ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಸ್ಥಾನಮಾನ ಪುರುಷರಿಗಿಂತ ಕೆಳಮಟ್ಟದಲ್ಲಿದೆ.ಭಾರತದಲ್ಲಿ ಸಾಂಪ್ರದಾಯಿಕವಾಗಿ ಮಹಿಳೆಯರನ್ನು ಪೂಜನೀಯ ಭಾವನೆಯಿಂದ ಗೌರವಿಸುವ ಪದ್ಧತಿಯಿದೆ. ಆದರೆ, ಇದಕ್ಕೂ ವಾಸ್ತವಿಕ ಪರಿಸ್ಥಿತಿಗೂ ಅಜಗಜಾಂತರ ವ್ಯತ್ಯಾಸವಿದೆ. ಭಾರತದಲ್ಲಿ ಮಹಿಳೆಯರ ಶಿಕ್ಷಣವನ್ನು ಹಿಂದಿನಿಂದಲೂ ಕಡೆಗಣಿಸುತ್ತಾ ಬರಲಾಗಿದೆ. ಸಾಂಪ್ರದಾಯಿಕವಾಗಿ ಮಹಿಳೆಯರನ್ನು ಪೂಜನೀಯ ಭಾವನೆಯಿಂದ ಗೌರವಿಸುವ ಪದ್ಧತಿಯಿದೆ. ಆದರೆ, ಇದಕ್ಕೂ ವಾಸ್ತವಿಕ ಪರಿಸ್ಥಿತಿಗೂ ಅಜಗಜಾಂತರ ವ್ಯತ್ಯಾಸವಿದೆ. ಗ್ರಾಮೀಣ ಪ್ರದೇಶದಲ್ಲಿ ಹೆಣ್ಣು ಮಕ್ಕಳು ಗಂಡಸರಿಗಿಂತ ಕಡಿಮೆ ಶಿಕ್ಷಣ ಪಡೆಯುತ್ತಿದ್ದಾರೆ. ಹಲವಾರು ಸಂದರ್ಭದಲ್ಲಿ ಬೇರೆ ಬೇರೆ ಆಯೋಗಗಳು ಮತ್ತು ಶ್ರೇಷ್ಠ ನಾಯಕರುಗಳು ಮಹಿಳಾ ಶಿಕ್ಷಣದ ಅಗತ್ಯವನ್ನು ಒತ್ತಿ ಹೇಳಿದ್ದಾರೆ. ಆದರೆ ಗ್ರಾಮೀಣ ಪ್ರದೇಶದಲ್ಲಿ ಸಾಮಾಜಿಕ ಕಟ್ಟುಪಾಡುಗಳಿಂದ ಇದು ಸಾಧ್ಯವಾಗುತ್ತಿಲ್ಲ. ಮಾನವನ ಹಾಗೂ ದೇಶದ ಸರ್ವಾಂಗೀಣ ಪ್ರಗತಿಯಲ್ಲಿ ಶಿಕ್ಷಣದ ಪಾತ್ರ ಅತ್ಯಂತ ಪ್ರಮುಖವಾಗಿದೆ. ಶಿಕ್ಷಣವು ಸ್ತ್ರೀ-ಪುರುಷರಿಬ್ಬರ ಮಧ್ಯದ ಭೇಧ ಭಾವಗಳನ್ನು ಅಳಿಸಿ ಅವರ ಸಾಮಾಜಿಕ, ಆರ್ಥಿಕ ಜೀವನ ಮಟ್ಟವನ್ನು ಸುಧಾರಿಸುತ್ತದೆ. ಮಹಿಳಾ ಶಿಕ್ಷಣವು ಸ್ತ್ರೀಯರ ಸ್ಥಾನಮಾನಗಳನ್ನು ವೃದ್ಧಿಸುವುದು ಮಾತ್ರವಲ್ಲದೆ, ಧನಾತ್ಮಕ ಚಿಂತನೆಗಳಿಂದ ಸ್ವಾವಲಂಬನೆ, ಸ್ವಾಯತ್ತತೆಗೆ ಪ್ರೇರೇಪಿಸುತ್ತದೆ. ಇತ್ತೀಚೆಗೆ ಗ್ರಾಮಗಳಲ್ಲಿ ಮಹಿಳಾ ಸಂಘಗಳು, ಸ್ವ-ಸಹಾಯ ಸಂಘಗಳು ಮತ್ತು ಸ್ತ್ರೀ ಶಕ್ತಿಗುಂಪುಗಳು ಪ್ರಮುಖ ಪಾತ್ರವಹಿಸುತ್ತದೆ. ಗ್ರಾಮೀಣ ಮಹಿಳೆಯರು ತಮ್ಮ ಕೆಲಸ ಕಾರ್ಯಗಳ ಒತ್ತಡದಲ್ಲಿಯೂ ಈ ಸಂಘಗಳಲ್ಲಿ ಉತ್ಸಾಹದಿಂದ

ಕೆಲಸ ಮಾಡುತ್ತಿದ್ದಾರೆ. ಗ್ರಾಮೀಣ ಮಹಿಳೆಯರಿಗೆ ಸಂಪತ್ತಿನ ಮತ್ತು ಉದ್ಯೋಗಾವಕಾಶಗಳ ಅಭಾವವಿರುತ್ತದೆ. ಭಾರತ ಸರಕಾರವು ಮಹಿಳೆಯರ ಸಾಮಾಜಿಕ ಮತ್ತು ಆರ್ಥಿಕ ಸ್ಥಾನವನ್ನು ಅಭಿವೃದ್ಧಿ ಪಡಿಸಲು ಹಲವಾರು ಕಾರ್ಯಕ್ರಮಗಳನ್ನು ರೂಪಿಸಿದೆ. ಭಾರತದಲ್ಲಿ ಕಿರು ಹಣಕಾಸಿನ ಕಾರ್ಯಕ್ರಮದ ಯಶಸ್ಸಿನಲ್ಲಿ ಸ್ವಸಹಾಯ ಸಂಘದ ಪಾತ್ರ ಅತ್ಯಂತ ಪ್ರಮುಖವಾಗಿದೆ. ಈ ಕಾರ್ಯಕ್ರಮಗಳು ಬಡತನ ನಿರ್ಮೂಲನಾ ವಿಷಯದಲ್ಲಿ ಮತ್ತು ಮಹಿಳಾ ಸಬಲೀಕರಣದ ವಿಷಯದಲ್ಲಿ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದೆ. ಇದು ಮಹಿಳೆಯರ ಆರ್ಥಿಕ ಮಟ್ಟವನ್ನು ಸುಧಾರಿಸುವಲ್ಲಿ ಮತ್ತು ಅವರಲ್ಲಿ ಆತ್ಮವಿಶ್ವಾಸವನ್ನು ತುಂಬುವಲ್ಲಿ ಯಶಸ್ವಿಯಾಗಿದೆ. ಆದರೂ ಕಟು ಸತ್ಯವೆಂದರೆ ಜಾಗತೀಕರಣದ ನಡುವೆಯೂ ಮಹಿಳೆ ಅಂಚೀಕರಣಕೊಳಗಾಗಿದ್ದಾಳೆ. ಹೀಗಾಗಿ ಮಹಿಳೆಯರ ಮತ್ತು ವಿಶೇಷವಾಗಿ ಗ್ರಾಮೀಣ ಮಹಿಳೆಯರ ಸಾಮಜಿಕ, ಆರ್ಥಿಕ ಬಲಸಂವರ್ಧನೆಗೆ ಅವರಗಿರುವ ಸ್ವ-ಶಕ್ತಿ, ಸಾಮರ್ಥ್ಯ, ಅವಕಾಶಗಳು ಹಾಗೂ ಅವರು ಎದುರಿಸುತ್ತಿರುವ ಸವಾಲು-ಸಮಸ್ಯೆಗಳ ಅಧ್ಯಯನವು ಮಹತ್ವ ಪಡೆದುಕೊಳ್ಳುತದೆ. ಬೇರೆ ಬೇರೆ ಪ್ರದೇಶಗಳ, ಕಸುಬುಗಳ ಮಹಿಳೆಯರ ಸಾಮಾಜೋ-ಆರ್ಥಿಕ ಲಕ್ಷಣ ಮತ್ತು ಸಮಸ್ಯೆಗಳ ಕೂಲಂಕುಷ ಅಧ್ಯಯನಕ್ಕೆ ನಾವು ತೊಡಗಬೇಕಾಗಿದೆ.

೧.೪.ಅಧ್ಯಯನಕ್ಕೆ ಮೂಲವಾಗಿರುವ ಸಮಸ್ಯೆಗಳು

ನಮ್ಮ ಸಂವಿಧಾನದ ಪ್ರಕಾರ ಮಹಿಳೆಯು ಕೂಡಾ ಪುರುಷರಂತೆ ಸಮಾನವಾದ ಹಕ್ಕುಗಳನ್ನು ಹೊಂದಿದ್ದಾಳೆ. ಮಹಿಳೆಯರ ರಕ್ಷಣೆಗಾಗಿ ಹಲವಾರು ರೀತಿಯ ಕಾನೂನುಗಳನ್ನು ಜಾರಿಗೆ ತರಲಾಗಿದೆ. ಮಾತ್ರವಲ್ಲದೆ, ಶಿಕ್ಷಣ ಮತ್ತು ಉದ್ಯೋಗದಲ್ಲಿಯೂ ಸಮಾನವಾದ ಅವಕಾಶವನ್ನು ಕಲ್ಪಿಸಿದೆ. ಆದರೂ, ಪುರುಷ ಪ್ರಧಾನವಾದ ಈ ಸಮಾಜದಲ್ಲಿ ಮಹಿಳೆಯರು ಹಲವಾರು ರೀತಿಯ ತಾರತಮ್ಯಗಳಿಗೆ ಒಳಗಾಗುತ್ತಾರೆ. ಅದರಲ್ಲಿಯೂ ಗ್ರಾಮೀಣ ಮಹಿಳೆಯರು ಉದ್ಯೋಗದಲ್ಲಿ ಬಹುವಾಗಿ ತಾರತಮ್ಯಕ್ಕೆ ಒಳಗಾಗುತ್ತಾರೆ ಹಾಗೂ ಅನೇಕ ಸಮಸ್ಯೆಳನ್ನು ಎದುರಿಸುತ್ತಾರೆ. ಆದುದರಿಂದ ಗ್ರಾಮೀಣ ಮಹಿಳಾ ಕಾರ್ಮಿಕರ ಸಮಸ್ಯೆಗಳ ಕುರಿತಾಗಿ ಸಂಶೋಧನಾತ್ಮಕವಾಗಿ ಅಧ್ಯಯನ ಮಾಡುವುದು ಸೂಕ್ತವೆನಿಸುತ್ತದೆ.

ಸರಕಾರವು ಮಹಿಳೆಯರನ್ನು ಸಬಲೀಕರಣಗೊಳಿಸಲು ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡರೂ, ಸಮಾಜದ ಕಟ್ಟುಪಾಡುಗಳಿಂದಾಗಿ ಕೆಲ ಗ್ರಾಮೀಣ ಮಹಿಳೆಯರು

ಸಾಮಾಜಿಕ ಮತ್ತು ಆರ್ಥಿಕ ಸ್ವಾವಲಂಬನೆಯನ್ನು ಪಡೆದುಕೊಳ್ಳುವಲ್ಲಿ ವಿಫಲರಾಗುತ್ತಾರೆ. ಸ್ವ-ಸಹಾಯ ಸಂಘಗಳು, ಸ್ತ್ರೀ-ಶಕ್ತಿ ಯೋಜನೆಗಳು, ಮಹಿಳಾ ಇಲಾಖೆಗಳು ಮಹಿಳೆಯರನ್ನು ಸಬಲೀಕರಣ ಗೊಳಿಸುವಲ್ಲಿ ತಮ್ಮನ್ನು ತಾವು ತೊಡಗಿಸಿಕೊಳ್ಳುತ್ತಿವೆಯಾದರೂ, ಗ್ರಾಮೀಣ ಪ್ರದೇಶದ ಮಹಿಳೆಯರಲ್ಲಿರುವ ಅನಕ್ಷರತೆ ಹಾಗೂ ಸಂಪ್ರದಾಯ, ರೀತಿ-ನೀತಿಗಳು, ರೂಢಿ-ರಿವಾಜುಗಳು ಇತ್ಯಾದಿಗಳಿಂದಾಗಿ ಅವರು ತಮ್ಮ ಹಕ್ಕುಗಳ ಬಗ್ಗೆ ಮಾತನಾಡಲು ಸಾಧ್ಯವಾಗುತ್ತಿಲ್ಲ. ಆದುದರಿಂದ ಮಹಿಳಾ ಕಾರ್ಮಿಕರ ಸಮಸ್ಯೆಗಳ ಬಗ್ಗೆ ಇರುವ ಒಂದು ವಾಸ್ತವ ಚಿತ್ರಣದ ಅರಿವನ್ನು ಪಡೆಯಲು ಮತ್ತು ಪರಿಹಾರಾತ್ಮಕ/ಧೋರಣಾತ್ಮಕ ನಿಲುವು ಪ್ರಕಟಿಸಲು ಈ ಸಂಶೋಧನಾ ಪ್ರಬಂಧವು ಅಗತ್ಯವಾಗಿದೆ.

೧.೫.ಅಧ್ಯಯನದ ಉದ್ದೇಶಗಳು

ಈ ಅಧ್ಯಯನದ ಮುಖ್ಯ ಉದ್ದೇಶವೇನೆಂದರೆ ಗ್ರಾಮೀಣ ಮಹಿಳಾ ಕಾಮಿಕರ ಸಮಸ್ಯೆಗಳನ್ನು ಅಧ್ಯಯನ ಮಾಡುವುದು ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ತಾಲೂಕಿನಲ್ಲಿ ಅಧ್ಯಯನವನ್ನು ಕೈಗೆತ್ತಿಕೊಳ್ಳಲಾಗಿದೆ.

೧. ಗ್ರಾಮೀಣ ಪ್ರದೇಶದ ಮಹಿಳಾ ಕಾರ್ಮಿಕರ ಉದ್ಯೋಗದಲ್ಲಿನ ತಾರತಮ್ಯದ ಬಗ್ಗೆ ಅಧ್ಯಯನ ಮಾಡುವುದು.

೨. ಗ್ರಾಮೀಣ ಪ್ರದೇಶದಲ್ಲಿ ಮಹಿಳೆಯರ ಹಿಂದಿನ ಹಾಗೂ ಇಂದಿನ ಉದ್ಯೋಗಳಲ್ಲಿ ಆಗುವ ಬದಲಾವಣೆಯ ತುಲನಾತ್ಮಕ ಅಧ್ಯಯನ ನಡೆಸುವುದು.

೩. ಗ್ರಾಮೀಣ ಮಹಿಳೆಯರ ಸಾಮಾಜಿಕ ಮತ್ತು ಆರ್ಥಿಕ ಪರಿಸ್ಥಿತಿಯ ಬಗ್ಗೆ ವಿಶ್ಲೇಷಣೆ ಮಾಡುವುದು.

೪. ಪ್ರಾದೇಶಿಕ ಕೌಟುಂಬಿಕ ಆರ್ಥಿಕಾಭಿವೃದ್ಧಿಯಲ್ಲಿ ಗ್ರಾಮೀಣ ಮಹಿಳೆಯರ ಕೊಡುಗೆ ಬಗ್ಗೆ ಅಧ್ಯಯನ ಮಾಡುವುದು.

೫. ಸ್ವ-ಸಹಾಯ ಸಂಘಗಳಿಂದ ಗ್ರಾಮೀಣ ಮಹಿಳೆಯರ ಸಾಮಾಜಿಕ ಮತ್ತು ಆರ್ಥಿಕ ಜೀವನದಲ್ಲಿ ಆಗುವ ಬದಲಾವಣಾಯ ಅವಲೋಕನದ ಪ್ರಯತ್ನ.

೧.೬. ಅಧ್ಯಯನದ ಊಹೆಗಳು

೧.ಇತ್ತೀಚಿನ ದಿನಗಳಲ್ಲಿ ಗ್ರಾಮೀಣ ಮಹಿಳಾ ಕಾರ್ಮಿಕರು ಸ್ವ ಉದ್ಯೋಗ ಸ್ವ-ಸಹಾಯ ಸಂಘಗಳು ಇತ್ಯಾದಿಗಳ ಮೂಲಕ ಗ್ರಾಮೀಣಾಭಿವೃದ್ಧಿಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುತ್ತಿದ್ದಾರೆ.

೨. ಗ್ರಾಮೀಣ ಮಹಿಳಾ ಕಾರ್ಮಿಕರ ಸಮಸ್ಯೆಗಳನ್ನು ಹೋಗಲಾಡಿಸಲು ಸರಕಾರವು ಹಲವಾರು ಕಾರ್ಯಕ್ರಮಗಳನ್ನು ರೂಪಿಸಿದೆ.

೩. ಗ್ರಾಮೀಣ ಮಹಿಳೆಯರ ಸಾಮಾಜಿಕ ಆರ್ಥಿಕ ಪರಿಸ್ಥಿತಿಯು ಇನ್ನೂ ಹಿಂದುಳಿದಿದೆ.

೧.೭. ಗ್ರಂಥ ಪರಾಮರ್ಶೆ

ಕಾರ್ಮಿಕ (ಕೆಲಸಗಾರ) ಎನ್ನುವ ಪದವು ಉತ್ಪನ್ನಕಾರಕ ಮತ್ತು ಅನುತ್ಪನ್ನಕಾರಕ ಕಾರ್ಮಿಕರನ್ನು ಸೂಚಿಸಿದರೆ, ಉತ್ಪನ್ನಕಾರಕ ಕಾರ್ಮಿಕ ಪದವು ನೇರ ಉತ್ಪಾದಕರು ಮತ್ತು ನೇರ ಉತ್ಪಾದಕರಿಗೆ ಹೆಚ್ಚುವರಿ ಮೌಲ್ಯವನ್ನು ಸೃಷ್ಟಿಸಲು ನೆರವಾಗುವ ಅನುತ್ಪಾದಕರನ್ನು ಕೂಡಾ ಸೂಚಿಸುತ್ತದೆ (ಚಕ್ರವರ್ತಿ ಮತ್ತು ಅನೂಪ್ ೨೦೦೮).

ಹದಿನೆಂಟನೆಯ ಶತಮಾನದ ಪ್ರಾರಂಭದಲ್ಲಿ ಇಂಗ್ಲೆಂಡಿನಲ್ಲಿ ನಡೆದ ಕೃಷಿ ಕ್ರಾಂತಿಯು ಯಾಂತ್ರೀಕೃತ ಕೃಷಿಗೆ ದಾರಿ ಮಾಡಿಕೊಟ್ಟಿತು. ಇದರ ಪರಿಣಾಮವಾಗಿ ಗ್ರಾಮೀಣ ಜನರು ಅಪಾರ ಸಂಖ್ಯೆಯಲ್ಲಿ ಕೃಷಿಯಿಂದ ದೂರ ಸರಿಯುವಂತಾಯಿತು. ಕೆಲಸ ಕೊಡಿಸುವ ವಿವೇಚನಾರಹಿತ ಮಧ್ಯವರ್ತಿ ಜನರು ಈ ಮುಗ್ಧ ಬಡಜನರನ್ನು ಒಟ್ಟು ಸೇರಿಸಿ ಫ್ಯಾಕ್ಟರಿಗಳಿಗೆ ಕರೆತಂದರು. ಅವರನ್ನು ನಿಯಮಿತಗೊಳಿಸಲು ಅವರ ಆರ್ಥಿಕ ಚಟುವಟಿಕೆಗಳಲ್ಲಿ ಮಧ್ಯಪ್ರವೇಶಿಸುವ ಅಧಿಕಾರ ಸರಕಾರಕ್ಕೆ ಇಲ್ಲದಿದ್ದರಿಂದ ಉದ್ಯೋಗದಾತರು ತಮ್ಮ ನೌಕರರನ್ನು ತೀರಾ ಕಡಿಮೆ ವೇತನಕ್ಕೆ ಪ್ರತಿದಿನ ೧೮ ರಿಂದ ೨೦ ಗಂಟೆಗಳವರೆಗೆ ದುಡಿಸಿದರು(ಮುತಾಲಿಕ್ ಮತ್ತು ರೈಸಿಕರ್,೧೯೮೦).

ಹದಿನೆಂಟನೆಯ ಶತಮಾನದ ಕೊನೆಯ ಭಾಗದ ಮತ್ತು ಹತ್ತೊಂಬತ್ತನೆಯ ಶತಮಾನದ ಕೈಗಾರಿಕಾ ಕ್ರಾಂತಿಯ ಬಳಿಕ ಪಾಶ್ಚಾತ್ಯ ಅಭಿಜಾತ ಬರಹಗಾರರಾದ ಆ್ಯಡಮ್‌ಸ್ಮಿತ್(೧೭೨೩-೯೦), ಥಾಮಸ್ ರಾಬರ್ಟ್ ಮಾಲ್ತುಸ್(೧೭೬೬-೧೮೩೪) ಮತ್ತು ಡೇವಿಡ್ ರಿಕಾರ್ಡೊ(೧೭೭೨-೧೮೨೩) ಅವರ ಗರಿಷ್ಠ ವ್ಯಕ್ತಿ ಸ್ವಾತಂತ್ರ್ಯ ಹಾಗೂ ಸರ್ಕಾರದ ಕನಿಷ್ಠ ಮಧ್ಯಸ್ಥಿಕೆ ಮತ್ತು ನಿಯಂತ್ರಣದ ಕುರಿತಾದ ಕೋರಿಕೆಯು ಔದ್ಯೋಗಿಕ ಕಾರ್ಮಿಕರ

ಮೇಲೆ ನಡೆಯುತ್ತಿದ್ದ ಅಮಾನವೀಯ ಘಟನೆಗಳಿಗೆ ದಾರಿ ಮಾಡಿಕೊಟ್ಟಿತು. ಇದರಿಂದಾಗಿ, ಶ್ರೀಮಂತ ಉದ್ಯಮಿಗಳು ಬಡ ನೌಕರರನ್ನು ಶೋಷಣೆಗೆ ಒಳಪಡಿಸುದಕ್ಕೆ ಕಾರಣವಾದ ಅನಿಯಂತ್ರಿತ ವ್ಯಕ್ತಿ ಸ್ವಾತಂತ್ರ್ಯವನ್ನು ಟೀಕೆಗೆ ಗುರಿಪಡಿಸುವ ಹೊಸ ಚಿಂತನೆಯೊಂದು ಹುಟ್ಟಿಕೊಂಡಿತು.

ಕಾರ್ಮಿಕರು ನಮ್ಮ ಸಮಾಜದಲ್ಲಿ ಮನ್ನಣೆ ದೊರೆಯದ ವಿಭಾಗದವರೆಂದು ಸಾಮಾನ್ಯವಾಗಿ ಒಪ್ಪಿಕೊಳ್ಳಲಾಗಿದೆ(ಕಡ್‌ಚೆಡ್ಕರ್, ೧೯೭೯).

ಭಾರತೀಯ ಕಾರ್ಮಿಕರ ಅದಕ್ಷತೆಗೆ ಕಾರಣ ಅವರ ದೈಹಿಕ ದೌರ್ಬಲ್ಯ, ಅನಾರೋಗ್ಯ, ಕುಶಲತೆಯ ಕೊರತೆ, ವಲಸಿಗ ಸ್ವಭಾವ, ಹವಾಮಾನ ಪರಿಸ್ಥಿತಿಗಳು, ಕೆಳಮಟ್ಟದ ವೇತನ, ಭಾರತದ ಕೈಗಾರಿಕೆಗಳು ಬಳಸುವ ಕೆಳಮಟ್ಟದ ಕಚ್ಚಾವಸ್ತುಗಳು, ಜೀರ್ಣಗೊಂಡ ಹಳತಾಗಿ ಹೋಗಿರುವ ಯಂತ್ರಗಳು, ಬಹುಪಾಲು ಕಾರ್ಖಾನೆಗಳಲ್ಲಿನ ದೋಷಪೂರಿತ 'ವಿನ್ಯಾಸ, ಕೆಟ್ಟದಾದ ಹಾಗೂ ಅಸಮರ್ಪಕ ಔದ್ಯೋಗಿಕ ಸಂಘಟನೆ (ಸಚ್ ದೇವ್ ೧೯೭೩, ಇಂಟರ್ ಆಫ್ರಿಕನ್ ಲೇಬರ್ ಇನ್ಸ್ ಟಿಟ್ಯೂಟ್ ೧೯೬೦ ಮತ್ತು ತಿವಾರಿ ೧೯೭೧).

ಭಾರತದಲ್ಲಿ ಶೇಕಡಾ ೯೦ರಷ್ಟು ಮಹಿಳೆಯರು ಅಸಂಘಟಿತ ವಲಯದಲ್ಲಿ ಉದ್ಯೋಗವನ್ನು ಹೊಂದಿದ್ದಾರೆ. ಇವರಿಗೆ ಉಚಿತ ವೇತನವಾಗಲಿ ಕನಿಷ್ಟ ಜೀವನ ಮಟ್ಟವಾಗಲೀ ಲಭ್ಯವಿಲ್ಲ (ತಿವಾರಿ ೧೯೯೬ ಮತ್ತು ಅಗರ್ ವಾಲ್ ೧೯೪೪).

ಬಡತನದಲ್ಲಿ ನಲುಗುತ್ತಿರುವ ಸಾವಿರಾರು ಮಹಿಳೆಯರು ಜೀವನೋಪಾಯವನ್ನು ಹುಡುಕಿಕೊಂಡು ಗ್ರಾಮೀಣ ಪ್ರದೇಶಗಳಿಂದ ಮಹಾ ನಗರಗಳಿಗೆ ವಲಸೆ ಹೋಗುತ್ತಾರೆ. ಕೊನೆಗೆ ಮನೆಯಾಳುಗಳಾಗಿ ಕೆಲಸ ನಿರ್ವಹಿಸುತ್ತಾ, ತಮ್ಮ ಹಕ್ಕುಗಳನ್ನು ಸಂರಕ್ಷಿಸಿಕೊಳ್ಳಲು ನ್ಯಾಯಯುತ ಬೆಂಬಲವಿಲ್ಲದೆ ಅವರು ತಮ್ಮ ಉದ್ಯೋಗದಾತರ ಕೈಯಲ್ಲಿ ತಾರತಮ್ಯ ಮತ್ತು ಕಿರುಕುಳ ಅನುಭವಿಸುವರಲ್ಲದೆ, ಹೆಚ್ಚುತ್ತಿರುವ ಉದ್ಯೋಗ ದೊರಕಿಸಿಕೊಳ್ಳುವ ಅನಿಯಮಿತ ಸಂಸ್ಥೆಗಳ(ಏಜೆನ್ಸಿಗಳ) ಕೈಯಲ್ಲಿ ನಿಂದೆ, ಶೋಷಣೆ ಮತ್ತು ಮಾನವ ಸಾಗಣಿಕೆಗೆ ಬಲಿಪಶುವಾಗುತ್ತಾರೆ(ಎರಡನೇಯ ರಾಷ್ಟೀಯ ಕಾರ್ಮಿಕ ಆಯೋಗ ೨೦೦೨).

ಸೇವಾವಲಯದಲ್ಲಿರುವ ಒಟ್ಟು ಮಹಿಳಾ ಉದ್ಯೋಗಿಗಳಲ್ಲಿ ಗೃಹಕಾರ್ಮಿಕ ಮಹಿಳೆಯರ ಸಂಖ್ಯೆಯು ೧೯೯೯-೨೦೦೦ ದಲ್ಲಿ ಶೇಕಡಾ ೧೧.೮ ರಷ್ಟು ಇದ್ದದ್ದು ೨೦೦೪-೨೦೦೫ ರಲ್ಲಿ ಶೇಕಡಾ೨೭.೧ ದಷ್ಟು ಹೆಚ್ಚಿತು. ಅಂದರೆ, ೫ ವರ್ಷಗಳ ಚಿಕ್ಕ ಅವಧಿಯಲ್ಲಿ ಸುಮಾರು ೨,೦೨೫ ಮಿಲಿಯದಷ್ಟು ಹೆಚ್ಚಳವನ್ನು ಕಂಡಿದೆ. ಲಕ್ಷಗಟ್ಟಳೆ

ಮಹಿಳೆಯರು ಮತ್ತು ಹುಡುಗಿಯರು ತಮ್ಮ ಹಾಗೂ ಕಟುಂಬದವರ ದೈನಂದಿನ ಬೇಡಿಕೆಗಳನ್ನು ಪೂರೈಸಿಕೊಳ್ಳಲು ಬೇರೆ ಆಯ್ಕೆಗಳಿಲ್ಲದೆ, ಲಭ್ಯವಿರುವ ಮನೆಕೆಲಸವನ್ನೇ ನಂಬಿಕೊಂಡಿರುತ್ತಾರೆ. ಕಾರ್ಮಿಕ ಕಾನೂನುಗಳ ಸೌಲಭ್ಯಗಳನ್ನು ಪಡೆಯಲು ಗೃಹಕಾರ್ಮಿಕರು ಅನರ್ಹರಾಗಿದ್ದಾರೆ ಯಾಕೆಂದರೆ ಅವರನ್ನು ಕಾರ್ಮಿಕರೆಂದು ಕೂಡಾ ಗುರುತಿಸಲಾಗಿಲ್ಲ (ಶರ್ಮ,೧೯೯೩).

ಅಸಂಘಟಿತ ವಲಯದಲ್ಲಿ ಹೆಚ್ಚಿನ ಪ್ರಮಾಣದಲ್ಲಿರುವ ಪ್ರಾಥಮಿಕ ದರ್ಜೆಯ ಉತ್ಪಾದನಾ ತಂತ್ರಜ್ಞಾನಗಳು ಮತ್ತು ಊಳಿಗಮಾನ್ಯ ಉತ್ಪಾದನಾ ಸಂಬಂಧಗಳು ಉನ್ನತ ದರ್ಜೆಯ ತಂತ್ರಜ್ಞಾನಗಳನ್ನು ಅಳವಡಿಸಿಕೊಳ್ಳಲು ಮತ್ತು ಉತ್ಪಾದನಾ ಸಂಬಂಧಗಳನ್ನು ಉತ್ತಮಗೊಳಿಸಲು ಕಾರ್ಮಿಕರಿಗೆ ಅವಕಾಶವನ್ನಾಗಲಿ ಅಥವಾ ಪ್ರೋತ್ಸಾಹವನ್ನಾಗಲೀ ನೀಡುವುದಿಲ್ಲ (ಪ್ರೆಸ್ ಇನ್ ಫ್ ರ್ಮೇಶನ್ ಬ್ಯೂರೊ ವರದಿ, ೨೦೦೧).

ಅಸಂಘಟಿತ ಕಾರ್ಮಿಕರಲ್ಲಿ ಅತ್ಯಂತ ಹೆಚ್ಚು ಕಷ್ಟವನ್ನು ಅನುಭವಿಸುವವರೆಂದರೆ ದಲಿತರು, ಆದಿವಾಸಿಗಳು ಮತ್ತು ಮಹಿಳೆಯರು (ಪಾಂಡೆ ೧೯೭೬; ಪಾಂಡ ೧೯೯೯; ಪ್ರೆಸ್ ಇನ್‌ಫಾರ್ಮೇಶನ್ ಬ್ಯೂರೊ ವರದಿ, ೨೦೦೧; ನಾಡಗೌಡರ್ ೨೦೦೨; ತೆಹಲ್ಕಾ ಪತ್ರಿಕೆ ೨೦೦೮ ಮತ್ತು ರೆಡ್ಡಿ ೨೦೦೮).

ಭಾರತೀಯ ಸಮಾಜಿಕ ವಿಮಾ ಚಳವಳಿಯಲ್ಲಿ ೧೯೨೦ಕ್ಕಿಂತ ಮೊದಲಿನ ಅವಧಿಯು ನಿಷ್ಕ್ರೀಯ ಕಾಲಾವಧಿಯಾಗಿದೆ. ೧೯೨೦ರ ನಂತರ ಐಎಲ್‌ಒ ಅಂಗೀಕರಿಸಿದ ಪ್ರಥಮ ಸಾಮಾಜಿಕ ಭದ್ರತಾ ಒಡಂಬಡಿಕೆಗಳು ಈ ಕ್ಷೇತ್ರದ ಜಾಗತಿಕ ಚಳವಳಿಗೆ ಸ್ಪಷ್ಟ ಚಾಲನೆಯನ್ನು ನೀಡಿದವು (ಭಟ್ಟಾಚಾರ್ಯ, ೧೯೮೨).

ಸ್ವಾತಂತ್ರ್ಯ ದೊರೆತ ನಂತರ ಕಾರ್ಮಿಕರನ್ನು ಉದ್ಧರಿಸುವ ಕ್ಷೇಮಾಭಿವೃದ್ಧಿ ಕ್ರಮಗಳು ತಿವ್ರಗೊಂಡವು. ೧೯೪೮ ರಲ್ಲಿ ಜಾರಿಗೊಳಿಸಲಾದ ನೌಕರರ ರಾಜ್ಯ ವಿಮಾ ಅಧಿನಿಯಮವು ಭಾರತದಲ್ಲಿ ಕಾರ್ಮಿಕ ಸಾಮಾಜಿಕ ವಿಮಾ ಯುಗದ ಪ್ರಾರಂಭವನ್ನು ದಾಖಲಿಸಿತು (ಕೌಲ್, ೧೯೫೬).

ಕೆಲಸದ ಪರಿಸರವನ್ನು ನಿಯಮಿತಗೊಳಿಸುವ ಉದ್ದೇಶವನ್ನು ಹೊಂದಿದ ಕಾರ್ಖಾನೆಗಳ ಅಧಿನಿಯಮ, ೧೯೪೮, ಕೆಳಮಟ್ಟದ ವೇತನವನ್ನು ನೀಡಿ ಕಾರ್ಮಿಕರ ಮೇಲೆ ನಡೆಸುವಂತಹ ಶೋಷಣೆಯನ್ನು ತಡೆಯುವ ಮುಖ್ಯ ಉದ್ದೇಶವನ್ನು ಹೊಂದಿರುವ ಕನಿಷ್ಟ ವೇತನ ಅಧಿನಿಯಮ, ೧೯೪೮ ಮತ್ತು ನೌಕರರ ಕ್ಷೇಮನಿಧಿ ಹಾಗೂ ಆರ್ಥಿಕ ಭದ್ರತೆ ಮತ್ತು

ಕಡ್ಡಾಯ ಕ್ಷೇಮನಿಧಿಗಳ ಸಂಸ್ಥೆಯು ಮೂಲಕ ಔದ್ಯೋಗಿಕ ಕ್ಷೇತ್ರದ ನೌಕರರಿಗೆ ಮತ್ತು ಅವರ ಕುಟುಂಬಗಳಿಗೆ ಆರ್ಥಿಕ ಭದ್ರತೆ ಮತ್ತು ಸಮಯಕ್ಕೆ ಸರಿಯಾದ ನೆರವು ನೀಡುವ ಸಮರ್ಥನೀಯ ಕ್ರಮವನ್ನು ಒದಗಿಸುವ ಉದ್ದೇಶವನ್ನು ಹೊಂದಿದೆ (ಕುಮಾರ್, ೨೦೦೩). ಪ್ರಥಮ ಮಹಾಯುದ್ಧಕ್ಕಿಂತ ಮೊದಲು (೧೯೧೪-೧೯೧೮) ಭಾರತದ ಬ್ರಿಟಿಷ್ ಸರಕಾರದ ಕಾರ್ಯನೀತಿಯು ತಟಸ್ಥ್ಯ ನೀತಿಯ ಬಂಡವಾಳಶಾಹಿ ಸಿದ್ಧಾಂತದಿಂದ ಅಂದರೆ ಮುಕ್ತ ಆರ್ಥಿಕತೆ ಹಾಗೂ ಕಾರ್ಮಿಕ ಮತ್ತು ಔದ್ಯೋಗಿಕ ವಿಚಾರಗಳಲ್ಲಿ ಸರಕಾರದ ಮಧ್ಯ ಪ್ರವೇಶ ಇಲ್ಲದ ತತ್ವಗಳಿಂದ ಪ್ರಭಾವಿತಗೊಂಡಿತ್ತು (ಸಿಂಗ್, ೨೦೦೭).

ರಾಷ್ಟ್ರೀಯ ಉದ್ಯೋಗ ಖಾತರಿ ಅಧಿನಿಯಮ, ೨೦೦೫ ರಲ್ಲಿ ಅಸಂಘಟಿತ ಕಾರ್ಮಿಕರಿಗಾಗಿ ನಿಶ್ಚಿತ ವೇತನದ ೧೦೦ ದಿನಗಳ ಕೆಲಸದ ಅವಕಾಶವನ್ನು ಒದಗಿಸಲಾಗಿದೆ (ಮೆರ್ ಹೊತ್ರ, ೨೦೦೮).

೧೮ ರಿಂದ ೬೦ ವರ್ಷಗಳ ವಯೋಮಿತಿಯ ಗುಂಪಿಗೆ ಸೇರುವ ಕೃಷಿ ಕಾರ್ಮಿಕರಿಗೆ ಸಾಮಾಜಿಕ ಭದ್ರತೆಯನ್ನು ಒದಗಿಸುವ ಸಲುವಾಗಿ ಜೂನ್ ೨೦೦೧ ರಲ್ಲಿ ಕೃಷಿ ಶ್ರಮಿಕ ಸಾಮಾಜಿಕ ಸುರಕ್ಷಾ ಯೋಜನೆಯನ್ನು ಪ್ರಾರಂಭಿಸಲಾಯಿತು (ತ್ಯಾಗಿ, ೨೦೦೪).

೧.೮. ಅಧ್ಯಯನದ ವಿಧಾನಗಳು

೧. ಅಧ್ಯಯನವು ಪ್ರಾಥಮಿಕ ಹಾಗೂ ಅನುಷಂಗಿಕ ಮೂಲಗಳೆರಡನ್ನೂ ಒಳಗೊಂಡಿದೆ.

೨. ಗ್ರಾಮೀಣ ಮಹಿಳಾ ಕಾರ್ಮಿಕರಿಂದ ನೇರ ಸಂದರ್ಶನದ ಮೂಲಕ ಹಾಗೂ ಪ್ರಶ್ನಾವಳಿ ಮೂಲಕ ಮಾಹಿತಿ ಸಂಗ್ರಹಣೆ.

೩. ಅಧ್ಯಯನಕ್ಕೆ ಸೈದ್ಧಾಂತಿಕ ನೆಲೆಯನ್ನು ಒದಗಿಸಲು ವಿವಿಧ ಗ್ರಂಥಗಳ, ಸಂಶೋಧನಾ ಲೇಖನಗಳ ಹಾಗೂ ಸರಕಾರಿ ಮೂಲದ ದಾಖಲೆಗಳ ಪರಾಮರ್ಶೆ.

೪. ಮಹಿಳೆಯರನ್ನು ಮತ್ತು ಪುರುಷರನ್ನು (ಕಾರ್ಮಿಕ ಕುಟುಂಬಗಳ) ಸಂದರ್ಶನದ ಮೂಲಕ, ಗುಂಪಾಗಿ ಅಥವಾ ವಯಕ್ತಿಕವಾಗಿ ಪ್ರಶ್ನಾವಳಿಯನ್ನು ಉಪಯೋಗಿಸಿಕೊಂಡು ದತ್ತಾಂಶಗಳನ್ನು ಸಂಗ್ರಹಿಸುವುದು.

ಹೀಗೆ ಸಂಗ್ರಹಿಸಿದ ಮಾಹಿತಿಗಳನ್ನು ಸೂಕ್ತ ಕೋಷ್ಟಕಗಳನ್ನಾಗಿ ವಿಂಗಡಿಸಿ, ಸರಳ ಅಂಕಿ-ಅಂಶಗಳ ತಂತ್ರಗಳಾದ ಅನುಪಾತ, ಸರಾಸರಿ ಪ್ರಮಾಣ ಮತ್ತು ಶೇಕಡಾವಾರು ಪ್ರಮಾಣ ಮೂಲಕ ವಿಶ್ಲೇಷಿಸಿ ಅರ್ಥೈಸಲಾಗುವುದು.

೧.೯.ಅಧ್ಯಯನದ ವ್ಯಾಪ್ತಿ ಮತ್ತು ಅಧ್ಯಾಯಗಳು

ಈ ಸಂಶೋಧನಾ ಅಧ್ಯಯನದ ವ್ಯಾಪ್ತಿಯನ್ನು ಭೌಗೋಳಿಕವಾಗಿ ಕರ್ನಾಟಕ ರಾಜ್ಯದಲ್ಲಿನ ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ತಾಲೂಕಿಗೆ ಸೀಮಿತಗೊಳಿಸಲಾಗಿದೆ. ಬಂಟ್ವಾಳ ತಾಲೂಕಿನಲ್ಲಿ ಒಟ್ಟು ೮೪ ಗ್ರಾಮಗಳಿವೆ. ಈ ಗ್ರಾಮಗಳಲ್ಲಿ ಕೆಲವು ಗ್ರಾಮಗಳನ್ನು ಆಯ್ಕೆ ಮಾಡಿ ಆ ಪ್ರದೇಶಕ್ಕೆ ಭೇಟಿ ನೀಡಿ ಮಾಹಿತಿ ಸಂಗ್ರಹಿಸುವುದು. ಇತ್ತೀಚಿನ ದಿನಗಳಲ್ಲಿ ಮಹಿಳೆಯರು ಸಾಮಾಜಿಕ, ರಾಜಕೀಯ, ಆರ್ಥಿಕ, ಕೈಗಾರಿಕ ವಲಯ, ಸೇವಾ ವಲಯ, ಪ್ರವಾಸೋದ್ಯಮ ಮುಂತಾದ, ಹಲವಾರು ಕ್ಷೇತ್ರಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದರೂ, ಗ್ರಾಮೀಣ ಮಹಿಳೆಯರು ಹಲವಾರು ರೀತಿಯ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಭಾರತೀಯ ಕಾರ್ಮಿಕ ಶಾಸನವು ಮಹಿಳೆರನ್ನು ಶೋಷಣೆಯಿಂದ ಸಂರಕ್ಷಿಸುವಲ್ಲಿ ಒಂದು ಮುಖ್ಯವಾದ ಆಯಾಮವಾಗಿದ್ದು ಮಹಿಳಾ ಕಾರ್ಮಿಕರಿಗೆ ವಿಶೇಷ ಸವಲತ್ತು ಒದಗಿಸಲು ಸಂವಿಧಾನವು ರಾಜ್ಯಗಳಿಗೆ ಅವಕಾಶ ನೀಡಿದೆ. ಆದರೆ ಪುರುಷ ಪ್ರಧಾನವಾಗಿರುವ ಸಮಾಜದಲ್ಲಿ ಹಲವಾರು ರೀತಿಯಲ್ಲಿ ಮಹಿಳಾ ಕಾರ್ಮಿಕರು ಕಡೆಗಣಿಸಲ್ಪಟ್ಟಿರುವುದು ಕಂಡುಬರುತ್ತದೆ. ಮಹಿಳಾ ಕಾರ್ಮಿಕರ ರಕ್ಷಣೆಗೆ ಕಾನೂನುಗಳಿದ್ದರೂ ಕೆಲವು ಸಂಘಟಿತ ಹಾಗೂ ಅಸಂಘಟಿತ ವಲಯಗಳಲ್ಲಿ ಮಹಿಳಾ ಕಾರ್ಮಿಕರು ಎದುರಿಸುವ ಶಿಕ್ಷಣದ ಕೊರತೆ ತಮ್ಮ ಹಕ್ಕುಗಳಿಗಾಗಿ ಹೋರಾಟ ಮಾಡಲು ಇರುವ ಸಮಯದ ಅಭಾವ ಹಾಗೂ ಕಾರ್ಮಿಕ ಕಾನೂನುಗಳ ಬಗ್ಗೆ ಅವರಿಗಿರುವ ಅಜ್ಞಾನ ಇತ್ಯಾದಿ ಅಂಶಗಳಿಂದಾಗಿ ಕಾರ್ಮಿಕ ಕಾನೂನುಗಳು ಸಮರ್ಪಕವಾಗಿ ಬಳಕೆಯಾಗುತ್ತಿಲ್ಲ. ಆದುದರಿಂದ ಗ್ರಾಮೀಣ ಪ್ರದೇಶದ ಮಹಿಳಾ ಕಾರ್ಮಿಕರು ಎದುರಿಸುತ್ತಿರುವ ಸಮಸ್ಯೆಗಳ ಕುರಿತು ಪರಾಮರ್ಶೆ ನಡೆಸಲು ಪ್ರಸ್ತುತ ಅಧ್ಯಯನದಲ್ಲಿ ಪ್ರಯತ್ನಿಸಲಾಗುತ್ತದೆ.

P.T.O

ಈ ಸಂಶೋಧನಾ ಅಧ್ಯಯನವನ್ನು ಐದು ಮುಖ್ಯ ಅಧ್ಯಾಯಗಳಾಗಿ ವಿಂಗಡಿಸಲಾಗಿದೆ.

ಮೊದಲನೆ ಅಧ್ಯಾಯದಲ್ಲಿ ಪೀಠಿಕೆ, ಗ್ರಾಮೀಣ ಮಹಿಳೆ, ಗ್ರಾಮೀಣ ಅಭಿವೃದ್ಧಿ, ಪ್ರಸ್ತುತ ಅಧ್ಯಯನದ ಉದ್ದೇಶ, ಸಮಸ್ಯೆ, ವಿಧಾನಗಳನ್ನೂ, ಎರಡನೇ ಅಧ್ಯಾಯದಲ್ಲಿ ಸಂಶೋಧನ ಪ್ರದೇಶವಾದ ಬಂಟ್ವಾಳ ತಾಲೂಕಿನ ಸಾಮಾಜಿಕ, ರಾಜಕೀಯ, ಆರ್ಥಿಕ ಮತ್ತು ಭೌಗೋಳಿಕವಾದ ಪರಿಚಯ ನೀಡಲಾಗಿದೆ. ಮೂರನೇ ಅಧ್ಯಾಯದಲ್ಲಿ ಭಾರತದಲ್ಲಿ, ರಾಜ್ಯದಲ್ಲಿ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹಾಗೂ ಬಂಟ್ವಾಳ ತಾಲೂಕಿನಲ್ಲಿರುವ ಗ್ರಾಮೀಣ ಮಹಿಳಾ ಕಾರ್ಮಿಕರು ಎದುರಿಸುತ್ತಿರುವ ಸಮಸ್ಯೆಗಳನ್ನು ಅನುಷಂಗಿಕ ಮೂಲಗಳನ್ನು ಅನುಸರಿಸಿ ಸಂಗ್ರಹಿಸುವುದು. ನಾಲ್ಕನೇಯ ಅಧ್ಯಾಯದಲ್ಲಿ ಪ್ರಾಥಮಿಕ ದತ್ತಾಂಶದ ವಿಶ್ಲೇಷಣೆ ಇದೆ. ಕೊನೆಯಲ್ಲಿ ಪರಾಮರ್ಶನ ಗ್ರಂಥ ಅನುಬಂಧ ಹಾಗೂ ಪ್ರಶ್ನಾವಳಿಯ ಬಗ್ಗೆ ವಿವರಣೆ ನೀಡಲಾಗಿದೆ.

೧.೧೦ ಅಧ್ಯಯನಕ್ಕೆ ಇರುವ ಇತಿಮಿತಿಗಳು

೧. ಗ್ರಾಮೀಣ ಮಹಿಳಾ ಕಾರ್ಮಿಕರ ಸಮಸ್ಯೆಗಳು ಎಂಬ ಈ ಅಧ್ಯಯನದ ವ್ಯಾಪ್ತಿಯನ್ನು ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ತಾಲೂಕಿನ ಕೆಲವು ಹಳ್ಳಿಗಳಿಗೆ ಮಾತ್ರ ಸೀಮಿತಗೊಳಿಸಲಾಗಿದೆ.

೨. ಈ ಅಧ್ಯಯನದಲ್ಲಿ ಮಹಿಳಾ ಕಾರ್ಮಿಕರ ಸಮಸ್ಯೆಗಳನ್ನು ಅಧ್ಯಯನ ಮಾಡಲು ಶಿಕ್ಷಣ, ಸಾಮಾಜಿಕ-ಆರ್ಥಿಕ ಚಟುವಟಿಕೆಗಳಲ್ಲಿ ಅವರ ಪಾಲ್ಗೊಳ್ಳುವಿಕೆ ಮುಂತಾದ ವಿಷಯಗಳನ್ನು ಒಳಪಡಿಸಲಾಗಿದೆ. ರಾಜಕೀಯ ಭಾಗಿತ್ವದ ಬಗ್ಗೆ ನೇರವಾಗಿ ಅವಲೋಕಿಸಿಲ್ಲ.

೩. ಈ ಅಧ್ಯಯನವನ್ನು ಆಧುನಿಕ ಜೀವನ ಕ್ರಮದಿಂದ ಹೆಚ್ಚು ಪ್ರಭಾವಿತಕ್ಕೊಳಪಡದೆ ಹಿಂದುಳಿದಿರುವ ಬಂಟ್ವಾಳ ತಾಲೂಕಿನ ಗ್ರಾಮೀಣ ಪ್ರದೇಶಕ್ಕೆ ಸೀಮಿತಗೊಳಿಸಲಾಗಿದೆ.

೪. ಗ್ರಾಮೀಣ ಮಹಿಳಾ ಕಾರ್ಮಿಕರ ಪ್ರಗತಿಗೆ ಪೂರಕವಾದ ಅಂಶಗಳ ಕುರಿತಂತೆ ಈ ಅಧ್ಯಯನವನ್ನು ಸೀಮಿತಗೊಳಿಸಲಾಗಿದೆ.

ಅಧ್ಯಾಯ–೨
ಅಧ್ಯಯನದ ಕ್ಷೇತ್ರ ಪರಿಚಯ

ಅಧ್ಯಾಯ – ೨

ಅಧ್ಯಯನದ ಕ್ಷೇತ್ರಪರಿಚಯ

೨.೧. ಕರ್ನಾಟಕ

ಕರ್ನಾಟಕವು ಭಾರತದ ದಕ್ಷಿಣದ ರಾಜ್ಯಗಳಲ್ಲಿ ಒಂದಾಗಿದೆ. ನವೆಂಬರ್ ೧, ೧೯೫೬ರಂದು ಈಗಿನ ಕರ್ನಾಟಕ ರಾಜ್ಯವನ್ನು 'ಮೈಸೂರು ರಾಜ್ಯ' ಎಂದು ಕರೆಯಲಾಗಿತ್ತು. ಕರ್ನಾಟಕ ಎಂಬ ಪದದ ಬಳಕೆ ಮೊದಲು ಮಹಾಭಾರತದಲ್ಲಿ ಕಂಡು ಬರುತ್ತದೆ. ಕರ್ನಾಟಕ ಎಂಬ ಹೆಸರಿಗೆ ಅನೇಕ ವ್ಯುತ್ಪತ್ತಿಗಳು ಪ್ರತಿಪಾದಿಸಲ್ಪಟ್ಟಿದೆ. ಎರಡಕ್ಕಿಂತ ಹೆಚ್ಚಾಗಿ ಒಪ್ಪಲ್ಪಟ್ಟಿರುವ ವ್ಯುತ್ಪತ್ತಿ ಎಂದರೆ ಕರ್ನಾಟಕ ಎಂಬುದು ಕರು+ನಾಡು ಎಂಬುದರಿಂದ ವ್ಯುತ್ಪತ್ತಿಯನ್ನು ಪಡೆದಿದೆ. ಕರುನಾಡು ಎಂದರೆ 'ಎತ್ತರದ ಪ್ರದೇಶ'ವೆಂದು ಅರ್ಥ ಕೊಡುತ್ತದೆ. 'ಕರ್ನಾಟಕಂ' ಪದದ ಬಳಕೆಯನ್ನು ಮಹಾಭಾರತದಲ್ಲಿ ಕಾಣುತ್ತೇವೆ. ಅದೇ ರೀತಿಯಲ್ಲಿ ಕರ್ನಾಡು, ಕನ್ನಾಟ, ಕರುನಾಡರ್ ಹೀಗೆ ಪದ ಬಳಕೆ ಮಾಡಿರುವುದನ್ನು ಕಾಣುತ್ತೇವೆ. ಕರ್+ನಾಟ್+ಅಗಂ = ಕರ್ನಾಟಕಂ ಅಂದರೆ 'ಕಪ್ಪು ಮಣ್ಣಿನ ನಾಡು' ಎಂದು ಸಂಸ್ಕೃತದಲ್ಲಿ ಅರ್ಥೈಸಲಾಗಿದೆ. ಸುಮಾರು ೨೦೦೦ ವರ್ಷಗಳ ಹಿಂದಿನಿಂದಲೂ ಕರ್ನಾಟಕ ಎಂಬ ಪದ ಬಳಕೆಯಲ್ಲಿರುವುದು ತಿಳಿದು ಬರುತ್ತದೆ.

ಕರ್ನಾಟಕ ಭಾಷೆಯನ್ನು ಮಾತನಾಡುವ ಪ್ರದೇಶವನ್ನು ಒಟ್ಟುಗೂಡಿಸಿ ಕರ್ನಾಟಕ ರಾಜ್ಯವನ್ನಾಗಿ ಗುರುತಿಸಲಾಗುತ್ತದೆ. ಭಾರತದ ದಕ್ಷಿಣ ಕನ್ನಡ ಪ್ರಸ್ಥಭೂಮಿ ಎನಿಸಿರುವ ಕರ್ನಾಟಕ ಅನೇಕ ಶತಮಾನಗಳ ಇತಿಹಾಸವನ್ನು ಹೊಂದಿದೆ. ಕರ್ನಾಟಕವು ತನ್ನದೇ ಆದ ವಿಶಿಷ್ಟ ಸನ್ನಿವೇಶ, ಭೂಸ್ವರೂಪ, ವಿವಿಧ ಪ್ರಾಣಿಸಂಕುಲ, ಉತ್ಕೃಷ್ಟವಾದ ಮಣ್ಣು, ಜಲಸಂಪನ್ಮೂಲ, ಖನಿಜ ಸಂಪತ್ತು ಸಾರಿಗೆ ಸಂಪರ್ಕ, ಮಾಧ್ಯಮಗಳು, ರಾಜಕೀಯ, ಸಾಮಾಜಿಕ, ಆರ್ಥಿಕ ಕೈಗಾರಿಕೆ ಮತ್ತು ಸಾಂಸ್ಕೃತಿಕ ಬೆಳವಣಿಗೆ ಹಾಗೂ ವೃತ್ತಿಪರ ವಿಷಯಗಳ ಮೇಲೆ ಬೆಳಕು ಚೆಲ್ಲುತ್ತದೆ.

ಕರ್ನಾಟಕವು ಪಶ್ಚಿಮದಲ್ಲಿ ಅರಬ್ಬಿ ಸಮುದ್ರದಿಂದ, ವಾಯುವ್ಯದಲ್ಲಿ ಗೋವಾದಿಂದ, ಉತ್ತರದಲ್ಲಿ ಮಹಾರಾಷ್ಟ್ರದಿಂದ, ಪೂರ್ವದಲ್ಲಿ ಆಂಧ್ರಪ್ರದೇಶದಿಂದ, ಆಗ್ನೇಯದಲ್ಲಿ ತಮಿಳುನಾಡಿನಿಂದ, ನೈಋತ್ಯದಲ್ಲಿ ಕೇರಳದಿಂದ ಸುತ್ತುವರಿಯಲ್ಪಟ್ಟಿದೆ. ಕರ್ನಾಟಕವು ೩೦ ಜಿಲ್ಲೆಗಳನ್ನು, ೧೭೫ ತಾಲೂಕುಗಳನ್ನು, ೨೨೮ ಪಟ್ಟಣಗಳನ್ನು, ೨೫,೮೮೦ಕ್ಕೂ ಹೆಚ್ಚು ಹಳ್ಳಿಗಳನ್ನು ಒಳಗೊಂಡಿದೆ. ಇದು ಭಾರತದ ಪರ್ಯಾಯ ದ್ವೀಪದ ಪಶ್ಚಿಮದ ಮಧ್ಯ ಭಾಗದಲ್ಲಿದೆ. ಉತ್ತರ

ದಕ್ಷಿಣವಾಗಿ ೭೦೦ ಕಿ.ಮೀಗಳಷ್ಟು ಉದ್ದವಾಗಿಯೂ, ಪೂರ್ವ ಪಶ್ಚಿಮವಾಗಿ ೪೦೦ ಕಿ.ಮೀ. ಅಗಲವಾಗಿದೆ. ೧,೯೧,೭೯೧ ಚ.ಕಿ.ಮೀ. ಭೂ ವಿಸ್ತೀರ್ಣವನ್ನು ಹೊಂದಿದ್ದು, ದೇಶದಲ್ಲಿ ೮ನೇ ಸ್ಥಾನವನ್ನು ಪಡೆದಿದೆ. ಕರ್ನಾಟಕವು ಸುಮಾರು ೨೫೦ರಿಂದ ೩೦೦ ಕಿ.ಮೀ. ಉದ್ದದ ಸಮುದ್ರ ತೀರವನ್ನು ಹೊಂದಿದೆ. ಸಮುದ್ರ ಮಟ್ಟಕ್ಕಿಂತ ೨,೦೦೦ ಅಡಿಗಳಿಗೂ ಹೆಚ್ಚು ಎತ್ತರವಿದ್ದು, ಬೇರಾವ ರಾಜ್ಯವೂ ಸಮುದ್ರ ಮಟ್ಟದಿಂದ ಇಷ್ಟೊಂದು ಎತ್ತರದಲ್ಲಿಲ್ಲವೆಂಬುದು ವಿಶೇಷವಾಗಿದೆ.

ದೇಶದಲ್ಲಿಯೇ ಕರ್ನಾಟಕವು ಜನಸಂಖ್ಯೆಯಲ್ಲಿ ೯ನೇ ಸ್ಥಾನದಲ್ಲಿದ್ದು, ೨೦೧೧ನೇ ಜನಗಣತಿಯ ಪ್ರಕಾರ ೬,೧೧,೩೦,೭೦೪ ಜನಸಂಖ್ಯೆಯನ್ನು ಹೊಂದಿದೆ. ಜನಸಾಂದ್ರತೆಯು ಪ್ರತಿ ಚದರ ಕಿ.ಮೀಗೆ ೩೧೯ ಜನರನ್ನು ಒಳಗೊಂಡಿದೆ. ೨೦೧೧ರ ಜನಗಣತಿ ಪ್ರಕಾರ ಕರ್ನಾಟಕದ ಲಿಂಗಾನುಪಾತ ಪ್ರತಿ ಸಾವಿರ ಪುರುಷರಿಗೆ ೯೬೮ ಸ್ತ್ರೀಯರಿದ್ದಾರೆ. ಕರ್ನಾಟಕದ ಸಾಕ್ಷರತೆಯ ಪ್ರಮಾಣವು ಪ್ರಗತಿಯ ಪಥದಲ್ಲಿದ್ದು, ೨೦೧೧ನೇ ಜನಗಣತಿಯ ಪ್ರಕಾರ ಕರ್ನಾಟಕದ ಸಾಕ್ಷರತಾ ಪ್ರಮಾಣವು ಶೇಕಡಾ ೭೫.೬೦ ಆಗಿದ್ದು, ಇದರಲ್ಲಿ ಶೇಕಡಾ ೮೨.೮೫ರಷ್ಟು ಪುರುಷರು ಹಾಗೂ ಶೇಕಡಾ ೬೮.೧೩ರಷ್ಟು ಮಹಿಳೆಯರು ಆಗಿದ್ದಾರೆ.

ಕರ್ನಾಟಕದ ವ್ಯವಸಾಯವು ಆರ್ಥಿಕತೆಯ ಪ್ರಮುಖ ಬೆನ್ನೆಲುಬಾಗಿದ್ದು, ರಾಜ್ಯದ ಆದಾಯಕ್ಕೆ ಅಮೋಘ ಕೊಡುಗೆಯನ್ನು ನೀಡುತ್ತಿದೆ. ರಾಜ್ಯದ ಒಟ್ಟು ಜನಸಂಖ್ಯೆಯ ಶೇಕಡಾ ೬೦ಕ್ಕಿಂತಲೂ ಅಧಿಕ ಜನರು ಕೃಷಿಯನ್ನೇ ಅವಲಂಬಿಸಿದ್ದಾರೆ. ಕರ್ನಾಟಕದಲ್ಲಿ ಭತ್ತ, ಜೋಳ, ಗೋಧಿ, ರಾಗಿ, ಕಡಲೆ, ತೊಗರಿ, ಕಬ್ಬು, ತೆಂಗು, ಅಡಿಕೆ, ಹತ್ತಿ, ಕಾಫಿ, ಚಹ ಮುಂತಾದ ಬೆಳೆಗಳನ್ನು ಬೆಳೆಯಲಾಗುತ್ತದೆ. ಕರ್ನಾಟಕ ರಾಜ್ಯದಲ್ಲಿ ಸುಮಾರು ೩ ಕೋಟಿ ಕಾರ್ಮಿಕರಿದ್ದು ಇವರೆಲ್ಲಾ ರಾಜ್ಯದ ಹಾಗೂ ರಾಷ್ಟ್ರದ ಏಳಿಗೆಗಾಗಿ ಅನವರತ ದುಡಿಯುತ್ತಿದ್ದಾರೆ. ಕರ್ನಾಟಕದಲ್ಲಿ ಸಂಘಟಿತ ಹಾಗೂ ಅಸಂಘಟಿತ ಕ್ಷೇತ್ರದಲ್ಲಿ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ದುಡಿಯುತ್ತಿದ್ದಾರೆ.

೨.೨. ದಕ್ಷಿಣ ಕನ್ನಡ ಜಿಲ್ಲೆ

ಜಿಲ್ಲೆಯ ಹೆಸರಾದ 'ಕೆನರಾ' ಕನ್ನಡ ಅಥವಾ ಕರ್ಣಾಟಕವು ದ್ರಾವಿಡ ಶಬ್ದ 'ಕೆರ್'(ಕಪ್ಪು) ಮತ್ತು 'ನಾಡು' (ದೇಶ)ದಿಂದ ಉತ್ಪತ್ತಿ ಹೊಂದಿರುವುದಾಗಿದೆ. ಕರ್ಣಾಟ ಎಂಬುದು ಕ್ರಮೇಣ ಅಪಭ್ರಂಶವಾಗಿ 'ಕನ್ನಡ'ವಾಯಿತು. 'ಕೆನರಾ' ಎಂಬ ಆಂಗ್ಲ ಹೆಸರು ಪಶ್ಚಿಮ ಕರಾವಳಿಗೆ ಸೀಮಿತವಾಗಿದೆ. ೧೮೬೦ಕ್ಕಿಂತ ಹಿಂದೆ ದಕ್ಷಿಣ ಕನ್ನಡವು ಮದ್ರಾಸ್ ಪ್ರಾಂತ್ಯದ (ಪ್ರೆಸಿಡೆನ್ಸಿ)

ಆಡಳಿತ ವ್ಯಾಪ್ತಿಯಲ್ಲಿದ್ದ ಕೆನರಾ ಹೆಸರಿನ ದೊಡ್ಡ ಜಿಲ್ಲೆಯ ಒಂದು ಭಾಗವಾಗಿತ್ತು. ೧೮೬೦ರಲ್ಲಿ ಬ್ರಿಟಿಷರು ಈ ಪ್ರದೇಶವನ್ನು ಸೌತ್ ಕೆನರಾ ಮತ್ತು ನಾರ್ತ್ ಕೆನರಾ ಎಂದು ವಿಂಗಡಿಸಿದರು. ಸೌತ್ ಕೆನರಾವನ್ನು ಮದ್ರಾಸ ಪ್ರಾಂತ್ಯಕ್ಕೆ ಉಳಿಸಿಕೊಂಡು ೧೮೬೨ರಲ್ಲಿ ನಾರ್ತ್ ಕೆನರಾವನ್ನು ಬಾಂಬೆ ಪ್ರಾಂತ್ಯಕ್ಕೆ ಸೇರಿಸಲಾಯಿತು. (ಸ್ಟರೂಕ್, ೧೮೯೪)

೧೯೭೦ರಲ್ಲಿ 'ಸೌತ್ ಕೆನರಾ' ಹೆಸರನ್ನು ದಕ್ಷಿಣ ಕನ್ನಡವಾಗಿ ಬದಲಾಯಿಸಲಾಯಿತು. ಪ್ರಾರಂಭದಲ್ಲಿ, ದಕ್ಷಿಣ ಕನ್ನಡ ಜಿಲ್ಲೆಯು ಎಂಟು ತಾಲೂಕುಗಳನ್ನು ಒಳಗೊಂಡಿತ್ತು. ಇವುಗಳನ್ನು ಮೂರು ಕಂದಾಯ ಉಪವರ್ಗಗಳಾಗಿ ವಿಂಗಡಿಸಲಾಗಿತ್ತು. ಅವುಗಳೆಂದರೆ, ಕುಂದಾಪುರ, ಮಂಗಳೂರು ಮತ್ತು ಪುತ್ತೂರು ಜಿಲ್ಲೆಯ ಎಂಟು ತಾಲೂಕುಗಳು - ಬಂಟ್ವಾಳ, ಬೆಳ್ತಂಗಡಿ, ಕಾರ್ಕಳ, ಕುಂದಾಪುರ, ಮಂಗಳೂರು, ಪುತ್ತೂರು, ಸುಳ್ಯ, ಮತ್ತು ಉಡುಪಿ. ನಂತರ ೧೯೯೭ರಲ್ಲಿ ಆಡಳಿತವನ್ನು ಸುಗಮಗೊಳಿಸವುದಕ್ಕಾಗಿ ಕರ್ನಾಟಕ ಸರ್ಕಾರವು ಅಗಾಧವಾಗಿದ್ದ ದಕ್ಷಿಣಕನ್ನಡ ಜಿಲ್ಲೆಯನ್ನು ಉಡುಪಿ ಮತ್ತು ಈಗಿನ ದಕ್ಷಿಣ ಕನ್ನಡ ಜಿಲ್ಲೆಯಾಗಿ ವಿಭಜಿಸಿತು. (ಮುಕುಂದ ೨೦೦೨) ಜಿಲ್ಲೆಯ ಉತ್ತರ ಭಾಗದಲ್ಲಿರುವ ಮೂರು ತಾಲೂಕುಗಳಾದ ಕುಂದಾಪುರ, ಉಡುಪಿ ಮತ್ತು ಕಾರ್ಕಳ ಈಗ ಉಡುಪಿ ಜಿಲ್ಲೆಯಾಗಿ, ಉಳಿದ ಐದು ತಾಲೂಕುಗಳು ದಕ್ಷಿಣ ಕನ್ನಡ ಜಿಲ್ಲೆಯಾದವು.

ದಕ್ಷಿಣ ಕನ್ನಡ ಜಿಲ್ಲೆಯು (ಹಿಂದಿನ ಸೌತ್ ಕೆನರಾ ಜಿಲ್ಲೆ) ಭಾರತದ ಪಶ್ಚಿಮ ಕರಾವಳಿಯಲ್ಲಿ ಮುಂಬೈ ಮತ್ತು ಕನ್ಯಾಕುಮಾರಿಯ ನಡುವೆ ಇರುವಂತಹ ಕರ್ನಾಟಕದ ದಕ್ಷಿಣ ಕರಾವಳಿ ಜಿಲ್ಲೆಯಾಗಿದೆ. ಈ ಜಿಲ್ಲೆಯು ಕರ್ನಾಟಕದ ಕಡಲ ಕಿನಾರೆಯನ್ನು ಹೊಂದಿದ ಜಿಲ್ಲೆಯಾಗಿದ್ದು ಸುಮಾರು ೬೦ ಕಿ.ಮೀ. ಉದ್ದದ ಅರಬ್ಬಿ ಸಮುದ್ರದ ಕಡಲ ತೀರವನ್ನು ಹೊಂದಿದೆ. ಕರ್ನಾಟಕ ರಾಜ್ಯದ ಕರಾವಳಿ ಪ್ರದೇಶದಲ್ಲಿರುವ ದಕ್ಷಿಣ ಕನ್ನಡ ಜಿಲ್ಲೆಯು ಉತ್ತರದಲ್ಲಿ ಉಡುಪಿ ಜಿಲ್ಲೆಯನ್ನು ಈಶಾನ್ಯದಲ್ಲಿ ಚಿಕ್ಕಮಗಳೂರು ಜಿಲ್ಲೆಯನ್ನು ಪೂರ್ವದಲ್ಲಿ ಹಾಸನ, ಆಗ್ನೇಯದಲ್ಲಿ ಕೊಡಗು ಹಾಗೂ ದಕ್ಷಿಣಕ್ಕೆ ಕೇರಳದ ಕಾಸರಗೋಡು ಜಿಲ್ಲೆಗಳಿಂದ ಸುತ್ತುವರಿದಿದೆ. ಅರಬ್ಬೀ ಸಮುದ್ರವು ಪಶ್ಚಿಮದಲ್ಲಿದ್ದು ಇಲ್ಲಿಯ ಮುಖ್ಯ ಪಟ್ಟಣ ಮಂಗಳೂರಾಗಿದೆ. ದಕ್ಷಿಣ ಕನ್ನಡ ಜಿಲ್ಲೆಯು ೪,೭೭೦ ವ್ಯಾಪ್ತಿಯ ಚದರ ಕಿಲೋಮೀಟರ್ ವಿಸ್ತೀರ್ಣವನ್ನು ಹೊಂದಿದೆ. ಪ್ರತೀ ೧ ಚದರ ಕಿಲೋಮೀಟರ್‌ಗೆ ೩೯೦ ಮಂದಿ ಜನರನ್ನು ಒಳಗೊಂಡಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಟ್ಟು ೩೫೪ ಗ್ರಾಮಗಳಿವೆ. (ರಶ್ಮಿ ಕುಮಾರಿ, ಎ. ೨೦೧೦)

ದಕ್ಷಿಣ ಕನ್ನಡ ಜಿಲ್ಲೆಯು ಸುಮಾರು ೧೭೭ ಕಿಲೋಮೀಟರ್‌ಗಳಷ್ಟು ಉದ್ದವಿದೆ ಮತ್ತು ಇದರ ಅಗಲವು ಅತ್ಯಂತ ಕಿರಿದಾದ ಭಾಗದಲ್ಲಿ ೪೦ ಕಿಲೋಮೀಟರ್ ಹಾಗೂ ಅತ್ಯಂತ ಹಿರಿದಾದ ಭಾಗದಲ್ಲಿ ೮೦ ಕಿಲೋಮೀಟರ್‌ಗಳಷ್ಟು ಇದೆ (ಡಬ್ಲ್ಯುಡಬ್ಲ್ಯುಡಬ್ಲ್ಯು.ಗೂಗಲ್.ಕಾಮ್.ಡಿಸ್ಟ್ರಿಕ್ಟ್ ಪ್ರಾಫೈಲ್).

ಉತ್ತರದಿಂದ ದಕ್ಷಿಣಕ್ಕೆ ಇದು ಉದ್ದನೆಯ ತೆಳ್ಳಗಿನ ಭೂಪ್ರದೇಶವಾಗಿದ್ದು ಪೂರ್ವದಿಂದ ಪಶ್ಚಿಮಕ್ಕೆ ಪಶ್ಚಿಮ ಘಟ್ಟಗಳಿಂದ ಅರೇಬಿಯಾ ಸಮುದ್ರದವರೆಗೆ ಬಾಚಿಕೊಂಡಿರುವ ಕೆಳ ಪ್ರಸ್ಥಭುಮಿಯಾಗಿದೆ. ಇದರ ಬಹುತೇಕ ಉದ್ದನೆಯ ಭಾಗವು ಸಮುದ್ರ ತೀರದಲ್ಲಿದೆ (ಡಿಸ್ಟ್ರಿಕ್ಟ್ ಇಂಡಿಕೇಟರ್ಸ್ ಸೆನ್ಸ್‌ಸ್ ೨೦೧೧). ಪ್ರಾಕೃತಿಕ ಸಂಪತ್ತುಗಳಿಂದ ನಳನಳಿಸುತ್ತಿರುವ ದಕ್ಷಿಣ ಕನ್ನಡ ಜಿಲ್ಲೆಯು ೫ ತಾಲೂಕುಗಳಾಗಿ ವಿಂಗಡಿಸಲ್ಪಟ್ಟಿದೆ. ಅವುಗಳು ಮಂಗಳೂರು, ಬಂಟ್ವಾಳ, ಬೆಳ್ತಂಗಡಿ, ಪುತ್ತೂರು ಮತ್ತು ಸುಳ್ಯ. ದಕ್ಷಿಣ ಕನ್ನಡ, ಉಡುಪಿ ಮತ್ತು ಕಾಸರಗೋಡು ಪ್ರದೇಶಗಳಲ್ಲಿ ತುಳು ಬಹು ಜನರು ಆಡುವ ಭಾಷೆಯಾದ ಕಾರಣ ತುಳುನಾಡು ಎಂದು ಈಗಲೂ ಕರೆಯುವುದಿದೆ (ರಶ್ಮಿ ಕುಮಾರಿ ಎ., ೨೦೧೦). ಮಳೆಯಾಳಿ ಸಾಹಿತ್ಯದಲ್ಲಿ ಕೇರಳ ರಾಜ್ಯದ ಕಾಸರಗೋಡು ಜಿಲ್ಲೆಯ ಚಂದ್ರಗಿರಿ ನದಿಯಿಂದ ಉತ್ತರ ಕನ್ನಡದ ಗೋಕರ್ಣದವರೆಗಿನ ಪ್ರದೇಶವನ್ನು ತುಳುನಾಡೆಂದು ವರ್ಣಿಸಲಾಗಿದೆ. ದಕ್ಷಿಣ ಕನ್ನಡ ಜಿಲ್ಲೆಯು ಪುರಾಣ ಪ್ರಸಿದ್ಧ ಐತಿಹಾಸಿಕ ಹಿನ್ನೆಲೆಯುಳ್ಳ ಊರುಗಳನ್ನು ಹೊಂದಿದೆ. ಮಾತ್ರವಲ್ಲದೆ, ಸಂಪ್ರದಾಯ, ಪದ್ಧತಿ, ಆಚರಣೆ ಹೀಗೆ ಸಾಂಸ್ಕೃತಿಕ ನೆಲೆವೀಡಾಗಿ ಪ್ರಾಮುಖ್ಯತೆಯನ್ನು ಪಡೆದಿದೆ. ದಕ್ಷಿಣ ಕನ್ನಡ ಜಿಲ್ಲೆಯು ಉತ್ತಮ ರಸ್ತೆಗಳ ಜಾಲವನ್ನು ಹೊಂದಿದ್ದು, ಎನ್‌ಎಚ್ ೧೭, ಎನ್‌ಎಚ್ ೧೩ ಹಾಗೂ ಎನ್‌ಎಚ್ ೪೮ ಪ್ರಮುಖ ರಾಷ್ಟ್ರೀಯ ಹೆದ್ದಾರಿಗಳಾಗಿವೆ. ಮಾತ್ರವಲ್ಲದೆ ದಕ್ಷಿಣ ಕನ್ನಡ ಜಿಲ್ಲೆಯ ವ್ಯಾಪ್ತಿಯಲ್ಲಿ ಅಂತರಾಷ್ಟ್ರೀಯ ವಿಮಾನ ನಿಲ್ದಾಣ, ರೈಲು ನಿಲ್ದಾಣಗಳು, ಬಂದರುಗಳಿದ್ದು ದೂರ ಸಂಪರ್ಕವನ್ನು ಹೊಂದಿದೆ.

ಈ ಜಿಲ್ಲೆಯ ಪ್ರಮುಖ ವೃತ್ತಿ ಕೃಷಿಯಾಗಿದ್ದು, ಭತ್ತ, ಅಡಿಕೆ, ಕರಿಮೆಣಸು, ಕೊಕ್ಕೊಗಳು ಪ್ರಮುಖವಾಗಿ ಬೆಳೆಯುವ ಬೆಳೆಗಳಾಗಿವೆ. ಅಲ್ಲದೆ ಎಪಿಎಮ್‌ಸಿ ಮಾರುಕಟ್ಟೆ, ಹಾಲು ಶೀತಲೀಕರಣ ಘಟಕವನ್ನು ಹೊಂದಿರುವ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೈಗಾರಿಕಾ ಘಟಕಗಳೂ ಇದ್ದು ವಾಣಿಜ್ಯ ವ್ಯವಹಾರದ ಅಭಿವೃದ್ಧಿಗೆ ಕಾರಣವಾಗಿದೆ. ಬುದ್ಧಿವಂತ ಜಿಲ್ಲೆಯೆನಿಸಿರುವ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹಲವಾರು ಶೈಕ್ಷಣಿಕ ಹಾಗೂ ಸಂಶೋಧನಾ ಸಂಸ್ಥೆಗಳಿವೆ.

೨೦೧೧ರ ಜನಗಣತಿಯ ಪ್ರಕಾರ ದಕ್ಷಿಣ ಕನ್ನಡ ಜಿಲ್ಲೆಯ ಒಟ್ಟು ಜನಸಂಖ್ಯೆ ೧೬,೫೬,೧೬೫ ಆಗಿದ್ದು, ಇದರಲ್ಲಿ ೮,೧೯,೮೪೭ ಗಂಡಸರು ಹಾಗೂ ೮,೩೬,೩೧೮ ಹೆಂಗಸರು ಇದ್ದಾರೆ.

೨.೩. ಬಂಟ್ವಾಳ ತಾಲೂಕು

ಬಂಟ್ವಾಳ ಎಂಬ ಹೆಸರಿನ ಮೂಲದ ಬಗ್ಗೆ ವಿಭಿನ್ನ ಅಭಿಪ್ರಾಯಗಳಿವೆ. ಬಂಟ್ವಾಳ ಎಂಬುದು 'ಬಂಟ' ಎಂಬ ಜನಾಂಗದಿಂದ ಹುಟ್ಟಿಕೊಂಡ ಹೆಸರು ಎನ್ನುವುದು ಸಾಮಾನ್ಯ ಅಭಿಪ್ರಾಯ. ಶಬ್ಧ ಸಾಮ್ಯದ ದೃಷ್ಟಿಯಿಂದ ಮೇಲ್ನೋಟಕ್ಕೆ ಅದು ಸರಿ ಎನಿಸುವುದು ಸಹಜವೆ. ವಟವೃಕ್ಷಗಳಿಂದ ಕೂಡಿದ ಸ್ಥಳವಾದ್ದರಿಂದ ವಟವಾಳ = ಬಂಟವಾಳ ಎಂಬ ಹೆಸರು ಬಂತು ಎಂಬ ಅಭಿಪ್ರಾಯವೂ ಪ್ರಚಲಿತವಿದೆ. ಇದನ್ನೇ ಸಂಸ್ಕೃತೀಕರಣಗೊಳಿಸಿ 'ವಟಪುರ' ಎಂಬುದಾಗಿ ಈ ಊರನ್ನು ಗುರುತಿಸುವ ಸಂಪ್ರದಾಯವೂ ಇದೆ.

ಬಂಟ್ವಾಳ ಎಂಬ ಹೆಸರು ಈ ಎಲ್ಲ ಅಭಿಪ್ರಾಯಗಳಿಗಿಂತ ಭಿನ್ನವಾದ ಬೇರೆಯೇ ಮೂಲದಿಂದ ಹುಟ್ಟಿಕೊಂಡಿದೆ ಎಂಬ ಒಂದು ವಾದವೂ ಇದೆ. ಸಾಮಾನ್ಯವಾಗಿ ಒಂದು ಊರಿನ ಹೆಸರಿಗೆ ಅಲ್ಲಿನ ಭೌಗೋಳಿಕ ವೈಶಿಷ್ಟ್ಯಗಳೇ ಮೂಲವಾಗಿರುತ್ತದೆ ಎಂಬುದು ಸ್ಥಳ ನಾಮಾಧ್ಯಯನಗಳಿಂದ ಖಚಿತಗೊಂಡ ವಿಚಾರ, ತುಳುನಾಡಿನ ಶೇಕಡಾ ೭೫ಕ್ಕೂ ಹೆಚ್ಚಿನ ಸ್ಥಳನಾಮಗಳಿಗೆ ಆ ಸ್ಥಳಗಳ ಭೌಗೋಳಿಕ ವೈಶಿಷ್ಟ್ಯಗಳಾದ ಗುಡ್ಡಬೆಟ್ಟ, ಕಲ್ಲು, ನದಿ ಇತ್ಯಾದಿಗಳೇ ಮೂಲ ಎಂಬುದು ಅಧ್ಯಯನಗಳಿಂದ ಸ್ಪಷ್ಟವಾಗಿದೆ. ಬಂಟ್ವಾಳದಲ್ಲಿ ನೇತ್ರಾವತಿ ನದಿಯು ಹರಿಯುತ್ತಿದ್ದು, ಇಲ್ಲಿ ನದೀ ಪಾತ್ರವು ಬಂಡೆಕಲ್ಲುಗಳಿಂದ ತುಂಬಿಕೊಂಡಿರುವುದನ್ನು ಗಮನಿಸಬಹುದು. ಈ ಹಿನ್ನೆಲೆಯಲ್ಲಿ ಬಂಡೆಕಲ್ಲುಗಳಿಂದ ತುಂಬಿದ ನದಿಯಿಂದಾಗಿ ಬಂಡೆ + ಅಲ್ (ಆಲ್ = ನೀರು, ನದಿ) = ಬಂಡಾಲ್ = ಬಂಟಾಲ್ = ಬಂಟ್ವಾಳ ಎಂಬ ಹೆಸರು ಹುಟ್ಟಿಕೊಂಡಿರಬೇಕು ಎಂಬ ವಾದ ಹೆಚ್ಚು ಸ್ವೀಕಾರಾರ್ಹವೆನಿಸುತ್ತದೆ (ಮುಂಡಿಕ್ಕಾ ಗಣಪಯ್ಯ ಭಟ್, ೨೦೦೩).

ಬಂಟ್ವಾಳ ಭೌಗೋಳಿಕವಾಗಿ ಬೆಳ್ತಂಗಡಿ, ಪುತ್ತೂರು ಹಾಗೂ ಮಂಗಳೂರು ತಾಲೂಕಿನಿಂದ ಆವರಿಸಲ್ಪಟ್ಟಿದ್ದು ೭೩೫ ಚದರ ಕಿಲೋಮೀಟರ್ ವಿಸ್ತೀರ್ಣವನ್ನು ಹೊಂದಿದೆ. ಈ ಪ್ರದೇಶವು ವಾರ್ಷಿಕ ಸರಾಸರಿ ೩೮೩೩ ಮಿ.ಮೀ. ಮಳೆಯನ್ನು ಪಡೆಯುತ್ತದೆ. ೩,೬೧,೫೫೪ ಜನಸಂಖ್ಯೆಯನ್ನು ಹೊಂದಿದ್ದು, ಅದರಲ್ಲಿ ೧,೭೮,೬೬೪ ಪುರುಷರು ಮತ್ತು ೧,೮೨,೮೯೦ ಮಹಿಳೆಯರು. ಈ ತಾಲೂಕಿನ ಜನರ ಪ್ರಮುಖ ವೃತ್ತಿ ಕೃಷಿ. ಐತಿಹಾಸಿಕವಾಗಿ, ಸಾಂಸ್ಕೃತಿಕವಾಗಿ

ಭಿನ್ನತೆಯನ್ನು ಉಳಿಸಿಕೊಂಡ ಈ ಪ್ರದೇಶ ಹಲವು ತಿರುವುಗಳನ್ನು ಪಡೆಯುತ್ತಾ ೧-೧೦-೧೯೫೯ರಂದು ಈಗಿನ ಬಂಟ್ವಾಳ ತಾಲೂಕಿನ ರೂಪ ಪಡೆಯಿತು. ಪ್ರಸ್ತುತ ೩ ಹೋಬಳಿಗಳನ್ನು ಹೊಂದಿದ್ದು (ಬಂಟ್ವಾಳ, ಪಾಣೆಮಂಗಳೂರು, ವಿಟ್ಲ) ೮೪ ಗ್ರಾಮಗಳು, ೫೫ ಗ್ರಾಮ ಚಾವಡಿ, ೪೭ ಗ್ರಾಮ ಪಂಚಾಯತ್, ೩ ನಾಡ ಕಛೇರಿಗಳನ್ನು ಹೊಂದಿದೆ.

ಬಂಟ್ವಾಳ ತಾಲೂಕು ನಗರ ಹಾಗೂ ಗ್ರಾಮೀಣ ಪ್ರದೇಶಗಳನ್ನು ಒಳಗೊಂಡಿದೆ. ಗ್ರಾಮೀಣ ಜನಸಂಖ್ಯೆಯು ೩,೦೬,೭೩೪ ಆಗಿದ್ದು, ಇದರಲ್ಲಿ ೧,೫೧,೯೪ ಪುರುಷರು ಹಾಗೂ ೧,೫೫,೩೪೦ ಮಹಿಳೆಯರು. ನಗರ ಪ್ರದೇಶದ ಒಟ್ಟು ಜನಸಂಖ್ಯೆಯು ೫೪,೮೨೦ ಆಗಿದ್ದು, ಇದರಲ್ಲಿ ೨೭,೨೭೦ ಪುರುಷರು ಹಾಗೂ ೨೭,೫೫೦ ಮಹಿಳೆಯರು. ಗ್ರಾಮೀಣ ಪ್ರದೇಶದ ಸಾಕ್ಷರತಾ ಪ್ರಮಾಣ ಶೇಕಡಾ ೮೦.೨ ಆಗಿದ್ದು, ನಗರ ಪ್ರದೇಶದಲ್ಲಿ ಶೇಕಡಾ ೮೩.೧ ಆಗಿದೆ. ಬಂಟ್ವಾಳ ತಾಲೂಕು ೩ ನಗರಸಭೆ ಪಂಚಾಯತ್‌ಗಳನ್ನು, ೩ ಪೋಲಿಸ್ ಠಾಣೆಗಳನ್ನು ಹೊಂದಿದೆ. ತಾಲೂಕಿನಲ್ಲಿ ೧ ಸರಕಾರಿ ಆಸ್ಪತ್ರೆ, ೧೭ ಪ್ರಾಥಮಿಕ ಆರೋಗ್ಯ ಕೇಂದ್ರಗಳು, ೯೩ ಉಪಕೇಂದ್ರಗಳು, ೧೦೩ ಅಂಚೆ ಕಛೇರಿಗಳು, ೩೯ ಗ್ರಂಥಾಲಯಗಳು, ೯ ಸರ್ಕಾರಿ ವಿದ್ಯಾರ್ಥಿ ನಿಲಯಗಳು, ೪ ಅನಾಥ ಮಕ್ಕಳ ಕುಟೀರಗಳು, ೫೩೭ ಅಂಗನವಾಡಿ ಕೇಂದ್ರಗಳು, ೫ ವ್ಯಾಯಾಮ ಶಾಲೆಗಳು, ೨ ಪಶು ವೈದ್ಯಕೀಯ ಆಸ್ಪತ್ರೆಗಳು, ೩೬ ವಾಣಿಜ್ಯ ಬ್ಯಾಂಕುಗಳು, ೩ ಪ್ರಾದೇಶಿಕ ಗ್ರಾಮೀಣ ಬ್ಯಾಂಕು, ೨೮ ಕೃಷಿ ಸಹಕಾರ ಬ್ಯಾಂಕುಗಳು, ೩೫ ಹಾಲು ಉತ್ಪಾದಕರ ಸಹಕಾರ ಸಂಘಗಳು, ೪ ಕುಟುಂಬ ಕಲ್ಯಾಣ ಕೇಂದ್ರಗಳು, ೫೩ ಜನನ-ಮರಣ ನೋಂದಾವಣಿ ಕೇಂದ್ರಗಳು, ೫೯ ಮಹಿಳಾ ಮಂಡಳಿಗಳು, ೩೩ ಯುವತಿ ಮಂಡಳಿಗಳು, ೧,೨೩೧ ಸ್ವ-ಸಹಾಯ ಸಂಘಗಳು, ೨೯೮ ಪ್ರಾಥಮಿಕ ಶಾಲೆಗಳು, ೭೪ ಪ್ರೌಢ ಶಾಲೆಗಳು, ೨೩ ಪದವಿಪೂರ್ವ ಕಾಲೇಜುಗಳು ಹಾಗೂ ೭ ಪದವಿ ಕಾಲೇಜುಗಳು ಇವೆ.

ಪುರಾಣ ಪ್ರಸಿದ್ಧ ದೇವಸ್ಥಾನ, ಮಠ-ಮಸೀದಿ, ಚರ್ಚ್, ದೈವಸ್ಥಾನಗಳನ್ನು ಹೊಂದಿರುವ ಬಂಟ್ವಾಳ, ಅನಾದಿ ಕಾಲದಿಂದಲೂ ಕೋಮು ಸೌಹಾರ್ದತೆಗೆ ಪ್ರಸಿದ್ಧ. ಬಂಗರ, ಅಜಿಲರ ಹಾಗೂ ವಿಟ್ಲದರಸರ ಆಡಳಿತಕ್ಕೊಳಪಟ್ಟ ಈ ಪ್ರದೇಶ ನಂತರದ ದಿನಗಳಲ್ಲಿ ಕಲಹ ಕೇಂದ್ರವಾಗಿಯೂ ಗಮನ ಸೆಳೆದ ನಾಡು. ಅವಳಿ ಪಟ್ಟಣಗಳಾದ ಬಂಟ್ವಾಳ - ಪಾಣೆಮಂಗಳೂರು ಪುರಾತನ ಕಾಲದಿಂದಲೇ ಪ್ರಸಿದ್ಧ ವ್ಯಾಪಾರಿ ಕೇಂದ್ರಗಳು (ತುಕಾರಾಂ ಪೂಜಾರಿ, ೨೦೦೩) ಹಿಂದಿನ ಕಾಲದಲ್ಲಿ ಬಂಟ್ವಾಳ ತಾಲೂಕು ವ್ಯಾಪಾರ ವ್ಯವಹಾರಕ್ಕೆ ಹೆಸರುವಾಸಿಯಾಗಿತ್ತು. ಆದರೆ, ಮಳೆಗಾಲದಲ್ಲಿ ನೇತ್ರಾವತಿ ನದಿಯಲ್ಲಿ ಬರುವ ಪ್ರವಾಹದಿಂದಾಗಿ ವ್ಯಾಪಾರ ವಹಿವಾಟುಗಳು

ಹಾಗೂ ವಸಾಹತುಗಳು ಉನ್ನತ ಭಂಗಿಯಿಂದ ನಳನಳಿಸುತ್ತಿರುವ ಹತ್ತಿರದ ಪಟ್ಟಣವಾದ (ಸೀಮಾಂತರ ಪ್ರದೇಶ) ಬಿ.ಸಿ.ರೋಡಿಗೆ ವರ್ಗಾಯಿಸಲ್ಪಟ್ಟವು. ಮಾತ್ರವಲ್ಲದೆ, ಸರಕಾರಿ ಕಛೇರಿಗಳು ಕೂಡಾ ಬಿ.ಸಿ.ರೋಡಿಗೆ ವರ್ಗಾಯಿಸಲ್ಪಟ್ಟವು.

೧೯೫೯ರಲ್ಲಿ ನೂತನವಾಗಿ ರಚನೆಗೊಂಡ ಬಂಟ್ವಾಳ ತಾಲೂಕು, ಬಂಟ್ವಾಳ, ಪಾಣೆಮಂಗಳೂರು, ವಿಟ್ಲ ಎಂಬ ಮೂರು ಹೋಬಳಿಗಳಿಂದಲೂ ೮೪ ಗ್ರಾಮಗಳಿಂದಲೂ ಕೂಡಿದೆ. ಈ ಮೂರು ಕೇಂದ್ರಗಳು ಕೂಡಾ ಇತಿಹಾಸ ಪ್ರಸಿದ್ಧ ಸ್ಥಳಗಳಾಗಿದ್ದು, ಜಾನಪದ ಪ್ರಕಾರಗಳಾದ ಗಾದೆ, ಐತಿಹ್ಯ, ಪಾಡ್ದನ, ಕತೆಗಳಲ್ಲಿ ಅಲ್ಲಲ್ಲಿ ಉಲ್ಲೇಖಗೊಳ್ಳುತ್ತವೆ. ತಾಲೂಕಿನ ಮಧ್ಯದಿಂದ ಹರಿಯುವ ದಕ್ಷಿಣ ಕನ್ನಡ ಜಿಲ್ಲೆಯ ಮುಖ್ಯ ನದಿಗಳಲ್ಲೊಂದಾದ ನೇತ್ರಾವತಿ ಇಕ್ಕೆಡೆಗಳಲ್ಲಿರುವ ಬಯಲುಗಳಿಗೆ ನೀರುಣಿಸಿ, ಸಸ್ಯ ಸಮೃದ್ಧಿಗೊಳಿಸಿದೆ. ತುಂಬೆಯಲ್ಲಿ ನೇತ್ರಾವತಿ ನದಿಗೆ ಅಡ್ಡಲಾಗಿ ಕಟ್ಟಿರುವ ವೆಂಟೆಡ್ ಡ್ಯಾಂನಿಂದಾಗಿ ಮಂಗಳೂರಿಗೆ ನಿರಂತರ ನೀರಿನ ಸರಬರಾಜು ಆಗುತ್ತದೆ. ತಾಲೂಕಿನ ಒಂದು ಭಾಗದಲ್ಲಿ ಕಳೆಂಜಿಮಲೆ, ಕೊಡ್ಯಮಲೆ, ಸುಳ್ಳಮಲೆಗಳೆಂಬ ಮೂರು ಮಲೆಗಳು ಒಟ್ಟಾಗಿ ಅರಣ್ಯ ಸಂಪತ್ತನ್ನು ಹೆಚ್ಚಿಸಿವೆ. ಪೊಳಲಿ, ಕಾರಿಂಜೆ, ನರಹರಿ ಬೆಟ್ಟ, ಅಜಿಲಮೊಗರು, ಕಡೇಶಿವಾಲಯ ಮೊದಲಾದ ಪುಣ್ಯಕ್ಷೇತ್ರಗಳು ಇಲ್ಲಿವೆ. ಅಂತೆಯೇ ನೂರಾರು ದೈವಸ್ಥಾನಗಳಿವೆ.

ಬಂಟ್ವಾಳ ತಾಲೂಕಿನಿಂದ ಮಂಗಳೂರಿಗೆ ಇರುವ ದೂರ ೨೪ ಕಿಲೋ ಮೀಟರ್‌ಗಳು. ಒಂದು ಕಾಲದಲ್ಲಿ ಮಂಗಳೂರಿಗಿಂತಲೂ ಮಿಗಿಲಾದ ವ್ಯಾಪಾರ ಕೇಂದ್ರ ಬಂಟ್ವಾಳವಾಗಿತ್ತು. ಈ ನಗರವನ್ನು ಈಗಲೂ ಪ್ರಮುಖ ವ್ಯಾಪಾರ ಕೇಂದ್ರ ಎಂದು ಕರೆಯಲಾಗುತ್ತದೆ. ದಿನಸಿ ವಸ್ತುಗಳು, ತಂಬಾಕು, ಕಬ್ಬಿಣದ ವಸ್ತುಗಳು, ಹಾಗೂ ಮುಖ್ಯವಾಗಿ ಚಿನ್ನದ ವ್ಯಾಪಾರವು ಪ್ರಮುಖ ಪಾತ್ರ ವಹಿಸುತ್ತದೆ. ನೇತ್ರಾವತಿಯ ಒಂದು ದಂಡೆಯಲ್ಲಿ ಬಂಟ್ವಾಳವಾದರೆ ಅದಕ್ಕೆ ಸರಿಸಮಾನವಾಗಿರುವ ಪೇಟೆ ಇನ್ನೊಂದು ದಂಡೆಯಲ್ಲಿ ಪಾಣೆಮಂಗಳೂರು ವ್ಯಾಪಾರ ವೃತ್ತಿಯ ಗೌಡ ಸಾರಸ್ವತ ಬ್ರಾಹ್ಮಣರು ಹಾಗೂ ದೂರದ ಊರುಗಳಿಂದ ಹಲವಾರು ಶ್ರೀಮಂತರುಗಳು ವ್ಯಾಪಾರಕ್ಕಾಗಿ ಇಲ್ಲಿಗೆ ಬರುತ್ತಿದ್ದರು (ಪಾಲ್ತಾಡಿ ರಾಮಕೃಷ್ಣ ಆಚಾರ್, ೨೦೦೩).

ಬಂಟ್ವಾಳ ತಾಲೂಕು ೧೨°೫೩'-೪೬' ಉತ್ತರ ಅಕ್ಷಾಂಶ ಹಾಗೂ ೭೫°೦೨'-೨೮' ಪೂರ್ವ ರೇಖಾಂಶದ ನಡುವೆ ಇದೆ. ಬಂಟ್ವಾಳ ತಾಲೂಕು ಸಮುದ್ರ ಮಟ್ಟಕ್ಕಿಂತ ೨೧ ಅಡಿ ಎತ್ತರದಲ್ಲಿದೆ.

ಆಡಳಿತದ ಅನುಕೂಲಕ್ಕಾಗಿ ಕಾಲಕಾಲಕ್ಕೆ ಬಂಟ್ವಾಳ ಮಾರ್ಪಡನ್ನು ಪಡೆಯುತ್ತಾ ೧೯೫೯ರಲ್ಲಿ ಸ್ವತಂತ್ರ ತಾಲೂಕಾಗಿ ರೂಪುಗೊಂಡಿತು. ಇದು ಈಗಿನ ದಕ್ಷಿಣ ಕನ್ನಡ ಜಿಲ್ಲೆಯ ೫ ತಾಲೂಕುಗಳಲ್ಲಿ ಅತೀ ಕಿರಿದಾದುದೂ ಹೌದು. ಜಿಲ್ಲೆಯ ಇತರ ಭಾಗಗಳಂತೆ ಇಲ್ಲಿಯೂ ಕೃಷಿಯೇ ಪ್ರಧಾನ ವೃತ್ತಿ. ಆದರೆ, ಇಂದು ಪ್ರಮುಖ ವೃತ್ತಿಯಾದ ಕೃಷಿ ಕಣ್ಮರೆಯಾಗುತ್ತಿದೆ. ವ್ಯಾಪಾರಿ ಬೆಳೆಗಳಾದ ಕಂಗು –ತೆಂಗಿನ ಬೆಳೆ ಪ್ರಧಾನವಾಗುತ್ತಿದೆ.

ಬಂಟ್ವಾಳ ತಾಲೂಕಿನಲ್ಲಿರುವ ಒಟ್ಟು ಕೃಷಿ ಕಾರ್ಮಿಕರ ಸಂಖ್ಯೆ ೧೧,೭೮೫. ಇದರಲ್ಲಿ ೮,೨೨೧ ಪುರುಷರು ಹಾಗೂ ೩,೫೬೪ ಮಹಿಳೆಯರು. ೨೦೦೯–೧೦ರ ಅವಧಿಯಲ್ಲಿ ವ್ಯವಸಾಯಕ್ಕಾಗಿ ಒಟ್ಟು ಬಳಕೆಯಾದ ಬೀಳು ಭೂಮಿ ೯೭೪ (ಹೆಕ್ಟೇರುಗಳಲ್ಲಿ) ಹಾಗೂ ಬಿತ್ತನೆಯಾಗಿರುವ ಪ್ರದೇಶ ೩೪೬೭೦ (ಹೆಕ್ಟೇರುಗಳಲ್ಲಿ) ಈ ಅವಧಿಯಲ್ಲಿ ನೀರಾವರಿಯಾದ ಒಟ್ಟು ನಿವ್ವಳ ಪ್ರದೇಶ ಹೆಕ್ಟೇರುಗಳಲ್ಲಿ ೧೫,೭೨೪. ಬಂಟ್ವಾಳ ತಾಲೂಕಿನಲ್ಲಿರುವ ಒಟ್ಟು ಗೃಹ ಕೈಗಾರಿಕಾ ಕೆಲಸಗಾರರು ೧೦,೬೮೬. ಇದರಲ್ಲಿ ೨,೧೯೬ ಪುರುಷರು, ೮,೪೯೦ ಮಹಿಳೆಯರು ಮಾತ್ರವಲ್ಲದೆ, ಇತರ ಕೆಲಸಗಾರರು ೧,೬೪,೦೩೭ ಇದರಲ್ಲಿ ೮೬,೫೮೧ ಪುರುಷರು, ೭೭,೪೫೬ ಮಹಿಳೆಯರು. ಬಂಟ್ವಾಳ ತಾಲೂಕಿನಲ್ಲಿ ಕೈಗಾರಿಕಾ ವಲಯದಲ್ಲಿ ಕೆಲಸಮಾಡುವ ಉದ್ಯೋಗಿಗಳ ಸಂಖ್ಯೆ ೨,೨೫೫. ಇದರಲ್ಲಿ ೧,೫೫೭ ಪುರುಷರು ಹಾಗೂ ೧,೧೨೩ ಮಹಿಳೆಯರು.

ಗ್ರಾಮಗಳಲ್ಲಿ ಸಾಂಪ್ರದಾಯಿಕವಾಗಿ, ಮಹಿಳೆಯರು ಸಾಮಾನ್ಯವಾಗಿ ಗೃಹ ಕೃತ್ಯಗಳಲ್ಲಿ ತೊಡಗಿರುತ್ತಾರೆ (ಪ್ರೇಮಲತಾ, ೨೦೧೦). ನಮಗೆಲ್ಲ ತಿಳಿದಿರುವ ಹಾಗೆ ಮನೆ ವಾರ್ತೆಗಳಲ್ಲಿ ನೂರಾರು ಬಗೆಗಳಿರುತ್ತವೆ. ಅದು ಮನೆ ಒಳಗೆ ಮತ್ತು ಹೊರಗೆ ಶುಚಿಗೊಳಿಸುವುದು, ಅಡುಗೆ ಮಾಡುವುದು, ಬಟ್ಟೆ ಒಗೆಯುವುದು, ಪಾತ್ರೆ ತೊಳೆಯುವುದು, ಶಿಶುಗಳ, ವೃದ್ಧರ ಶುಶ್ರೂಷೆ ಮಾಡುವುದು ಇತ್ಯಾದಿ. ಆದರೆ ಈ ದುಡಿಮೆಗೆ ಕ್ರಯ ಪಟ್ಟಿ ಇರುವುದಿಲ್ಲ ಮತ್ತು ಮಾರುಕಟ್ಟೆಯ ಮಹತ್ವವಿರುವುದಿಲ್ಲ (ಗೋವಿಂದರಾಜು ಬಿ.ಎಂ. ೨೦೦೭). ಗ್ರಾಮೀಣ ಪ್ರದೇಶಗಳಲ್ಲಿ ಕೃಷಿಯಲ್ಲಿ ಹೆಚ್ಚಿನ ಚಟುವಟಿಕೆಗಳು ಮಹಿಳೆಯರನ್ನು ಆಧರಿಸಿರುವುದರಿಂದ ಕೃಷಿಯಲ್ಲಿ ಮಹಿಳೆಯರು ಕೇಂದ್ರ ಬಿಂದುವಾಗಿದ್ದಾರೆ. ಕೃಷಿ ಮಾತ್ರವಲ್ಲದೆ, ಕೃಷಿಯೇತರ ವಲಯಗಳಿಗೆ ಸಂಬಂಧಿಸಿದ ಹಲವಾರು ಕ್ಷೇತ್ರಗಳಲ್ಲಿ ಮಹಿಳೆಯರು ಪ್ರಮುಖ ಪಾತ್ರ ವಹಿಸುತ್ತಾರೆ. ಬಂಟ್ವಾಳದಲ್ಲಿ ಕೃಷಿ ಕಾರ್ಮಿಕರು ಮಾತ್ರವಲ್ಲದೆ, ಬೀಡಿ ಕಾರ್ಮಿಕರು, ಮನೆ ಕೆಲಸದವರು, ತರಕಾರಿ, ಹೂ, ಹಣ್ಣು ಕಾಯಿ ಬೆಳೆಸುವವರು ಮತ್ತು ಮಾರುವವರು, ಕಲ್ಲು ಮಣ್ಣಿನ ಕೆಲಸ ಮಾಡುವವರು, ಜವಳಿ ಕಾರ್ಖಾನೆಗಳಲ್ಲಿ, ಬಟ್ಟೆ ಅಂಗಡಿಗಳಲ್ಲಿ ಕೆಲಸ ಮಾಡುವವರು, ಬುಟ್ಟಿ, ಚಾಪೆ, ಕರಕುಶಲ

ವಸ್ತುಗಳನ್ನು ತಯಾರಿಸುವವರು, ಗುಡಿ ಕೈಗಾರಿಕೆಗಳಲ್ಲಿ ದುಡಿಯುವವರು, ಆಹಾರ ವಸ್ತುಗಳ ತಯಾರಕರು ಇದ್ದಾರೆ. ಈ ಎಲ್ಲಾ ಕಾರ್ಮಿಕರು ಅಸಂಘಟಿತ ವಲಯದಲ್ಲಿ ದುಡಿಯುತ್ತಿದ್ದು, ಇವರ ಭವಿಷ್ಯಕ್ಕೆ ಯಾವುದೇ ಭದ್ರತೆ ಇಲ್ಲದಂತಾಗಿದೆ. ಸರಕಾರವು ಅಸಂಘಟಿತ ವಲಯದಲ್ಲಿ ದುಡಿಯುವ ಕಾರ್ಮಿಕರಿಗಾಗಿ ಹಲವಾರು ಯೋಜನೆಗಳನ್ನು ಜಾರಿಗೆ ತಂದರೂ, ಅದರಲ್ಲೂ ಮಹಿಳಾ ಕಾರ್ಮಿಕರಿಗೆ ಸಂವಿಧಾನಾತ್ಮಕವಾಗಿ ರಕ್ಷಣೆ ನೀಡಲು ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡರೂ, ಈ ಎಲ್ಲಾ ಕಾರ್ಯಕ್ರಮಗಳು ಕಾರ್ಮಿಕರನ್ನು ತಲುಪುವಲ್ಲಿ ವಿಫಲವಾಗಿದೆ. ಆದ್ದರಿಂದ ಮಹಿಳಾ ಕಾರ್ಮಿಕರು ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಈ ಅಧ್ಯಯನದಲ್ಲಿ ಮಹಿಳಾ ಕಾರ್ಮಿಕರ ಸಮಸ್ಯೆಗಳ ಬಗ್ಗೆ ತಿಳಿಯುವ ಪ್ರಯತ್ನ ನಡೆಸಲಾಗುತ್ತಿದೆ.

ಅಧ್ಯಾಯ-೩
ಗ್ರಾಮೀಣ ಮಹಿಳಾ ಕಾರ್ಮಿಕರ ಸಮಸ್ಯೆಗಳು

ಅಧ್ಯಾಯ – ೩

ಗ್ರಾಮೀಣ ಮಹಿಳಾ ಕಾರ್ಮಿಕರ ಸಮಸ್ಯೆಗಳು

೩.೧. ಭಾರತದಲ್ಲಿ ಗ್ರಾಮೀಣ ಮಹಿಳಾ ಕಾರ್ಮಿಕರ ಸಮಸ್ಯೆಗಳು

ಭಾರತವು ಸ್ವಾತಂತ್ರ್ಯವನ್ನು ಪಡೆದ ಮೇಲೆ ಸ್ತ್ರೀಯರ ಸ್ಥಾನಮಾನವನ್ನು ಹೆಚ್ಚಿಸುವ ಹಾಗೂ ಕಲ್ಯಾಣವನ್ನು ಸಾಧಿಸುವ ದೃಷ್ಟಿಯಿಂದ ಹಲವಾರು ಶಾಸನಾತ್ಮಕ, ಶೈಕ್ಷಣಿಕ, ಆರ್ಥಿಕ ಮತ್ತಿತರ ಕ್ರಮಗಳನ್ನು ಕೈಗೊಳ್ಳಲಾಯಿತು. ಸ್ವತಂತ್ರ ಭಾರತದ ಸಂವಿಧಾನವು ೧೯೫೦ರ ಜನವರಿ ೨೬ರಂದಿನಿಂದ ಜ್ಯಾರಿಗೊಂಡ ಮೇಲೆ ಕಾನೂನಿನಾತ್ಮಕವಾಗಿ ಸ್ತ್ರೀಯರು ಎಲ್ಲಾ ವಿಷಯಗಳಲ್ಲೂ ಪುರುಷರಿಗೆ ಸಮಾನರೇ ಆಗಿದ್ದಾರೆ. ಸಂವಿಧಾನದ ೧೪ ಮತ್ತು ೧೫ನೇ ವಿಧಿಗಳು ಸಮಾನತೆಯ ಹಕ್ಕನ್ನು ದೇಶದ ಎಲ್ಲಾ ಪೌರರಿಗೆ ಯಾವುದೇ ಬಗೆಯ ವರ್ಣಭೇದ, ಜಾತಿ ಭೇದ, ಮತಭೇದ, ಪಕ್ಷಭೇದ, ಲಿಂಗ ಭೇದವಿಲ್ಲದಂತೆ ಸಮಾನವಾಗಿಯೇ ನೀಡುತ್ತವೆ. ಸಂವಿಧಾನದ ಪ್ರಸ್ತಾವನೆಯಲ್ಲಿಯೂ ಸಮಾನತೆಯ ತತ್ವವನ್ನು ರಾಷ್ಟ್ರವು ಸ್ವೀಕರಿಸಿದೆ ಎಂದು ಹೇಳಲಾಗಿದೆ. ಭಾರತೀಯ ಸಂವಿಧಾನವು ಸ್ತ್ರೀಯರಿಗೂ ಕೂಡಾ ಪುರುಷರಿಗೆ ಸಮಾನವಾದ – ವೈಯಕ್ತಿಕ ಸ್ವಾತಂತ್ರ್ಯ ಮೂಲಭೂತ ಹಕ್ಕುಗಳು, ವಿಚಾರ ಸ್ವಾತಂತ್ರ್ಯ, ಅಭಿವ್ಯಕ್ತಿ ಸ್ವಾತಂತ್ರ್ಯ, ಧಾರ್ಮಿಕ ವೈವಾಹಿಕ, ರಾಜಕೀಯ, ಶೈಕ್ಷಣಿಕ – ಹೀಗೆ ಎಲ್ಲಾ ಬಗೆಯ ಸ್ವಾತಂತ್ರ್ಯವನ್ನು ನೀಡಿರುವ ಭರವಸೆ ನೀಡಿದೆ (ಶಂಕರರಾವ್, ೧೯೯೧). ಆದರೆ ಪುರುಷ ಪ್ರಧಾನ ಸಂಪ್ರದಾಯಗಳು ಅಸ್ತಿತ್ವದಲ್ಲಿರುವ ಈ ಸಮಾಜದಲ್ಲಿ ಮಹಿಳೆಯರ ಜೀವನ ಶೈಲಿಯನ್ನು ಶತಮಾನಗಳಷ್ಟು ಹಳೆಯದಾದ ರೂಢಿ ರಿವಾಜುಗಳು ನಿರ್ಧರಿಸುತ್ತವೆ. (ಬಿರಾದಾರ್, ೨೦೦೭) ಪುರುಷ ಪ್ರಧಾನ ಸಮಾಜದ ಫಲವಾಗಿ ಮಹಿಳೆ ಅನೇಕ ಅವಕಾಶಗಳಿಂದ ವಂಚಿತಳಾಗುತ್ತಾ, ದ್ವಿತೀಯ ದರ್ಜೆಯ ಪ್ರಜೆಯಂತೆ ಬದುಕುತ್ತಾ ಬಂದಿದ್ದಾಳೆ. ತನ್ನದೇ ಬದುಕಿನ ನಿರ್ಣಯಗಳನ್ನು ತೆಗೆದುಕೊಳ್ಳಲಾಗದಂತಹ ಸಮಾಜದ ಕಟ್ಟುಪಾಡುಗಳಲ್ಲಿ ಬಂದಿಯಾಗಿದ್ದಾಳೆ. ಪ್ರತಿಯೊಂದಕ್ಕೂ ಪುರುಷರನ್ನೇ ಅವಲಂಬಿಸಿ ಪರಾವಲಂಬಿಯಾಗಿಯೇ ಬದುಕುವಳು (ಮೇಗಲಮನಿ, ೨೦೦೭). ಭಾರತದ ಕಳೆದುಹೋಗುತ್ತಿರುವ ಮಹಿಳೆಯರ ಬಗ್ಗೆ ನಮಗೆ ಕಾಳಜಿ ಇರುವುದೇ ಆಗಿದ್ದರೆ "ಜೆಂಡರ್ ಸೆನ್ಸಿಟೈಸೇಷನ್" (ಲಿಂಗ ಸಂವೇದನೆ) ಅಭಿವೃದ್ಧಿಯ ಎಲ್ಲ ಆಯಾಮಗಳನ್ನು ಸ್ಪರ್ಶಿಸಬೇಕು – ಕೆಲಸ/ನಿವೃತ್ತಿ, ಆರೋಗ್ಯ, ಶಿಕ್ಷಣ, ಕೌಶಲ್ಯ, ಉದ್ಯಮಶೀಲತೆ, ಕುಟುಂಬ, ಸಾಮುದಾಯಿಕ-ಸಹ್ಯ ಬದುಕು, ಹೀಗೆ (ಹನ್ಸ್, ೨೦೦೯).

ಶತಮಾನಗಳುದ್ದಕ್ಕೂ ಭಾರತೀಯ ಮಹಿಳೆಯರು ಹಲವಾರು ರೀತಿಯ ಸಮಸ್ಯೆಗಳನ್ನು ಎದುರಿಸುತ್ತಾ ಬಂದಿದ್ದಾರೆ. ಮಹಿಳೆಯರು ಎದುರಿಸುತ್ತಿರುವ ಹಲವಾರು ಸಮಸ್ಯೆಗಳನ್ನು ಕೊನೆಗಾಣಿಸಲು ಸಾಕಷ್ಟು ಪ್ರಯತ್ನಗಳು ನಡೆದುದರಿಂದ ಕೆಲವು ಸಮಸ್ಯೆಗಳು ಇಲ್ಲವಾಗಿವೆ. ಸತೀ ಪದ್ಧತಿ, ಬಾಲ್ಯವಿವಾಹ, ವಿಧವೆಯರ ಶೋಷಣೆ, ವಿಧವಾ ಪುನರ್ವಿವಾಹ ನಿಷೇಧ, ದೇವದಾಸೀ ಪದ್ಧತಿ- ಮುಂತಾದ ಸಮಸ್ಯೆಗಳು ಈಗ ಬಹುತೇಕ ಕಣ್ಮರೆಯಾಗಿದೆ. ಶಿಕ್ಷಣದ ವ್ಯಾಪಕತೆ, ನಗರೀಕರಣ, ಪಾಶ್ಚಾತ್ಯೀಕರಣ, ಆರ್ಥಿಕ-ವೈಜ್ಞಾನಿಕ ಬೆಳವಣಿಗೆ, ರಾಜಕೀಯ-ಸಾಮಾಜಿಕ ಆಂದೋಲನಗಳು, ಆಧುನೀಕರಣ ಮುಂತಾದ ಬೆಳವಣಿಗೆಗಳಿಂದಾಗಿ ಅವರ ಅಂತಸ್ತಿನ ಸುಧಾರಣೆಯಾಗತೊಡಗಿತು. ಆದರೆ, ಸ್ತ್ರೀಯರಿಗೆ ಉತ್ತಮ ಸ್ಥಾನಮಾನಗಳನ್ನು ನೀಡಲಾಗಿದೆ ಎಂದ ಮಾತ್ರಕ್ಕೆ ಅವರು ಸಮಸ್ಯೆಗಳಿಂದ ಮುಕ್ತರು ಎನ್ನುವಂತಿರಲಿಲ್ಲ. ಏಕೆಂದರೆ ಆಧುನಿಕ ಸ್ವತಂತ್ರ ಭಾರತದ ಸ್ತ್ರೀಯರು ಹಲವಾರು ಹೊಸಹೊಸ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಅವುಗಳಲ್ಲಿ ಸ್ತ್ರೀ ಶಿಕ್ಷಣದ ಸಮಸ್ಯೆಗಳು, ಹೆಚ್ಚುತ್ತಿರುವ ಸ್ತ್ರೀಯರ ವಿರುದ್ಧದ ಅಪರಾಧಗಳು, ಕ್ಷೀಣಿಸುತ್ತಿರುವ ಸ್ತ್ರೀಯರ ಸಂಖ್ಯಾ ಪ್ರಮಾಣ ಸ್ತ್ರೀಯರ ಆರೋಗ್ಯದ ಸಮಸ್ಯೆ, ತಾರತಮ್ಯಕ್ಕೆ ಒಳಗಾಗಿರುವ ಹೆಣ್ಣು ಶಿಶುಗಳು, ಸ್ತ್ರೀಯರ ಉದ್ಯೋಗ ಹಾಗೂ ನಿರುದ್ಯೋಗದ ಸಮಸ್ಯೆಗಳು ಇತ್ಯಾದಿ.

ಭಾರತ ದೇಶವು ಹೆಚ್ಚು ಗ್ರಾಮೀಣ ಪ್ರದೇಶಗಳನ್ನು ಒಳಗೊಂಡಿರುವುದರಿಂದ, ಹಳ್ಳಿಗಳ ನಾಡು ಎಂಬ ಬಿರುದು ಪಡೆದುಕೊಂಡಿದೆ. ದೇಶದಲ್ಲಿ ಶೇಕಡಾ ೬೫ರಷ್ಟು ಜನಸಂಖ್ಯೆ ಕೃಷಿಯನ್ನು ಅವಲಂಬಿಸಿದೆ. ಗ್ರಾಮೀಣ ಪ್ರದೇಶದಲ್ಲಿ ಸುಮಾರು ಶೇಕಡಾ ೮೨.೫ರಷ್ಟು ಮಹಿಳೆಯರು ವಾಸಿಸುತ್ತಿದ್ದಾರೆ. ಹೆಚ್ಚಿನ ಕೃಷಿ ಚಟುವಟಿಕೆಗಳು ಮಹಿಳೆಯರನ್ನು ಆಧರಿಸಿರುವುದರಿಂದ, ಕೃಷಿಯಲ್ಲಿ ಮಹಿಳೆಯರು ಕೇಂದ್ರಬಿಂದುವಾಗಿದ್ದಾರೆ. ಗ್ರಾಮೀಣ ಪ್ರದೇಶಗಳಲ್ಲಿ ಹೆಚ್ಚಿನ ಮಹಿಳೆಯರು ಕೃಷಿಕರು ಅಥವಾ ಕೃಷಿ ಕಾರ್ಮಿಕರು ಆದರೆ, ನಗರ ಪ್ರದೇಶದ ಮಹಿಳೆಯರು ಗೃಹ ಕೈಗಾರಿಕೆ, ಸಣ್ಣ ಪುಟ್ಟ ವ್ಯಾಪಾರ, ಸೇವಾ ಕ್ಷೇತ್ರ, ಕಟ್ಟಡ ನಿರ್ಮಾಣ ಇತ್ಯಾದಿ ಕ್ಷೇತ್ರಗಳಲ್ಲಿ ದುಡಿಯುತ್ತಿದ್ದಾರೆ. ನಗರಗಳ ಮಹಿಳೆಯರಿಗೆ ಹೋಲಿಸಿದರೆ, ಗ್ರಾಮೀಣ ಮಹಿಳೆಯರು ಆರ್ಥಿಕ ಚಟುವಟಿಕೆಗಳಲ್ಲಿ ಮೇಲುಗೈ ಸಾಧಿಸಿದ್ದಾರೆ. ಆರ್ಥಿಕ ಬೆಳವಣಿಗೆಯ ಸ್ವರೂಪ, ವ್ಯವಸಾಯದ ಯಾಂತ್ರೀಕರಣ, ವಾಣಿಜ್ಯೀಕರಣ, ಮಾನವ ಶ್ರಮ ಉಳಿತಾಯ ವಾಗುವಂತಹ ಯೋಜನೆಗಳು, ಗುಡಿ ಕೈಗಾರಿಕೆಗಳು, ಕುಶಲ ಕಲೆಗಳು ಮತ್ತು ಪರಂಪರಾಗತವಾದ ವೃತ್ತಿಗಳ ಅವನತಿ, ಏರುತ್ತಿರುವ ಜನಸಂಖ್ಯೆಯಲ್ಲಿ ಪುರುಷರಿಗೆ

ಉದ್ಯೋಗದಲ್ಲಿಯೂ ಪ್ರಥಮ ಪ್ರಾಶಸ್ತ್ಯ ಲಭಿಸುತ್ತಿರುವಿಕೆ – ಈ ಮೊದಲಾದ ಕಾರಣಗಳಿಂದಾಗಿ ಸ್ತ್ರೀಯರ ಆರ್ಥಿಕ ಸಹಭಾಗಿತ್ವವು ಕುಂಠಿತವಾಗಿವೆ ಎನ್ನಬಹುದು. ಸ್ತ್ರೀಯರನ್ನು ಕಡಿಮೆ ಬೆಲೆಯ, ಕುಶಲರಹಿತ ಹಾಗೂ ದ್ವಿತೀಯ ದರ್ಜೆಯ ದುಡಿಮೆಯ ಶಕ್ತಿಮೂಲವೆಂದು ಪರಿಗಣಿಸಲಾಗಿರುವುದರಿಂದ ಅವರನ್ನು ಹೇಗೆಂದರೆ ಹಾಗೆ ಬಳಕೆ ಮಾಡಬಹುದೆಂದು ಉದ್ಯೋಗಪತಿಗಳು ಭಾವಿಸುತ್ತಾರೆ. ಪರಿಣಾಮವಾಗಿ ಸ್ತ್ರೀಯರ ನಿರುದ್ಯೋಗ ಹೆಚ್ಚಿದೆ ಮತ್ತು ಉದ್ಯೋಗಗಳಲ್ಲಿರುವ ಸ್ತೀಯರಿಗೂ ರಕ್ಷಣೆಯಿಲ್ಲದೆ ಶೋಷಿತರಾಗುತ್ತಿದ್ದಾರೆ. ದೇಶದ ಒಟ್ಟು ನಿರುದ್ಯೋಗಿಗಳಲ್ಲಿ ಸ್ತ್ರೀಯರ ಪ್ರಮಾಣವು ಮೂರನೇ ಎರಡಷ್ಟಿದೆ (ಶಂಕರರಾವ್, ೧೯೯೧).

ಗ್ರಾಮೀಣ ಪ್ರದೇಶದ ಮಹಿಳಾ ಕಾರ್ಮಿಕರು ಉದ್ಯೋಗದಲ್ಲಿ ಹಲವಾರು ರೀತಿಯ ಶೋಷಣೆ ಹಾಗೂ ತಾರತಮ್ಯಗಳನ್ನು ಅನುಭವಿಸುತ್ತಿದ್ದಾರೆ. ಮಹಿಳಾ ಸಾಕ್ಷರತಾ ಪ್ರಮಾಣದಲ್ಲಾದ ಹೆಚ್ಚಳ ಹಾಗೂ ಆಧುನಿಕ ಕೈಗಾರಿಕಾ ಕ್ಷೇತ್ರ ಒದಗಿಸಿಕೊಟ್ಟಿರುವ ಆರ್ಥಿಕಾವಕಾಶಗಳಿಂದಾಗಿ ಸ್ತ್ರೀಯರು ಹೆಚ್ಚಿನ ಸಂಖ್ಯೆಯಲ್ಲಿ ನಾನಾ ವಿಧವಾದ ವೃತ್ತಿಗಳಿಗೆ ಸೇರಿಕೊಳ್ಳುತ್ತಿದ್ದರೂ, ಭಾರತದಂತಹ ದೇಶದಲ್ಲಿ ಸ್ತ್ರೀಯರ ಆರ್ಥಿಕ ಸಹಭಾಗಿತ್ವವು ಕ್ಷೀಣಿಸುತ್ತಾ ಸಾಗಿದೆ. ಅದೇ ರೀತಿ ದುಡಿಮೆಯ ಕ್ಷೇತ್ರದಲ್ಲಿರುವ ಸ್ತ್ರೀಯರ ಸಂಖ್ಯೆಯು ದೇಶದ ಸ್ತ್ರೀಯರ ಒಟ್ಟು ಸಂಖ್ಯೆಗೆ ಹೋಲಿಸಿದಾಗ ಕಡಿಮೆಯಾಗುತ್ತಲೇ ಸಾಗಿದೆ. ಮಹಿಳೆಯರು ಸಂಘಟಿತ ಹಾಗೂ ಅಸಂಘಟಿತ ಕ್ಷೇತ್ರಗಳೆರಡರಲ್ಲೂ ದುಡಿಯುತ್ತಿದ್ದು, ಸಂಘಟಿತ ಕ್ಷೇತ್ರಗಳ ಸ್ತ್ರೀ ಉದ್ಯೋಗಿಗಳ ಸ್ಥಿತಿ ಸ್ವಲ್ಪ ಉತ್ತಮವಿದೆ ಎನ್ನಬಹುದು. ಆದರೆ ಸಂಘಟಿತ ಕ್ಷೇತ್ರದಲ್ಲೂ ಕೆಲವು ಸ್ತ್ರೀಯರು ಮಾತ್ರ ಉದ್ಯೋಗ ಕಳೆದುಕೊಳ್ಳದ ಭರವಸೆಯೊಂದಿಗೆ ಉದ್ಯೋಗ ಸಂತೃಪ್ತಿಯನ್ನು ಹೊಂದಿರುತ್ತಾರೆ. ಆದರೆ ಹೊಲ-ಗದ್ದೆಗಳಲ್ಲಿ, ಕಾರ್ಖಾನೆಗಳಲ್ಲಿ, ಗಣಿಗಳಲ್ಲಿ, ಕಟ್ಟಡ, ಅಣೆಕಟ್ಟು, ಸೇತುವೆ ಮುಂತಾದ ನಿರ್ಮಾಣ ಕಾರ್ಯದಲ್ಲಿ, ಸಣ್ಣ ಗಾತ್ರದ ಹಾಗೂ ಗೃಹಕೈಗಾರಿಕೆಗಳಲ್ಲಿ ತೊಡಗಿರುವ ಮಹಿಳಾ ಉದ್ಯೋಗಿಗಳ ಉದ್ಯೋಗದ ಪರಿಸರ ಹಾಗೂ ಪರಿಸ್ಥಿತಿಗಳು ಬಹಳ ಅನಾರೋಗ್ಯಕರವೂ, ಅಮಾನವೀಯವಾದವುಗಳು ಆಗಿವೆ.

ಕೃಷಿ ಮಾತ್ರವಲ್ಲದೆ ಕೈಗಾರಿಕಾ ಕ್ಷೇತ್ರದಲ್ಲಿಯೂ ನಡೆಯುವಂತಹ ತಾಂತ್ರಿಕ ಬೆಳವಣಿಗೆಯಿಂದಾಗಿ, ಹಲವಾರು ಮಹಿಳೆಯರು ಉದ್ಯೋಗವನ್ನು ಕಳೆದುಕೊಳ್ಳುತ್ತಾರೆ. ಬದಲಾಗಿ ಪುರುಷರು ಅಧಿಕ ಉದ್ಯೋಗ ಲಾಭವನ್ನು ಪಡೆದುಕೊಳ್ಳುತ್ತಾರೆ. ಗ್ರಾಮಗಳಲ್ಲಿ ಹೊರವಲಯದ ಯಾವುದೇ ಕೆಲಸಗಳಿರಲಿ ಇಂದಿನ ದಿನಗಳಲ್ಲಿ ಮಹಿಳೆಯರಿಗೆ ಬೇಡಿಕೆ

ಹೆಚ್ಚು, ಭತ್ತದ ಬೇಸಾಯದಲ್ಲಿ, ಅಡಿಕೆ, ತೆಂಗು, ಕಾಫಿ, ಏಲಕ್ಕಿ, ಚಹಾ ತೋಟಗಳಲ್ಲಿ, ದ್ರಾಕ್ಷಿ, ಕಿತ್ತಳೆ ಮುಂತಾದ ಹಣ್ಣಿನ ತೋಟಗಳಲ್ಲಿ ದಿನಗೂಲಿ ದುಡಿತದಲ್ಲಿ ಮಹಿಳೆಯರು ಕಂಡುಬರುತ್ತಾರೆ. ಪುರುಷ ಕಾರ್ಮಿಕರು ತನಗೆ ದಿನಕ್ಕೆ ಅಧಿಕ ಮೊತ್ತದ ದಿನಗೂಲಿ ಸಿಗಬೇಕು ಎಂದು ಬಯಸುವುದರಿಂದ ಅದನ್ನು ಕೊಡಲಾಗದವರು ಮಹಿಳಾ ಕಾರ್ಮಿಕರಿಗೆ ಮೊರೆ ಹೋಗುತ್ತಾರೆ. ದುಡಿತದಲ್ಲಿ ಎಂದೆಂದಿಗೂ ಹಿಂದೆ ಸರಿಯದೆ, ಎಷ್ಟೇ ಭಾರದ ಹೊರೆಯನ್ನಾದರೂ ನಿರ್ಲಕ್ಷದಿಂದ ಹೊರುವ ಹಾಗೂ ತೀರಾ ನಾಜೂಕಿನ ಕೆಲಸಗಳನ್ನು ಲಕ್ಷ್ಯವಿತ್ತು ಮಾಡುವ ಸಾಮರ್ಥ್ಯವನ್ನು ಗ್ರಾಮೀಣ ಮಹಿಳೆಯರು ಹೊಂದಿದ್ದಾರೆ. ಆದರೂ, ಮನೆಯಲ್ಲಿ ಹಾಗೂ ದುಡಿಯುವ ಕ್ಷೇತ್ರದಲ್ಲಿ ನಿರಂತರವಾಗಿ ಪುರುಷರಿಂದ ತಾರತಮ್ಯ ಹಾಗೂ ಶೋಷಣೆಗೆ ಒಳಗಾಗುತ್ತಾ ಬಂದಿದ್ದಾರೆ.

ಕಾರ್ಮಿಕ ಎಂಬ ಪದವು ಏಕತ್ರೀಕರಣಗೊಳಿಸದ ವಿಭಾಗವಾಗಿದ್ದು ಇದರಲ್ಲಿ ಎರಡು ವಿಧಗಳನ್ನು ಜೋಡಿಸಲಾಗಿದೆ. ಅವುಗಳೆಂದರೆ, 'ಫಲದಾಯಕ' ಮತ್ತು 'ಫಲದಾಯಕವಲ್ಲದ'. ಫಲದಾಯಕ ಕಾರ್ಮಿಕ ಎಂಬ ಪದವು ನೇರ ಉತ್ಪಾದಕರನ್ನು ಉದ್ದೇಶಿಸಿ ಇರುತ್ತದೆ. ಇವರು ಬಂಡವಾಳ'ಶಾಹಿ ಉದ್ದಿಮೆಗಳಲ್ಲಿ ಹೆಚ್ಚುವರಿ ಮೌಲ್ಯಗಳನ್ನು ಸೃಷ್ಟಿಸುತ್ತಾರೆ. ಇದರಿಂದ ಉತ್ಪಾದಕ ಬಂಡವಾಳ ಶಾಹಿಗಳಿಗೆ ಇವರನ್ನು ಉಚಿತ ರೀತಿಯಿಂದ ಬಳಸುವುದು ಸಾಧ್ಯವಾಗುತ್ತದೆ. ದುಡಿಮೆಗೆ ಸಂಬಂಧಿಸಿದ ಉಳಿದ ಚಟುವಟಿಕೆಗಳನ್ನು ಅನುತ್ಪಾದಕರವೆಂದು ಹೆಸರಿಸಲಾಗಿದೆ (ಚಕ್ರವರ್ತಿ, ೨೦೦೮) ಭಾರತೀಯ ದುಡಿಮೆಯ ಮುಖ್ಯ ಲಕ್ಷಣವೆಂದರೆ, ವಲಸಿಗೆ ಕಾರ್ಮಿಕರು. ಬಡತನ, ಅನಕ್ಷರತೆ, ಜಾತಿ ಪದ್ಧತಿ, ರೀತಿ – ರಿವಾಜುಗಳು, ಸಂಪ್ರದಾಯಗಳು, ಧರ್ಮ, ಪ್ರದೇಶ, ಲಿಂಗ ಇತ್ಯಾದಿಗಳು ಮತ್ತು ನಿರುದ್ಯೋಗ, ಹಿಂದೂ ಧರ್ಮದಲ್ಲಿನ ಸಾಮಾಜಿಕ ವರ್ಗಗಳ ವಿನ್ಯಾಸವನ್ನು ಜಾತಿ ವ್ಯವಸ್ಥೆ ಎಂದು ಕರೆಯಲಾಗುತ್ತದೆ. ಇದರಲ್ಲಿ ಮೂಲಭೂತ ಜಾತಿಯು ವರ್ಣವಾಗಿದೆ. ಉಪಜಾತಿ ಅಥವಾ ಜಾತಿ, ಹುಟ್ಟು, ಬದುಕು, ಮಟ್ಟ ಇವುಗಳು ವರ್ಣದ ಉಪವರ್ಗಗಳಾಗಿವೆ. ವರ್ಣ ವ್ಯವಸ್ಥೆಯು ಜನರು ನಿರ್ವಹಿಸುವ ಕೆಲಸ ಮತ್ತು ಅವರ ದೈನಂದಿನ ಜೀವನದ ಚಟುವಟಿಕೆಯನ್ನು ಆದರಿಸಿದ ಸಾಮಾಜಿಕ ಕ್ರಮವಾಗಿದೆ (ಬರ್ಜೊಜಾ, ೨೦೧೧).

ಭಾರತದ ಗ್ರಾಮೀಣ ಪ್ರದೇಶಗಳಲ್ಲಿ ಉತ್ಪದನೆ ಮತ್ತು ತಯಾರಿಕೆಯ ಚಟುವಟಿಕೆಗಳನ್ನು ಅನುವಂಶಿಕ ಕರಕುಶಲಕರ್ಮಿಗಳೇ ನಡೆಸುತ್ತಿದ್ದರು. ಇದರಿಂದಾಗಿ, ಸಾಂಪ್ರದಾಯಿಕ ಸಂಬಂಧವುಳ್ಳ ಕೃಷಿ ಸಂಬಂಧಿ ಜಾತಿಗಳ ಉಗಮವಾಯಿತು.

ಗ್ರಾಮವೊಂದರ ಬಹುದೊಡ್ಡ ಜಮೀನಿನ ಮೇಲೆ ಜಾತಿಯೊಂದು ಮಾಲಕತ್ವವನ್ನು ಮತ್ತು ಸಂಖ್ಯಾಬಲವನ್ನು ಹೊಂದಿರುವ ಸಂದರ್ಭದಲ್ಲಿ ಅದು ಗ್ರಾಮದ ವ್ಯವಹಾರಗಳಲ್ಲಿ ಪ್ರಾಬಲ್ಯವನ್ನು ಸ್ಥಾಪಿಸಿಕೊಳ್ಳುತ್ತದೆ. ಅದಕ್ಕನುಗುಣವಾಗಿ ಪ್ರತಿಯೊಬ್ಬರೂ ಅದರ ಕಟ್ಟಳೆಗಳಿಗೆ ಬದ್ಧವಾಗಿ ಇರುತ್ತಾರೆ. ಇವುಗಳು ಪ್ರಬಲಜಾತಿಗಳೆಂದು ಕರೆಯಲ್ಪಡುತ್ತವೆ. ಭೂರಹಿತ ಮತ್ತು ಸಾಂಪ್ರದಾಯಿಕ ಅಸ್ಪೃಶ್ಯ ಜಾತಿಗಳಲ್ಲಿ ಇರುವ ವ್ಯಾಪಕತೆ, ಬಡತನ, ದುಃಖ ಮತ್ತು ಶೋಷಣೆ ಹೆಚ್ಚಾಗುವುದಕ್ಕೆ ಈ ವಿಚಾರವೇ ಮುಖ್ಯ ಕಾರಣವಾಗಿದೆ. ಪರಂಪರಾಗತವಾಗಿ ಪ್ರತಿಯೊಬ್ಬ ದೊಡ್ಡ ಭೂಮಾಲಿಕನು ಗೇಣಿದಾರರು ಮತ್ತು ಪಾಲು ಕೃಷಿಕರೊಂದಿಗೆ, ತನ್ನ ಮತ್ತು ತನ್ನ ಮನೆ ಕೆಲಸವನ್ನು ಮಾಡುವ ಇನ್ನೂ ಕೆಲವು ಜೀತದಾಳುಗಳನ್ನು ಕೂಡಾ ಹೊಂದಿರುತ್ತಾರೆ. ಕೂಲಿ ಕಾರ್ಮಿಕರು ಹಾಗೂ ಜೀತದಾಳುಗಳು ಭೂಮಾಲಿಕನಿಂದ ನಿರಂತರವಾಗಿ ಶೋಷಣೆಗೆ ಒಳಗಾಗುತ್ತಿದ್ದರು. ಈ ಕಾರ್ಮಿಕರ ಜೀವನಕ್ಕೆ ಯಾವುದೇ ರೀತಿಯ ಭದ್ರತೆ ಇರಲಿಲ್ಲ.

ನಮ್ಮ ಸಮಾಜದಲ್ಲಿ ಸಾಮಾನ್ಯವಾಗಿ ಕಾರ್ಮಿಕರನ್ನು ಮನ್ನಣೆ ದೊರೆಯದ ಅಂದರೆ ಯಾವುದೇ ರೀತಿಯ ಸವಲತ್ತುಗಳಿಲ್ಲದ ವರ್ಗವಾಗಿ ಪರಿಗಣಿಸಲಾಗುತ್ತದೆ. ಕಾರ್ಖಾನೆ, ಗಣಿಗಳಲ್ಲಿ ಕಾರ್ಮಿಕರು ನಿರ್ವಹಿಸತಕ್ಕಂತಹ ಯಾವುದೇ, ಕೆಲಸವಿರಲಿ, ಅಲ್ಲಿಯ ಪರಿಸರ ಉತ್ತಮವಿರುವುದಿಲ್ಲ. ಯಾಕೆಂದರೆ ಇಲ್ಲಿ ನಡೆಯುವ ಉತ್ಪಾದನಾ ಚಟುವಟಿಕೆಗಳು, ಶಾಖ, ಸದ್ದು, ಹೊಗೆ ಇತ್ಯಾದಿಗಳನ್ನು ಸೃಷ್ಟಿಸುವುದರಿಂದ ಇವು ಕಾರ್ಮಿಕರ ಮೇಲೆ ಕೆಟ್ಟ ಪರಿಣಾಮ ಬೀರುತ್ತವೆ. ಉತ್ಪಾದನಾ ಕಾರ್ಯಗತಿಗಳಲ್ಲಿಯೇ ಸೇರಿಕೊಂಡಿರುವ ಮತ್ತು ಅನಿವಾರ್ಯವೆನಿಸುವ ವೃತ್ತಿ ಸಂಬಂಧಿ ಅಪಾಯಗಳು ಮತ್ತು ಪರಿಸರ ಸಮಸ್ಯೆಗಳು ಅಲ್ಲಿ ಇರುತ್ತವೆ. ಇವು'ಗಳನ್ನು ತೆಗೆಯುವುದಾಗಲೀ ಕಡಿಮೆ ಮಾಡುವುದಾಗಲೀ ಸಾಧ್ಯವಿಲ್ಲ (ಕುಡ್‌ಚೆಡಕರ್, ೧೯೭೯).

ಹದಿನೆಂಟನೆಯ ಶತಮಾನದ ಪ್ರಾರಂಭಲ್ಲಿ ಇಂಗ್ಲೆಂಡಿನಲ್ಲಿ ನಡೆದಿರತಕ್ಕಂತಹ ಕೃಷಿ ಕ್ರಾಂತಿಯು ಕೃಷಿ ಯಾಂತ್ರೀಕರಣಕ್ಕೆ ದಾರಿ ಮಾಡಿಕೊಟ್ಟದ್ದರಿಂದಾಗಿ ಅಪಾರ ಸಂಖ್ಯೆಯ ಗ್ರಾಮೀಣ ಜನರು ಕೃಷಿಯಿಂದ ಬೇರ್ಪಡುವ ಪರಿಸ್ಥಿತಿ ಉಂಟಾಯಿತು. ವಿವೇಚನೆಯಿಲ್ಲದ ಮಧ್ಯಸ್ಥಿಕೆದಾರರು ಈ ಮುಗ್ಧಜನರನ್ನು ಒಟ್ಟುಗೂಡಿಸಿ ಕಾರ್ಖಾನೆಗಳಿಗೆ ತಂದುಬಿಟ್ಟರು. ಆನರ ಆರ್ಥಿಕ ಚಟುವಟಿಕೆಗಳಲ್ಲಿ ಮಧ್ಯಪ್ರವೇಶಿಸಿ ಅವರನ್ನು ನಿಯಂತ್ರಿಸುವ ಅಧಿಕಾರ ಸರ್ಕಾರಕ್ಕೆ ಇಲ್ಲದ್ದರಿಂದ, ದಿನವೊಂದರಲ್ಲಿ ೧೮ರಿಂದ ೨೦ ಗಂಟೆಗಳ ಕಾಲ ಅತ್ಯಲ್ಪ ಕೂಲಿಗೆ ಈ

ಕಾರ್ಮಿಕರನ್ನು ಉದ್ಯೋಗದಾತರು ದುಡಿಸತೊಡಗಿದರು. (ಮುತಾಲಿಕ್ ಮತ್ತು ರೈಸಿಕರ್, ೧೯೮೦). ಮಹಿಳೆಯರ ಮತ್ತು ಮಕ್ಕಳ ದುಡಿಮೆಯು ಇನ್ನೂ ಅಗ್ಗವಾಗಿದ್ದುದರಿಂದ ಅವರನ್ನು ಅಪಾರ ಸಂಖ್ಯೆಯಲ್ಲಿ ಕೆಲಸಕ್ಕೆ ನೇಮಿಸಿಕೊಳ್ಳಲಾಯಿತು. ಅವರನ್ನು ಭೂಗರ್ಭ (ನೆಲದಡಿಯ) ಗಣಿಗಳಲ್ಲಿ ಕೂಡಾ ದುಡಿಸಿಕೊಳ್ಳಲಾಯಿತು. ಇದರಿಂದ ಕಾರ್ಮಿಕರು ಕೊಳೆಗೇರಿಗಳ ಶೋಚನೀಯ ಸ್ಥಿತಿಯಲ್ಲಿ ಬದುಕುವಂತಾಯಿತು. ಇವರ ದುಡಿಮೆಯ ಫಲವನ್ನು ಉಂಡು ಶ್ರೀಮಂತರು ಇನ್ನಷ್ಟು ಶ್ರೀಮಂತಿಕೆಯನ್ನು ಹೊಂದಿದರು. ಹೀಗೆ ಬಡ, ಅನಕ್ಷರಸ್ಥ ಹಾಗೂ ಅಸಂಘಟಿತ ಸ್ಥಿತಿಯಲ್ಲಿರುವ ಕಾರ್ಮಿಕರನ್ನು ಗರಿಷ್ಟ ಪ್ರಮಾಣದಲ್ಲಿ ಶೋಷಿಸುವುದು ಶ್ರೀಮಂತರಿಗೆ ಸಾಧ್ಯವಾಯಿತು.

ಗ್ರಾಮೀಣ ಪ್ರದೇಶಗಳಲ್ಲಿ ಪುರುಷರಿಗೆ ಸರಿಸಮನಾಗಿ ಅನೇಕ ರಂಗಗಳಲ್ಲಿ ದುಡಿಯುವ ಮಹಿಳೆಯರಿಗೆ ಸಮನಾದ ವೇತನ ಲಭಿಸದೇ ಇರುವುದು. ಮಹಿಳಾ ಕಾರ್ಮಿಕರು ಒಂದು ಪ್ರಮುಖವಾದ ಸಮಸ್ಯೆಯಾಗಿದೆ. ಗ್ರಾಮೀಣ ಪ್ರದೇಶದ ಬಹುತೇಕ ದುಡಿಯುವ ಮಹಿಳೆಯರು ಅನಕ್ಷರಸ್ಥರೂ, ಅವಿದ್ಯಾವಂತರೂ ಆಗಿದ್ದಾರೆ. ಇವರಲ್ಲಿ ಮುಖ್ಯವಾಗಿ ದೈಹಿಕ ದುಡಿಮೆ ಮಾಡುವ ಮಹಿಳೆಯರೇ ಹೆಚ್ಚಾಗಿದ್ದು, ಪಡೆಯುವ ವೇತನ ಪುರುಷರ ವೇತನದ ಮೂರನೇ ಎರಡು ಭಾಗ ಮಾತ್ರ, ಉದ್ಯೋಗ ಮತ್ತು ವೇತನಕ್ಕೆ ಸಂಬಂಧಿಸಿದಂತೆ ಲಿಂಗದ ಆಧಾರದ ಮೇಲೆ ಮಹಿಳೆಯರಿಗೆ ತಾರತಮ್ಯ ಮಾಡುವುದನ್ನು ೧೯೭೬ರ ಸಮಾನ ವೇತನ ಕಾಯಿದೆ ನಿರ್ಬಂಧಿಸುತ್ತದೆ. ಆದರೆ, ಈ ಕಾಯಿದೆ ಜಾರಿಯಲ್ಲಿದ್ದು, ಗ್ರಾಮೀಣ ಮಹಿಳೆಯರು ವೇತನದಲ್ಲಿ ತಾರತಮ್ಯ ಅನುಭವಿಸುತ್ತಿದ್ದಾರೆ. ಮಾತ್ರವಲ್ಲದೆ, ಇಂದು ಬೆಳೆಯುತ್ತಿರುವ ಜನಸಂಖ್ಯೆಯಿಂದಾಗಿ ಗ್ರಾಮಗಳಲ್ಲಿಯೂ ಸ್ತ್ರೀ ನಿರುದ್ಯೋಗಿಗಳು ತುಂಬಿಕೊಂಡಿದ್ದಾರೆ. ದೇಹಬಲ, ಬುದ್ಧಿ ಬಲ, ಹುಮ್ಮಸ್ಸು ಇವರಿಗಿದ್ದರೂ ಕೆಲಸಗಳಿಲ್ಲದೆ ಹಲವು ಸಮಸ್ಯೆಗಳ್ನನು ಎದುರಿಸುತ್ತಾರೆ. ಆದುದರಿಂದ ತಮ್ಮ ಸಮಸ್ಯೆಗಳಿಗೆ ಇತರರಿಂದ ಸಹಾಯವನ್ನು ಅಪೇಕ್ಷಿಸುವ ಬದಲು ಗ್ರಾಮೀಣ ಮಹಿಳೆಯರೆಲ್ಲ ಒಂದಾಗಿ ತಮ್ಮ ದುಡಿಮೆಯ ಕ್ಷೇತ್ರ, ದುಡಿಮೆಗೆ ಸಿಗುವ ವೇತನ, ತಮ್ಮ ಲಾಭ ನಷ್ಟ ಇವನ್ನು ನೋಡಿಕೊಂಡು ಅಗತ್ಯವೆನಿಸಿದಲ್ಲಿ ಧೈರ್ಯ, ಆತ್ಮವಿಶ್ವಾಸದಿಂದ ಹೆಚ್ಚಿನ ವೇತನ ಅಥವಾ ಸೌಲಭ್ಯಗಳಿಗಾಗಿ ಹೋರಾಡಲು ಸಿದ್ಧರಾಗಬೇಕು (ಅಂಗಡಿ ಮತ್ತು ಚಂದ್ರಶೇಖರ, ೨೦೦೭) ಗ್ರಾಮೀಣ ಪ್ರದೇಶದಲ್ಲಿ ಮಹಿಳೆಯರು ಕೃಷಿ ಮಾತ್ರವಲ್ಲದೆ, ಬೀಡಿಕಟ್ಟುವುದು, ಹೈನುಗಾರಿಕೆ,

ಮನೆಕೆಲಸ, ದಿನಗೂಲಿಗಾಗಿ ಕೆಲಸ ಇತ್ಯಾದಿ ವೃತ್ತಿಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದಾರೆ.

ಭಾರತೀಯ ಕಾರ್ಮಿಕ ಶಾಸನವು ಮಹಿಳೆಯರನ್ನು ಶೋಷಣೆಯಿಂದ ಸಂರಕ್ಷಿಸುವಲ್ಲಿ ಒಂದು ಮುಖ್ಯವಾದ ಆಯಾಮವಾಗಿದ್ದು, ಮಹಿಳಾ ಕಾರ್ಮಿಕರಿಗೆ ವಿಶೇಷ ಸವಲತ್ತುಗಳನ್ನು ಒದಗಿಸಲು ಸಂವಿಧಾನವು ರಾಜ್ಯಗಳಿಗೆ ಅವಕಾಶ ನೀಡಿದೆ. ಹಲವಾರು ಕಾರ್ಮಿಕ ಶಾಸನಗಳು ದುಡಿಯುವ ಮಹಿಳೆಯರ ರಕ್ಷಣೆ ಮತ್ತು ಕಲ್ಯಾಣಕ್ಕೆ ಸಂಬಂಧಿಸಿದಂತೆ ನಿರ್ದಿಷ್ಟ ಸವಲತ್ತುಗಳನ್ನು ನೀಡುತ್ತವೆ. ಆದರೆ, ಕೆಲವು ವಲಯಗಳಲ್ಲಿ ಕಾರ್ಮಿಕ ಶಾಸನಗಳ ಅಸಮರ್ಪಕ ಅನುಷ್ಠಾನದಿಂದಾಗಿ ವಾಸ್ತವವಾಗಿ ಮಹಿಳಾ ಕಾರ್ಮಿಕರಿಗೆ ಈ ಸೌಲಭ್ಯಗಳು ದೊರಕುತ್ತಿಲ್ಲ. ಮಾತ್ರವಲ್ಲದೆ, ಉದ್ಯೋಗದಾತರು ತಮ್ಮ ಹಿತಾಸಕ್ತಿಗಳಿಗನುಗುಣವಾಗಿ ಶಾಸನಗಳನ್ನು ತಿರುಚುತ್ತಿರುವುದು ಮತ್ತು ಕಾನೂನುಗಳನ್ನು ಪಾಲಿಸಲು ಸಾಧ್ಯವಾಗದಿದ್ದರೆ ಅಂತಹ ಸಂದರ್ಭದಲ್ಲಿ ಮಹಿಳಾ ಕಾರ್ಮಿಕರನ್ನು ವಜಾಗೊಳಿಸಿ, ಅವರ ಆರ್ಥಿಕ ತಳಹದಿಗೆ ತೊಂದರೆಯನ್ನುಂಟು ಮಾಡುವುದು ಸಾಮಾನ್ಯವಾಗಿದೆ. ಆದುದರಿಂದ ಮಹಿಳಾ ಕಾರ್ಮಿಕರು ಕಾನೂನು ಅವರಿಗೆ ನೀಡಿರುವ ಮೂಲಭೂತ ಹಕ್ಕುಗಳ ಬಗ್ಗೆ ತಿಳಿದುಕೊಳ್ಳಬೇಕಾಗಿದೆ (ರಾಮಕೃಷ್ಣ ಮತ್ತು ತುಲಸಿ ಮಾಲಾ, ೨೦೦೭).

ಭಾರತದಲ್ಲಿ ಮಹಿಳಾ ಕಾರ್ಮಿಕರಿಗಾಗಿ ರಕ್ಷಣಾತ್ಮಕ ಶಾಸನಗಳನ್ನು ರೂಪಿಸಿದ್ದರೂ, ಅವುಗಳ ಅನುಷ್ಠಾನ ಕಷ್ಟಕರವಾಗಿದೆ. ಏಕೆಂದರೆ, ಹೆಚ್ಚಿನ ಮಹಿಳಾ ಕಾರ್ಮಿಕರು ಅನಕ್ಷರಸ್ಥರೂ, ಕಾನೂನಿನ ಅರಿವಿನ ಕೊರತೆ ಇರುವವರೂ, ದುರ್ಬಲರೂ ಆಗಿದ್ದಾರೆ. ಇದು ಗ್ರಾಮೀಣ ಪ್ರದೇಶದಲ್ಲಿ ಮಾತ್ರವಲ್ಲದೆ, ನಗರ ಪ್ರದೇಶದ ಮಹಿಳಾ ಕಾರ್ಮಿಕರರಲ್ಲಿಯೂ ಕಂಡುಬರುತ್ತದೆ. ಆದುದರಿಂದ ಕಾರ್ಮಿಕ ಕಾನೂನುಗಳ ಎಲ್ಲ ಮಹಿಳಾ ಕಾರ್ಮಿಕರಿಗೂ ವಿಸ್ತರಿಸಲ್ಪಡಬೇಕು. ಹಾಗೂ ಅವುಗಳ ಬಹಳ ಕಟ್ಟುನಿಟ್ಟಿನ ಅನುಷ್ಠಾನ ಅತೀ ಅಗತ್ಯವಾಗಿದೆ.

೩.೨. ಕರ್ನಾಟಕದಲ್ಲಿನ ಗ್ರಾಮೀಣ ಮಹಿಳಾ ಕಾರ್ಮಿಕರ ಸಮಸ್ಯೆಗಳು

ಯಾವುದೇ ಒಂದು ಪ್ರದೇಶ ಜನಾಂಗ ಅಭಿವೃದ್ಧಿ ಹೊಂದಬೇಕಾದರೆ, ಆ ಪ್ರದೇಶದ ಪ್ರತಿಯೊಬ್ಬ ಪ್ರಜೆಯ ಸಹಭಾಗಿತ್ವವು ಅಗತ್ಯವಾದದ್ದು. ಯಾವುದೇ ರೀತಿಯ ಜಾತಿ ಆಧಾರಿತ, ಲಿಂಗಾಧಾರಿತ ಮತ್ತು ಪ್ರಾಂತ್ಯಾಧಾರಿತ ತಾರತಮ್ಯ ಮಾಡದೇ ಜನರ ನೈಪುಣ್ಯತೆ, ಜ್ಞಾನ, ಮತ್ತು ಕೌಶಲ್ಯತೆ ವೃದ್ಧಿ ಹೊಂದಲು ಮುಕ್ತ ವ್ಯವಸ್ಥೆಯನ್ನು ಕಲ್ಪಿಸಬೇಕು ಮತ್ತು ಅವರಲ್ಲಿರುವ

ಜ್ಞಾನ, ಪ್ರತಿಭೆ, ಮತ್ತು ಕೌಶಲ್ಯತೆಯನ್ನು ಅಭಿವೃದ್ಧಿಪಡಿಸಲು ಸಮಾನ ರೀತಿಯ ಪ್ರೋತ್ಸಾಹ, ಸಹಕಾರ ನೀಡಬೇಕು ಹಾಗಿದ್ದಾಗ ಮಾತ್ರ ಆ ದೇಶ ಅಭಿವೃದ್ಧಿ ಹೊಂದುತ್ತದೆ. ಇಲ್ಲದಿದ್ದರೆ ರೋಗಗ್ರಸ್ಥವಾಗಿ ಬಡತನ ಎಂಬ ವಿಷವರ್ತುಲದಲ್ಲಿ ಸಿಲುಕಿಕೊಂಡು ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಮತ್ತು ರಾಜಕೀಯವಾಗಿ ಹಿಂದುಳಿಯಬೇಕಾಗುತ್ತದೆ. ಮಹಿಳೆಯು ನಡೆದು ಬಂದ ದಾರಿಯತ್ತ ಬೆಳಕು ಚೆಲ್ಲಿದರೆ ಅದು ತ್ರಾಸಬದ್ಧವಾಗಿದೆ. ಇಡೀ ಪ್ರಪಂಚದಲ್ಲಿ ಯಾವುದೇ ಸಮಾಜದಲ್ಲೂ ಮಹಿಳೆಗೆ ಪುರುಷ ಸಮಾನ ಸ್ಥಾನಮಾನ ದೊರಕಿಲ್ಲ (ಗೋವಿಂದರಾಜು, ೨೦೦೭). ಯಾಕೆಂದರೆ, ಪುರುಷ ಪ್ರಧಾನ ಸಮಾಜದಲ್ಲಿ ಮಹಿಳೆಯರು ಒಂದಲ್ಲ ಒಂದು ರೀತಿಯ ತಾರತಮ್ಯ ಹಾಗೂ ಶೋಷಣೆಗೆ ಗುರಿಯಾಗುತ್ತಲೇ ಇರುತ್ತಾರೆ.

ಬ್ರಿಟಿಷ್ ಆಡಳಿತ ಕಾಲದಲ್ಲಿ ಜಾರಿಗೊಂಡ ಆಡಳಿತ ಸುಧಾರಣೆಗಳು ಮಾತ್ರವಲ್ಲದೆ, ಅವರ ಶಿಕ್ಷಣ ಕ್ರಮಗಳು ಹಾಗೂ ಸಾಮಾಜಿಕ ನಾಯಕರುಗಳ ಚಿಂತನೆಗಳ ಹಾಗೂ ಪ್ರಯತ್ನಗಳ ಫಲವಾಗಿ ಮಹಿಳಾ ಶಿಕ್ಷಣದ ಅಗತ್ಯ ಮತ್ತು ಮಹತ್ವವನ್ನು ಮನಗಾಣಲಾಯಿತು. ಮಾತ್ರವಲ್ಲದೆ, ಜನಸಂಖ್ಯೆಯ ಅರ್ಧದಷ್ಟಿರುವ ಮಹಿಳೆಯರನ್ನು ಕಡೆಗಣಿಸಿ ಮುಂದೆ ಸಾಗಿದರೆ ನಿಜವಾದ ಅಭಿವೃದ್ಧಿ ಸಾಧ್ಯವಿಲ್ಲ ಎಂಬ ವಾಸ್ತವಾಂಶವನ್ನು ಮನಗಂಡು ಭಾರತ ಸರ್ಕಾರ ಸಂವಿಧಾನದಲ್ಲಿ ಮಹಿಳೆಯರಿಗೆ ಮತ್ತು ಪುರುಷರಿಗೆ ಸಮಾನ ಸ್ಥಾನವನ್ನು ನೀಡಿ, ಲಿಂಗ ತಾರತಮ್ಯ ತೊಡೆದು ಹಾಕುವಲ್ಲಿ ತನ್ನ ಪ್ರಯತ್ನ ಮುಂದುವರಿಸಿತು. ಹೀಗಾಗಿ ಶಿಕ್ಷಣವನ್ನು ಸಂವಿಧಾನ ಬದ್ಧ ಹಕ್ಕನ್ನಾಗಿ ಮಾಡಿ, ೧೪ ವರ್ಷಗಳವರೆಗಿನ ಪ್ರಾಯದ ಎಲ್ಲಾ ಮಕ್ಕಳಿಗೂ ಲಿಂಗತಾರತಮ್ಯವಿಲ್ಲದೆ ಶಿಕ್ಷಣ ನೀಡುವ ಸಾರ್ವತ್ರಿಕ ಉದ್ದೇಶವನ್ನು ಜಾರಿಗೊಳಿಸಲಾಯಿತು. ಇಷ್ಟು ಮಾತ್ರವಲ್ಲದೆ, ಸಂವಿಧಾನಾತ್ಮಕ ಹಕ್ಕುಗಳಿಗೆ ಅನುಗುಣವಾಗಿ ಹಲವಾರು ಕಲ್ಯಾಣ ಯೋಜನೆಗಳನ್ನು ಹಮ್ಮಿಕೊಳ್ಳಲಾಯಿತು. ಆದ್ದರಿಂದ ಮಹಿಳೆಯರ ಸಾಕ್ಷರತೆಯ ಮಟ್ಟ ಏರತೊಡಗಿತು. ಅದರೊಂದಿಗೆ ಉದ್ಯೋಗ, ರಾಜಕೀಯಗಳಲ್ಲಿ ಮಹಿಳೆಯರ ಸಹಭಾಗಿತ್ವ ಜಾಸ್ತಿಯಾಯಿತು.

ದುಡಿಯುವ ಮಹಿಳೆಯರ ಸಹಭಾಗಿತ್ವ ಪ್ರದೇಶದಿಂದ ಪ್ರದೇಶಕ್ಕೆ ಹಾಗೂ ವರ್ಗದಿಂದ ವರ್ಗಕ್ಕೆ ವ್ಯತ್ಯಾಸಗೊಂಡಿರುತ್ತದೆ. ಮಹಿಳೆಯರು ಮಾಡುವ ಮನೆವಾರ್ತೆ ಕೆಲಸಗಳಲ್ಲಿ ಹಲವಾರು ಬಗೆಗಳಿರುತ್ತವೆ. ಅದು ಮನೆಯ ಒಳಗೆ ಹಾಗೂ ಹೊರಗೆ ಶುಚಿಗೊಳಿಸುವುದು, ಅಡುಗೆ ಸಿದ್ಧ ಪಡಿಸುವುದು, ವೃದ್ಧರ ಶಿಶುಗಳ ಶುಶ್ರೂಷೆ ಮಾಡುವುದು, ಸಾಕು ಪ್ರಾಣಿಗಳಿಗೆ ನೀರು, ಮೇವು ಹಾಕಿ ಅವುಗಳ ಪೋಷಣೆ ಮಾಡುವುದು. ಅವುಗಳ ಜೊತೆಗೆ ಕೃಷಿ

ಕಾರ್ಯದಲ್ಲಿ ತನ್ನನ್ನು ತಾನು ತೊಡಗಿಸಿಕೊಳ್ಳುವುದು ಇತ್ಯಾದಿ. ಆದರೆ ಮಹಿಳೆಯರು ಮಾಡುವ ಈ ಕೆಲಸಗಳಿಗೆ ಕ್ರಯಪಟ್ಟಿ ಇರುವುದಿಲ್ಲ. ಮತ್ತು ಮಾರುಕಟ್ಟೆಯ ಮಹತ್ವವಿರುವುದಿಲ್ಲ.

ಕರ್ನಾಟಕದಲ್ಲಿ ಕೃಷಿ ಮಾತ್ರವಲ್ಲದೆ, ಕೃಷಿಯೇತರ ವಲಯಗಳಿಗೆ ಸಂಬಂಧಿಸಿದ ಹಲವಾರು ಕ್ಷೇತ್ರಗಳಲ್ಲಿ ಮಹಿಳಾ ಕಾರ್ಮಿಕರು ಪ್ರಧಾನ ಪಾತ್ರ ವಹಿಸುತ್ತಿದ್ದರೂ, ಅವರ ಕೊಡುಗೆಯನ್ನು ಸಮಾಜವು ಸರಿಯಾಗಿ ಗುರುತಿಸಿಲ್ಲ. ಇತರ ವಲಯಗಳಲ್ಲಿ ದುಡಿಯುವ ಮಹಿಳಾ ಕಾರ್ಮಿಕರೆಂದರೆ, ಬೀಡಿ ಕಾರ್ಮಿಕರು, ಮನೆ ಕೆಲಸದವರು, ತರಕಾರಿ, ಹೂ, ಹಣ್ಣು, ಕಾಯಿ ಬೆಳೆಸುವವರು, ಗಾರೆ, ಡಾಂಬರು, ಕಲ್ಲು-ಮಣ್ಣಿನ ಕೆಲಸದವರು, ಕೃಷಿ ಕಾರ್ಮಿಕರು, ಜವಳಿ ಕಾರ್ಖಾನೆಗಳು, ಬಟ್ಟೆ ಅಂಗಡಿಗಳಲ್ಲಿ ಕೆಲಸ ಮಾಡುವವರು, ಬುಟ್ಟಿ, ಚಾಪೆ ಮತ್ತಿತ್ತರ ಕರಕುಶಲವಸ್ತುಗಳನ್ನು ತಯಾರಿಸುವವರು, ಗುಡಿ ಕೈಗಾರಿಕೆಗಳಲ್ಲಿ ದುಡಿಯುವವರು, ಆಹಾರ ವಸ್ತುಗಳ ತಯಾರಕರು ಹಾಗೂ ಇನ್ನೂ ಅನೇಕ ವಲಯಗಳಲ್ಲಿ ಕೆಲಸ ಮಾಡುವವರು. ಆದರೆ ಈ ವಲಯಗಳಲ್ಲಿ ದುಡಿಯುವ ಕೋಟ್ಯಂತರ ಮಹಿಳೆಯರ ಸ್ಥಿತಿಗತಿ ಶೋಚನೀಯವಾಗಿದೆ. ಸರ್ಕಾರವು ಅವರಿಗೆ ಸಂವಿಧಾನಾತ್ಮಕವಾಗಿ ರಕ್ಷಣೆ ನೀಡಲು ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡರೂ ಅದು ಸಂಪೂರ್ಣವಾಗಿ ಯಶಸ್ವಿಯಾಗಲಿಲ್ಲ, ಮಾತ್ರವಲ್ಲದೆ, ಖಾಸಗೀ ಬಂಡವಾಳ ಶಾಹಿಗಳು ತಮ್ಮ ಲಾಭಕ್ಕಾಗಿ ಬುದ್ಧಿವಂತಿಕೆಯಿಂದ ಬಡ ಮಹಿಳಾ ಕಾರ್ಮಿಕರನ್ನು ಶೋಷಣೆ ಮಾಡುತ್ತಿರುವುದನ್ನು ಕಾಣಬಹುದು.

ಸಂಸಾರದ ತುತ್ತಿನ ಚೀಲ ತುಂಬುವುದರಲ್ಲಿ ಗಂಡಸರಿಗಿಂತಲೂ ಹೆಚ್ಚಿನ ಶ್ರಮಪಡುವ ಮಹಿಳೆಗೆ ಯಾವಾಗಲೂ ಎರಡನೇ ದರ್ಜೆ ಸ್ಥಾನ. ಹೆಚ್ಚು ಹೊತ್ತು ದುಡಿದರೂ ಗಂಡಸರಿಗಿಂತ ಕಡಿಮೆ ಕೂಲಿ. ಕೆಲವೊಮ್ಮೆ ದಾಖಲೆಗಳಲ್ಲಿ ಮಹಿಳೆಯರ ಹೆಸರೇ ಇರುವುದಿಲ್ಲ. ಆದರೂ, ಅವರು ದುಡಿಯುತ್ತಾರೆ. ಮಹಿಳಾಪರ ಹೋರಾಟಗಾರ್ತಿ ಕೆ.ಎಸ್.ವಿಮಲಾರವರು ಹೇಳುವಂತೆ ೧೯೭೦ನೇ ಇಸವಿಯ ಕೊನೆಯ ದಿನಗಳಲ್ಲಿ ರಾಜ್ಯದ ಇತರ ಭಾಗದಂತೆ ಬೆಂಗಳೂರಿನಲ್ಲೂ ಬೀಡಿ ಉದ್ಯಮ ಜೋರಾಗಿತ್ತು. ಅದರಲ್ಲೂ ಗೋರಿಪಾಳ್ಯದಲ್ಲಿ ಮುಸ್ಲಿಂ ಕುಟುಂಬಗಳು ಬೀಡಿ ಕಟ್ಟಿಯೇ ಕಾನೂನನ್ನು ಜಾರಿಗೊಳಿಸಿದ್ದುದು ಗಮನಕ್ಕೆ ಬಂತು. ಬೀಡಿ ಕಟ್ಟೋರು ಹೆಣ್ಣು ಮಕ್ಕಳು, ಪಾಸ್ ಪುಸ್ತಕ ಮನೆಯ ಗಂಡಸರ ಹೆಸರಿನಲ್ಲಿ ಗಂಡಸರು ಇಲ್ಲದಿದ್ದಲ್ಲಿ ಸಣ್ಣ ಬಾಲಕನಾದರೂ ಸರಿ ಒಟ್ಟಿನಲ್ಲಿ ದಾಖಲೆಯಲ್ಲಿ

ಹೆಣ್ಣು ಮಕ್ಕಳ ಹೆಸರು ಬರಕೂಡದು. ಇದನ್ನು ಪ್ರಶ್ನಿಸಿದಾಗ, ಉತ್ತರ ಧಿಮಾಕಿನಿಂದ ಕೂಡಿತ್ತು. ಇದರ ವಿರುದ್ಧ ಎಲ್ಲಾ ಹೆಣ್ಣುಮಕ್ಕಳನ್ನು ಸೇರಿಸಿ ಹೋರಾಡಿದಾಗ, ವಿಧಿಯಿಲ್ಲದೆ ಆತ ಹೆಣ್ಣು ಮಕ್ಕಳ ಹೆಸರಿನಲ್ಲೇ ಎಲ್ಲಾ ಪಾಸ್ ಪುಸ್ತಕಗಳನ್ನೂ ತಕ್ಷಣ ಬರೆದುಕೊಟ್ಟ, ಆದರೆ ಗೋರಿಪಾಳ್ಯದಲ್ಲಿ ಅಂದು ಹೋರಾಟ ನಡೆಯುತ್ತಿದ್ದರೆ, ಮುಸ್ಲಿಂ ಸಮುದಾಯದ ಪುರುಷರು ಅಪಸ್ವರ ಎತ್ತಿರಲಿಲ್ಲ. ಹೊಟ್ಟೆಪಾಡಿನ ಎದುರು ಯಾವುದೇ 'ಧಾರ್ಮಿಕ ಮೂಲಭೂತ'ವಾದ ನಿಲ್ಲುವುದಿಲ್ಲ ಎಂಬುದಕ್ಕೆ ಸ್ಪಷ್ಟ ನಿದರ್ಶನ ಅದು ಎನ್ನುತ್ತಾರೆ.

ಮತ್ತೋರ್ವ ಮಹಿಳಾಪರ ಹೋರಾರ್ಟಗಾರ್ತಿ ನಂದನಾ ರೆಡ್ಡಿ. ಇವರು ವಿಮಾನ ನಿಲ್ದಾಣಕ್ಕೆ ಹೋದಾಗ ಅಲ್ಲಿ ಹಮಾಲಿಗಳ ಸ್ಥಿತಿಯನ್ನು ಗಮನಿಸಿದರು. ಅವರು ಒಂದೆರಡು ರೂಪಾಯಿಗಳಿಗಾಗಿ ಹೊರೆಮೂಟೆ ಹೊರೋರು. ಇವರಿಗಾಗಿ ಏನದಾರು ಮಾಡಬೇಕೆಂದು ಮುಂದೆ ಅವರನ್ನು ಸಂಘಟಿಸುವಲ್ಲಿ ತೊಡಗಿದರು. ಆದರೆ, ಪರಿಸ್ಥಿತಿ ಆಗಿನದ್ದಕ್ಕಿಂತಲೂ ಈಗ ಹದಗೆಟ್ಟಿದೆ. ಹೆಣ್ಣು ಲೀಡರ್ (ನಾಯಕಿ) ಆಗಬಹುದು. ಆದರೆ ಗಂಡಿನಂತೆ 'ಬಿಹೇವ್' ಮಾಡಬಾರದು ಎಂಬ ತಾರತಮ್ಯ ನೀತಿ ಬದಲಾಗಿಲ್ಲ. ದೊಡ್ಡ ಸಮಾರಂಭ, ಪೂಜೆ – ಪುನಸ್ಕಾರ ನಡೆಯುವಾಗ ಅಕ್ಕಿ ತೊಳೆಯಲು ಹೆಂಗಸು ಬೇಕು. ಆದರೆ ಅಡುಗೆಗೆ ಮಾತ್ರ 'ಅಡುಗೆ ಭಟ್ಟ'ರೇ ಬೇಕು. ಇಷ್ಟು ಮಾತ್ರವಲ್ಲದೆ, ತರಕಾರಿ ಮಾರುವವರು, ಕಸ–ಮುಸುರೆ ತಿಕ್ಕುವವರು, ಹೋಟೇಲ್‌ನಲ್ಲಿ ತರಕಾರಿ ಹೆಚ್ಚುವವರು, ಕಾಫಿ ತೋಟಗಳಲ್ಲಿ ಅಕ್ಷರಶಃ ಜೀತಮಾಡುವ ಕಾರ್ಮಿಕರು ಹಾಗೂ ವಲಸೆ ಕಾರ್ಮಿಕರ ಸಮಸ್ಯೆಗಳನ್ನು ತೊಡೆದು ಹಾಕಲು ಹೋರಾಟ ನಡೆಸಲಾಯಿತು (ಪ್ರಜಾವಾಣಿ,೨೯.೦೪.೨೦೦೬).

ಬಹುಪಾಲು ಗೃಹಕಾರ್ಮಿಕರು ಮಹಿಳೆಯರೇ ಆಗಿರುವುದರಿಂದ ಮಹಿಳೆಯರ ಕೆಲಸಗಳನ್ನು ಕಡಿಮೆ ಬೆಲೆಯ ಕೆಲಸವೆಂದು ಪರಿಗಣಿಸುವುದು ಲಿಂಗಾಧಾರಿತ ಸಮಾಜ ವ್ಯವಸ್ಥೆಯಲ್ಲಿ ಸಾಮಾನ್ಯವೇ ಆಗಿದೆ. ಗೃಹ ಕಾರ್ಮಿಕರಲ್ಲಿ ಶೇಕಡಾ ೯೦ರಷ್ಟು ಮಹಿಳೆಯರೇ ಆಗಿದ್ದು ಅವರ ಸಮಸ್ಯೆಗಳಿಗೆ ಪರಿಹಾರವನ್ನು ಒದಗಿಸುವ ಯಾವುದೇ ಪ್ರಯತ್ನಗಳು ೧೯೮೫ರವರೆಗೆ ನಡೆದಿರಲಿಲ್ಲ. ೧೯೮೫ರಲ್ಲಿ ರಾಷ್ಟ್ರೀಯ ಮನೆಗೆಲಸ ಮಾಡುವ ಮಹಿಳೆಯರ ಚಳವಳಿಯನ್ನು ಭಾರತದಲ್ಲಿ ಹುಟ್ಟುಹಾಕಲಾಯಿತು. ೧೯೯೨ರಲ್ಲಿ ಕರ್ನಾಟಕದಲ್ಲಿ ಈ ಚಳವಳಿ ತಲೆ ಎತ್ತಿ ಮನೆ ಕೆಲಸ ಮಾಡುವವರ ಹಕ್ಕು ಬಾಧ್ಯತೆಗಳ ಬಗ್ಗೆ ಅದು ಗಮನಹರಿಸತೊಡಗಿದರು. ಇದೀಗ ಸಮಾನ ಮನಸ್ಕ ಸ್ವಯಂಸೇವಾ ಸಂಸ್ಥೆಗಳು ಒಟ್ಟು ಸೇರಿ ಗೃಹ ಕಾರ್ಮಿಕರ ಸಮಗ್ರ ಅಭಿವೃದ್ಧಿ ವೇದಿಕೆ, ಕರ್ನಾಟಕ ಎಂಬ ಸಂಸ್ಥೆಯನ್ನು ರೂಪಿಸಿದ್ದು,

ಸಂಸ್ಥೆಗಳ ನೋಂದಣಿ ಕಾಯಿದೆ ೧೯೬೦ರ ಅಡಿಯಲ್ಲಿ ಅದು ನೋಂದಣೆಗೊಂಡಿದೆ (ಉದಯವಾಣಿ,೧೨.೦೫.೨೦೦೬).

೩.೩. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಗ್ರಾಮೀಣ ಮಹಿಳಾ ಕಾರ್ಮಿಕರ ಸಮಸ್ಯೆಗಳು

ದಕ್ಷಿಣ ಕನ್ನಡ ಜಿಲ್ಲೆಯು ಒಟ್ಟು ಐದು ತಾಲೂಕುಗಳನ್ನು ಒಳಗೊಂಡಿದೆ. ಅವುಗಳೆಂದರೆ, ಮಂಗಳೂರು, ಬಂಟ್ವಾಳ, ಬೆಳ್ತಂಗಡಿ, ಪುತ್ತೂರು ಮತ್ತು ಸುಳ್ಯ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಟ್ಟು ೩೫೪ ಗ್ರಾಮಗಳಿವೆ. ಮಹಿಳಾ ಕಾರ್ಮಿಕರ ಸಮಸ್ಯೆಗಳು ದಕ್ಷಿಣ ಕನ್ನಡ ಜಿಲ್ಲೆಯಲ್ಲೂ ಹೊರತಾಗಿಲ್ಲ. ಪುರುಷರಿಗೆ ಸಮಾನ ನೆಲೆಯಲ್ಲಿರುವ ಲಿಂಗ ಸಮಾನತೆ ಮತ್ತು ಮಹಿಳೆಯರ ಸಬಲೀಕರಣದೊಂದಿಗೆ ಪುರುಷರಿಗೆ ಮತ್ತು ಮಹಿಳೆಯರಿಗೆ ಲಿಂಗ ಮತ್ತು ಅವಕಾಶದಲ್ಲಿ ಸಮಾನತೆಯನ್ನು ನೀಡುವುದರಲ್ಲಿ ಯಾವುದೇ ತಾರತಮ್ಯವನ್ನು ತೋರುವಂತಿಲ್ಲವೆಂದು ಸಂವಿಧಾನದ ಭರವಸೆಯ ಹೊರತಾಗಿಯೂ, ವಾಸ್ತವದಲ್ಲಿ, ಅಸಂಘಟಿತ ಕ್ಷೇತ್ರದಲ್ಲಿ ಮಹಿಳೆಯರ ಸಂಖ್ಯೆಯು ಪುರುಷರಿಗಿಂತ ಅಧಿಕವಾಗಿದೆ. ಇನ್ನೊಂದು ವಿಧದಲ್ಲಿ ಹೇಳುವುದಾದರೆ, ಸಂಘಟಿತ ಕ್ಷೇತ್ರದ ಉದ್ಯೋಗಾವಕಾಶಗಳಲ್ಲಿ ಮಹಿಳೆಯರು ಪುರುಷರಿಗೆ ಸಮಾನ ಮಟ್ಟದಲ್ಲಿದ್ದರೆ, ಇಲ್ಲಿ ಪುರುಷಾಧಿಕಾರವು ಹೆಚ್ಚಾಗಿದ್ದು, ಮಹಿಳೆಯರು ಅಂಚಿಗೆ ತಳ್ಳಲ್ಪಡುವಂತಾಗುವುದು.

ದಕ್ಷಿಣ ಕನ್ನಡ ಜಿಲ್ಲೆಯ ಸಂಘಟಿತ ಕ್ಷೇತ್ರದಲ್ಲಿ ಪುರುಷರಿಗೆ ಹೋಲಿಸಿದರೆ ಉದ್ಯೋಗವನ್ನು ಪಡೆಯುವ ಅವಕಾಶಗಳು ಮಹಿಳೆಯರಿಗೆ ಕಡಿಮೆ ಇದೆ. ಯಾಕೆಂದರೆ, ಮನೆಯ ಜವಾಬ್ದಾರಿಗಳಿಂದಾಗಿ ಮಹಿಳೆಯರು, ಪುರುಷರ ಹಾಗೆ ಎಲ್ಲಿ ಬೇಕಾದರಲ್ಲಿ ಕೆಲಸಕ್ಕೆ ಸೇರಿಕೊಳ್ಳುವುದು ಸಾಧ್ಯವಿಲ್ಲ. ಮನೆಯ ಹತ್ತಿರವಿರುವ ಉದ್ಯೋಗವಕಾಶಗಳನ್ನು ಮಹಿಳೆಯರು ಪುರುಷರ ಹಾಗೆ ಎಲ್ಲಿ ಬೇಕಾದರಲ್ಲಿ ಕೆಲಸಕ್ಕೆ ಸೇರಿಕೊಳ್ಳುವುದು ಸಾಧ್ಯವಿಲ್ಲ. ಮನೆಯ ಹತ್ತಿರವಿರುವ ಉದ್ಯೋಗವಕಾಶಗಳನ್ನು ಮಹಿಳೆಯರು ಬಳಸಿಕೊಳ್ಳುವುದರಿಂದ ದೂರದಲ್ಲಿರುವ ಉದ್ಯೋಗವಕಾಶಗಳು ಅವರ ಕೈಬಿಟ್ಟು ಹೋಗುವುದು ಸಹಜವಾಗಿದೆ. ಸಮಾಜ ಹಾಗೂ ಕುಟುಂಬವು ಮಹಿಳೆಯರಿಗೆ ಮನೆವಾರ್ತೆಗಳಾದ, ಆಹಾರ ತಯಾರಿಕೆ, ಮನೆಯ ಸ್ವಚ್ಛತೆಯನ್ನು ಕಾಪಾಡುವುದು, ಮಕ್ಕಳು ಮತ್ತು ವಯಸ್ಸಾದವರ ಪೋಷಣೆ ಮುಂತಾದ ಜವಾಬ್ದಾರಿಗಳನ್ನು ವಹಿಸಿರುವ ಕಾರಣ ಮಹಿಳೆಯರು ಮನೆಯ ಹತ್ತಿರವೇ ಕೆಲಸ ಮಾಡುವುದನ್ನು ಆಯ್ದುಕೊಳ್ಳುತ್ತಾರೆ.

ಮನೆಯ ಕಟ್ಟುಪಾಡುಗಳೊಂದಿಗೆ, ಉನ್ನತ ಶಿಕ್ಷಣವನ್ನು ಪಡೆಯುವ ವಿಚಾರದಲ್ಲಿ ಮಹಿಳೆಯರಿಗೆ ಸಿಗುವ ಪ್ರೋತ್ಸಾಹವು ಪುರುಷರಿಗಿಂತ ಕಡಿಮೆ. ಪ್ರಸಿದ್ಧ ಉದ್ದಿಮೆಗಳಲ್ಲಿ ತರಬೇತಿ ಪಡೆಯುವ ಮಹಿಳೆಯರನ್ನು ಮನೆಯಿಂದ ಹೊರಗೆ ಕಳುಹಿಸುವ ವಿಚಾರದಲ್ಲಿ ಸುಮಾರು ಶೇಕಡಾ ೫೦ರಿಂದ ೭೦ರಷ್ಟು ಕುಟುಂಬಗಳು, ಕೌಟುಂಬಿಕ ಕರ್ತವ್ಯಗಳು ಮತ್ತು ಸಾಮಾಜಿಕ ಒತ್ತಡಗಳ ಕಾರಣದಿಂದಾಗಿ ತಮ್ಮ ಮನೆಯ ಹೆಂಗಸರನ್ನೇ ಹೊರಗೆ ಕಳುಹಿಸಲು ಒಪ್ಪುವುದಿಲ್ಲ. ಈ ರೀತಿಯ ಸ್ವಾತಂತ್ರ್ಯದ ಕೊರತೆಯಿಂದಾಗಿ ಸಂಘಟಿತ ಕ್ಷೇತ್ರದಲ್ಲಿ ಮಹಿಳೆಯರಿಗಿಂತ ಪುರುಷರು ಹೆಚ್ಚಿನ ಉದ್ಯೋಗವಕಾಶಗಳನ್ನು ಪಡೆಯುತ್ತಾರೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬೀಡಿ ಕಟ್ಟುವುದು ಅರೆ ಸಂಘಟಿತ ದುಡಿಮೆಯಾಗಿದ್ದು ಇದರಲ್ಲಿ ಆಂಶಿಕ ದರದಲ್ಲಿ ಕೂಲಿಯನ್ನು ನೀಡಲಾಗುತ್ತದೆ. ಕೆಳ-ಮಾಧ್ಯಮ ಮತ್ತು ಕೆಳವರ್ಗದ ಕುಟುಂಬಗಳ ಅನೇಕ ಮಹಿಳೆಯರು ಬೀಡಿಕಟ್ಟುವ ಕೆಲಸಮಾಡುತ್ತಿದ್ದಾರೆ. ಬೀಡಿ ಕೆಲಸದಿಂದ ಬರುವ ವರಮಾನ ಕನಿಷ್ಟವಾಗಿದ್ದರೂ ಕೂಡಾ ಮಹಿಳೆಯರು ಸಾಕಷ್ಟು ಸಂಖ್ಯೆಯಲ್ಲಿ ತಮ್ಮ ಜೀವನೋಪಾಯವಾಗಿ ಇದನ್ನು ನಡೆಸುತ್ತಿದ್ದಾರೆ (ಬರ್ಬೋಜಾ, ೨೦೧೧).

ಸಮಾನತೆ ಹಾಗೂ ಉಳಿಯುವಿಕೆಗಾಗಿ ಹೋರಾಟ ನಡೆಸುವವರಲ್ಲಿ ಗೃಹ ಕಾರ್ಮಿಕರನ್ನು ಉದಾಹರಣೆಗೆ ತೆಗೆದುಕೊಳ್ಳಬಹುದು. ಭಾರತಕ್ಕೆ ಸ್ವಾತಂತ್ರ್ಯ ದೊರೆತು ಆರು ದಶಕಗಳು ಕಳೆದರೂ, ಅಸಂಘಟಿತ ದುಡಿಮೆ ವರ್ಗದ ಒಂದು ಭಾಗವೇ ಆಗಿರುವ ಗೃಹ ಕಾರ್ಮಿಕರು ಅತ್ಯಂತ ಹೆಚ್ಚಿನ ಶೋಷಣೆಗೆ ಒಳಗಾಗುತ್ತಿರುವುದನ್ನು ಕಾಣುವುದು ಹತಾಶೆಯ ಸಂಗತಿಯಾಗಿದೆ. ಮನೆಕೆಲಸ ಮಾಡುವ ಮಹಿಳೆಯರು ಭೀಕರವಾದ ಶೋಷಣೆಗೆ ಒಳಗಾಗುತ್ತಾರೆ, ಎಂಬುದು ಇಂದಿಗೂ ಕೂಡ ಬಹಿರಂಗವಾಗದ ಸಂಗತಿ. ಯಾಕೆಂದರೆ, ಶೋಷಿತರ ಆ ಧ್ವನಿ ಯಾರಿಗೂ ಕೇಳದಷ್ಟೂ ಕ್ಷೀಣವಾದದ್ದು. ಭಾರತದಲ್ಲಿ ಮನೆ ಕೆಲಸ ಮಾಡುವವರಲ್ಲಿ ಶೇಕಡಾ ೯೦ ಭಾಗ ಮಹಿಳೆಯರಿದ್ದಾರೆ. ಯಾರು ಆರ್ಥಿಕವಾಗಿ ತುಂಬ ಹೀನ ಸ್ಥಿತಿಯಲ್ಲಿರುತ್ತಾರೋ? ಅಂತವರು ಮನೆಗೆಲಸವನ್ನು ತಮ್ಮ ಉದ್ಯೋಗವನ್ನಾಗಿ ಹಮ್ಮಿಕೊಳ್ಳುತ್ತಾರೆ. ಮನೆಗೆಲಸ ಮಾಡುವವರಲ್ಲಿ ವಿಶೇಷವಾಗಿ ಹಿಂದುಳಿದ ಜಿಲ್ಲೆಗಳಿಂದ ಮತ್ತು ರಾಜ್ಯಗಳಿಂದ ಬಂದ ದಲಿತರು ಹಾಗೂ ಆದಿವಾಸಿ ಜನಾಂಗದವರೇ ಹೆಚ್ಚಾಗಿರುತ್ತಾರೆ. ಇವರಲ್ಲಿ ಹೆಚ್ಚಿನವರು ಅನಕ್ಷರಸ್ಥರಾಗಿದ್ದು. ಇತರ ಉದ್ಯೋಗವಕಾಶಗಳಿಂದ ವಂಚಿತರಾಗಿ ಬೇರೆ ದಾರಿ ಇಲ್ಲದೆ ಈ ಕೆಲಸಕ್ಕೆ ತಳ್ಳಲ್ಪಟ್ಟವರಾಗಿರುತ್ತಾರೆ. ಕೌಶಲ್ಯ ರಹಿತ ಕೆಲಸಗಾರರು ಇವರೆಂದು ಗುರುತಿಸಲ್ಪಡುವ ಕಾರಣ ಈ ಕೆಲಸಗಾರರಿಗೆ ಕನಿಷ್ಠ ಗೌರವ ಕೂಡ ಸಿಗುವುದಿಲ್ಲ.

ಅವರನ್ನು ಒಂದು ವಸ್ತುವೆಂದು ಪರಿಗಣಿಸಿ ಉಪಯೋಗಿಸುವುದೇ ಹೆಚ್ಚು. ಇತ್ತೀಚೆಗೆ ನಡೆಸಿದ ಸಮೀಕ್ಷೆಯ ಪ್ರಕಾರ ಮಂಗಳೂರು ಹಾಗೂ ಆಸುಪಾಸಿನ ಸ್ಥಳಗಳಲ್ಲಿ ಸಾಧಾರಣ ೭೭೫೦ ಗೃಹ ಕಾರ್ಮಿಕರಿದ್ದಾರೆ. ಇವರಲ್ಲಿ ೯೯% ಮಹಿಳೆಯರು ೧೪ರಿಂದ ೩೫ ವರ್ಷಗಳ ಒಳಗಿನವರು. ಇವರಲ್ಲಿ ಕೆಲವರು ಇಡೀ ದಿನ ದುಡಿಯುವವರಾಗಿದ್ದರೆ, ಇನ್ನು ಕೆಲವರು ಹಗಲು ಮಾತ್ರ ದುಡಿಯುವವರಾಗಿದ್ದಾರೆ. ಇವರು ಅಡುಗೆ ಮಾಡುವುದು, ಬಟ್ಟೆ ಹಾಗೂ ಪಾತ್ರೆಗಳನ್ನು ತೊಳೆಯುವುದು, ಮನೆ ಹಾಗೂ ಅಂಗಳದ ಸ್ವಚ್ಛತೆ ನೋಡಿಕೊಳ್ಳುವುದು, ಸಣ್ಣ ಮಕ್ಕಳನ್ನು ನೋಡಿಕೊಳ್ಳುವುದು, ಪ್ರಾಯಸ್ಥರ ಹಾಗೂ ಅಸೌಖ್ಯದಿಂದ ಇರುವವರ ಚಾಕರಿ ಮಾಡುವುದು, ಮಾರುಕಟ್ಟೆಗೆ ಹೋಗಿ ವಸ್ತುಗಳನ್ನು ಖರೀದಿಸುವುದು, ಕೈತೋಟದ ಕೆಲಸ ಮುಂತಾದ ನೂರಾರು ಕೆಲಸಗಳನ್ನು ಒಬ್ಬರೇ ನಿಭಾಯಿಸಬೇಕಾದ ಒತ್ತಡ ಇವರ ಮೇಲಿರುತ್ತದೆ. ಗೃಹ ಕಾರ್ಮಿಕರಿಗೆ ಯಾವುದೇ ಕಾನೂನು ರೀತಿಯ ಸವಲತ್ತುಗಳು ಇರುವುದಿಲ್ಲ. ಕೆಲವೊಮ್ಮೆ ನ್ಯಾಯಯುತವಾಗಿ ಸಿಗಬೇಕಾದ ಸಂಬಳ ಹಾಗೂ ಇತರ ಅಗತ್ಯದ ಸೌಲಭ್ಯಗಳಿಂದಲೂ ಅವರು ವಂಚಿತರಾಗಿರುತ್ತಾರೆ. ಪೂರ್ಣಕಾಲೀಕ ಕೆಲಸ ಮಾಡುವವರಿಗೂ ಸಮಯಾಧಾರಿತ ವಿಶ್ರಾಂತಿ, ವಾರದ ರಜೆ, ವಾರ್ಷಿಕ ರಜೆ ಇತ್ಯಾದಿಗಳನ್ನು ನೀಡದೆ, ಚುಚ್ಚು ಮಾತುಗಳು, ದೈಹಿಕ ಹಿಂಸೆ, ಲೈಂಗಿಕ ಹಿಂಸೆಗಳಂತಹ ಶೋಷಣೆಗಳನ್ನು ಅನುಭವಿಸುತ್ತಲೇ ದುಡಿಯಬೇಕಾಗುತ್ತದೆ. ಕೆಲವೊಮ್ಮೆ ದಲ್ಲಾಳಿ ಹಾಗೂ ಮಾಲಕರ ಕಪಿಮುಷ್ಠಿಯೊಳಗೆ ಸಿಲುಕಿಕೊಳ್ಳುತ್ತಾರೆ. ಮಾತ್ರವಲ್ಲದೆ ಉತ್ತಮ ಸಂಬಳ ಹಾಗೂ ಸವಲತ್ತುಗಳನ್ನು ಕೊಡುವ ಆಮಿಷಗಳಿಂದ ದಲ್ಲಾಳಿಗಳ ಮೂಲಕ ಕೆಲಸಕ್ಕೆ ನೇಮಿಸಲ್ಪಟ್ಟವರು ಅನಂತರದಲ್ಲಿ ಕನಿಷ್ಠ ಸವಲತ್ತುಗಳಾದ ಊಟ, ಬಟ್ಟೆ ಮತ್ತು ವಿಶ್ರಾಂತಿಗಳಿಲ್ಲದೆ ಅಸಹನೀಯ ಪರಿಸ್ಥಿತಿಗೆ ಒಗ್ಗಿಕೊಳ್ಳಬೇಕಾಗುತ್ತದೆ. ಕೊಲ್ಲಿ ದೇಶಗಳಿಗೆ ದಕ್ಷಿಣ ಕನ್ನಡ ಜಿಲ್ಲೆಯಿಂದ ಗೃಹ ಕಾರ್ಮಿಕರಾಗಿ ಹೋಗುವವರ ಸಂಖ್ಯೆ ಜಾಸ್ತಿ ಇದ್ದು, ಅಲ್ಲಿ ಅವರನ್ನು ಜೀತದಾಳುಗಳಂತೆ ದುಡಿಸುವುದರ ಬಗ್ಗೆ ಸಾಕಷ್ಟು ವರದಿಗಳು ಕೇಳಿ ಬರುತ್ತಿವೆ (ಮೇರಿ, ೨೦೦೬),

ಮನೆವಾರ್ತೆಯ ಕೆಲಸವನ್ನು ಸ್ತ್ರೀಯರ ಸಹಜ ಕೆಲಸವೆಂದು ಗುರುತಿಸಲಾಗುತ್ತಿದೆ ಮತ್ತು ಅದಕ್ಕೆ ಕಡಿಮೆ ಮೌಲ್ಯವನ್ನು ನೀಡಲಾಗುತ್ತದೆ. ಹೀಗಾಗಿ ಗೃಹಕಾರ್ಮಿಕರು ಲಿಂಗಭೇದಕ್ಕೆ ಬಲಿಪಶುಗಳಾಗಿರುತ್ತಾರೆ. ಗೃಹ ಕಾರ್ಮಿಕರ ವಿಷಯ ಮಾನವ ಹಕ್ಕುಗಳಿಗೆ ಸಂಬಂಧಿಸಿದ್ದು, ಪ್ರತಿಯೊಬ್ಬ ವ್ಯಕ್ತಿಗೂ ಮಾನವ ಹಕ್ಕುಗಳನ್ನು ಅನುಭವಿಸಲು ಅಧಿಕಾರವಿದೆ. ಅದೆಷ್ಟೋ ಮನೆಕೆಲಸ ಮಾಡುವವರ ಹಕ್ಕು ಬಾಧ್ಯತೆಗಳ ಉಲ್ಲಂಘನೆಯಾಗಿ ಕೆಲವರು

ಮಾಲಿಕರಿಂದಲೇ ದೌರ್ಜನ್ಯಕ್ಕೊಳಗಾಗುತ್ತಾರೆ. ಮಾತ್ರವಲ್ಲದೆ ಅವರ ಪ್ರಜಾಸತ್ತಾತ್ಮಕ ಹಕ್ಕುಗಳಾದ ಸಮಾನತೆಯ ಹಕ್ಕು, ದೌರ್ಜನ್ಯದ ವಿರುದ್ಧ ಹೋರಾಡುವ ಹಕ್ಕು, ಗೌರವಾನ್ವಿತರಾಗಿ ಬದುಕುವ ಹಕ್ಕು ಇತ್ಯಾದಿಗಳನ್ನು ಅತಿಕ್ರಮಿಸಲಾಗುತ್ತದೆ.

೩.೪. ಬಂಟ್ವಾಳ ತಾಲೂಕಿನಲ್ಲಿ ಗ್ರಾಮೀಣ ಮಹಿಳಾ ಕಾರ್ಮಿಕರ ಸಮಸ್ಯೆಗಳು

ಬಂಟ್ವಾಳ ತಾಲೂಕು ಒಟ್ಟು ಮೂರು ಹೋಬಳಿಗಳನ್ನು ಒಳಗೊಂಡಿದ್ದು ೮೪ ಗ್ರಾಮಗಳನ್ನೊಳಗೊಂಡಿದೆ. ಬಂಟ್ವಾಳ ತಾಲೂಕಿನಲ್ಲೂ ಗ್ರಾಮೀಣ ಮಹಿಳಾ ಕಾರ್ಮಿಕರು ಹಲವಾರು ರೀತಿಯ ತಾರತಮ್ಯಗಳನ್ನು ಎದುರಿಸುತ್ತಿದ್ದಾರೆ. ಭಾರತದ ಸಂವಿಧಾನದಲ್ಲಿ ಪುರುಷರಿಗೆ ಹಾಗೂ ಮಹಿಳೆಯರಿಗೆ ಸಮಾನತೆಯನ್ನು ಕಲ್ಪಿಸಿದ್ದರೂ, ಮಹಿಳೆಯರು ಹಲವಾರು ರೀತಿಯ ತಾರತಮ್ಯಗಳನ್ನು ಅನುಭವಿಸುತ್ತಾರೆ. ಅಸಂಘಟಿತ ಕ್ಷೇತ್ರದಲ್ಲಿ ಮಹಿಳೆಯರು ಪುರುಷರಿಗಿಂತ ಅಧಿಕ ಪ್ರಮಾಣದಲ್ಲಿದ್ದರೂ ಸಂಘಟಿತ ಕ್ಷೇತ್ರದಲ್ಲಿ ಮಹಿಳೆಯರು ಪುರುಷರಿಗೆ ಸಮಾನಮಟ್ಟದಲ್ಲಿದ್ದರೂ, ಇಲ್ಲಿ ಪುರುಷರ ಅಧಿಕಾರವೂ ಹೆಚ್ಚಾಗಿದ್ದು ಮಹಿಳೆಯರು ಅಂಚಿಗೆ ತಳ್ಳಲ್ಪಡುವಂತಾಗುವುದು.

ಗ್ರಾಮೀಣ ಪ್ರದೇಶಗಳಲ್ಲಿ ಕೃಷಿಯು ಪ್ರಮುಖವಾಗಿದ್ದು ಹೆಚ್ಚಿನ ಚಟುವಟಿಕೆಗಳು ಮಹಿಳೆಯರನ್ನು ಆಧರಿಸಿದೆ. ಮಹಿಳೆಯರು ಕೃಷಿ ಮಾತ್ರವಲ್ಲದೆ ಕೃಷಿಯೇತರ ಕ್ಷೇತ್ರಗಳಲ್ಲಿ ತಮನ್ನು ತಾವು ಸಕ್ರಿಯವಾಗಿ ತೊಡಗಿಸಿಕೊಳ್ಳುತ್ತಾರೆ. ಮಹಿಳೆಯರು ಮನೆಯಲ್ಲಿ ಮಾತ್ರವಲ್ಲದೆ ಮನೆಯ ಹೊರಗೂ ದುಡಿಯುತ್ತಾರೆ. ಮನೆಯಲ್ಲಿ ಮಾಡುವ ಕೆಲಸಕ್ಕೆ ಮಹಿಳೆಯರಿಗೆ ಯವುದೇ ರೀತಿಯ ಸಂಭಾವನೆ ಇರುವುದಿಲ್ಲ.

ಬಂಟ್ವಾಳ ತಲೂಕಿನಲ್ಲಿ ಮಹಿಳೆಯರು ಕೃಷಿ ಮತ್ತು ಕೃಷಿಗೆ ಸಂಬಂದಪಟ್ಟ ಕೆಲಸಗಳನ್ನು ಮಾಡುವುದು ಮಾತ್ರವಲ್ಲದೆ ಬೀಜದ ಕಾರ್ಖಾನೆ, ಅಡಿಕೆ ಕಾರ್ಖಾನೆ, ಕಾಂಕ್ರೀಟು ಕೆಲಸಗಳಿಗೆ, ಮನೆಕೆಲಸ,ಬ್ಯಾಂಕು,ಶಾಲೆ ಮುಂತಾದ ಸಂಸ್ಥೆಗಳಲ್ಲಿ ಗುಡಿಸುವ ಕೆಲಸ, ಕಲ್ಲಿನ ಕೋರೆಯಲ್ಲಿ ದುಡಿಯುವುದು, ಬೀಡಿಕಟ್ಟುವುದು, ಹಂಚಿನ ಕಾರ್ಖಾನೆಗಳಲ್ಲಿ, ಬಟ್ಟೆ ಅಂಗಡಿಗಳಲ್ಲಿ, ಹಾಲಿನ ಡೈರಿಯಲ್ಲಿ ದುಡಿಯುತ್ತಾರೆ.

ಕೃಷಿ ಕ್ಷೇತ್ರದಲ್ಲಿ ಮಹಿಳೆಯರು ಪುರುಷರಿಗೆ ಸರಿಸಮಾನರಾಗಿ ದುಡಿಯುತ್ತಾರೆ. ಮಹಿಳೆಯರು ಮಾಡುವ ಪ್ರತಿಯಂದು ಕೆಲಸವೂ ಕೌಶಲ್ಯರಹಿತತೆ ಮತ್ತು ಕಡಿಮೆ ಉತ್ಪಾದಕ ಎಂದು ಕರೆಯಲಾಗುತ್ತದೆ. ಹೆಚ್ಚಿನ ಕೃಷಿಕೆಲಸಗಳು ಮಹಿಳೆಯರನ್ನೇ ಆಧರಿಸಿದರೂ ಅವರು

ಪುರುಷರಿಗಿಂತ ಕಡಿಮೆ ಆದಾಯ ಪಡೆಯುತ್ತಾರೆ. ಕೃಷಿ ಮಾತ್ರವಲ್ಲದೆ ಇತರ ಕ್ಷೇತ್ರಗಳಲ್ಲಿಯೂ ತಮ್ಮನ್ನು ಅಧಿಕವಾಗಿ ತೊಡಗಿಸಿಕೊಳ್ಳುವ ಮಹಿಳೆಯರು ಅಲ್ಲೂ ವೇತನ ತಾರತಮ್ಯವನ್ನು ಎದುರಿಸುತ್ತಿದ್ದಾರೆ. ಅವರು ಮನೆಯ ಹೊರಗೆ ಮಾತ್ರವಲ್ಲದೆ ಮನೆಯ ಒಳಗೂ ತಮ್ಮ ಕರ್ತವ್ಯ ಹಾಗೂ ಕೆಲಸಗಳನ್ನು ನಿಷ್ಠೆಯಿಂದ ನಿರ್ವಹಿಸುತ್ತಾರೆ. ಅವರು ಮನೆ ಖರ್ಚಿಗಾಗಿ ಹಾಗೂ ಮಕ್ಕಳ ವಿದ್ಯಾಭ್ಯಾಸದ ದೃಷ್ಟಿಯಿಂದ ದುಡಿಮೆ ನಡೆಸುತ್ತಾರೆ. ಕೆಲವು ಗ್ರಾಮಗಳಲ್ಲಿ ಕುಟುಂಬಗಳು ತೀರಾ ಬಡತನದಲ್ಲಿದ್ದು ಕೆಲವು ಮಹಿಳೆಯರು ದಿನದಲ್ಲಿ ೨–೩ಕಡೆ ಮನೆಕೆಲಸ ಮಾಡಿ ತಮ್ಮ ಜೀವನವನ್ನು ಸಾಗಿಸುತ್ತಿದ್ದಾರೆ. ಇಂದು ಮಹಿಳೆಯರು ದುಡಿಯುವ ಹಲವು ಕ್ಷೇತ್ರಗಳಲ್ಲಿ ತಂತ್ರಜ್ಞಾನವನ್ನು ಪರಿಚಯಿಸಿದ್ದರಿಂದ ಮಹಿಳಕಾರ್ಮಿಕರಿಗೆ ಕೆಲಸ ತಪ್ಪಿಹೋಗಿ ಪುರುಷ ಕಾರ್ಮಿಕರಿಗೆ ಉದ್ಯೋಗ ಸೃಷ್ಟಿಯಾಗಿದೆ.

ಗ್ರಾಮಗಳಲ್ಲಿರುವ ಸ್ವಸಹಾಯ ಸಂಘಗಳು, ಸ್ತ್ರೀಶಕ್ತಿ ಗುಂಪುಗಳು, ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಗಳು, ಸ್ವ–ಉದ್ಯೋಗ ಯೋನೆಗಳು ಹಾಗೂ ಇನ್ನಿತರ ಕಿರುಹಣಕಾಸಿನ ಸಂಘ ಸಂಸ್ಥೆಗಳು ಗ್ರಾಮೀಣ ಮಹಿಳೆಯರನ್ನು ಆದಾಯೋತ್ಪನ್ನ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡು ತಮ್ಮ ಕುಟುಂಬದ ಅಭಿವೃದ್ಧಿ, ಸಾಮಾಜಿಕ ಅಭಿವೃದ್ಧಿ ಮತ್ತು ಗ್ರಾಮದ ಅಭಿವ್ರದ್ಧಿಯಲ್ಲಿ ಪ್ರಮುಖ ಪಾತ್ರವಹಿಸುವಂತೆ ಮಾಡಿದೆ. ಕಿರು ಹಣಕಾಸಿನ ಸಂಸ್ಥೆಗಳು ಮಹಿಳೆಯರ ಸಬಲೀಕರಣದ ವಿಷಯದಲ್ಲಿ ಪ್ರಮುಖ ಪಾತ್ರವಹಿಸುತ್ತದೆ. ಇದು ಮಹಿಳೆಯರ ಆರ್ಥಿಕಮಟ್ಟವನ್ನು ಸುಧಾರಿಸುವುದು ಮತ್ರವಲ್ಲದೆ, ಅವರಲ್ಲಿ ಆತ್ಮವಿಶ್ವಾಸವನ್ನು ಜಾಗೃತಗೊಳಿಸುತ್ತದೆ.

ಅಧ್ಯಾಯ-೪
ಗ್ರಾಮೀಣ ಮಹಿಳಾ ಕಾರ್ಮಿಕರ ಸಮಸ್ಯೆಗಳು
ಕ್ಷೇತ್ರ ಕಾರ್ಯಾಧಾರಿತ ಮಾಹಿತಿ ವಿಶ್ಲೇಷಣೆ

ಅಧ್ಯಾಯ-೪

ಗ್ರಾಮೀಣ ಮಹಿಳಾ ಕಾರ್ಮಿಕರ ಸಮಸ್ಯೆಗಳು –

ಕ್ಷೇತ್ರ ಕಾರ್ಯಾಧಾರಿತ ಮಾಹಿತಿ ವಿಶ್ಲೇಷಣೆ

ಗ್ರಾಮೀಣ ಮಹಿಳಾ ಕಾರ್ಮಿಕರ ಸಮಸ್ಯೆಗಳು- ಬಂಟ್ವಾಳ ತಾಲೂಕಿನಲ್ಲಿ ಒಂದು ಪ್ರಕರಣ ಅಧ್ಯಯನ ಎಂಬ ಈ ಅಧ್ಯಯನವು ಗ್ರಾಮೀಣ ಮಹಿಳಾ ಕಾರ್ಮಿಕರ ಸಮಸ್ಯೆಗಳನ್ನು ಅಧ್ಯಯನಮಾಡುವುದನ್ನು ಉದ್ದೇಶವಾಗಿಟ್ಟುಕೊಂಡು ನಡೆಸಲಾಗಿದೆ. ಈ ಸಮೀಕ್ಷೆಯು ಮಹಿಳಾ ಕಾರ್ಮಿಕರ ವೃತ್ತಿ, ಪ್ರವೃತ್ತಿ, ತೃಪ್ತಿಯ ಕುರಿತಾಗಿ ಮಾತ್ರವಲ್ಲದೆ ಸ್ವಸಹಾಯ ಸಂಘಗಳಲ್ಲಿ ಅವರ ಸಕ್ರೀಯ ಭಾಗವಹಿಸುವಿಕೆಯ ಕುರಿತು ಕೇಂದ್ರೀಕೃತಗೊಂಡಿದೆ.

ಬಂಟ್ವಾಳ ತಾಲೂಕಿನ ಕೆಲವು ಗ್ರಾಮಗಳಿಗೆ ಸೇರಿದ ಪ್ರದೇಶಗಳಲ್ಲಿ ಪ್ರಶ್ನಾವಳಿ ವಿಧಾನದ ಮೂಲಕ ಪ್ರಾಥಮಿಕ ಮಾಹಿತಿಯನ್ನು ಮಹಿಳಾ ಕಾರ್ಮಿಕರಿಂದ ಸಂಗ್ರಹಿಸಲಾಯಿತು. ಗ್ರಾಮೀಣ ಮಹಿಳಾ ಕಾರ್ಮಿಕರ ಸಮಸ್ಯೆಗಳಿಗೆ ಸಂಬಂಧಿಸಿದಂತೆ ಸಂಗ್ರಹಿಸಲಾದ ಮಾಹಿತಿಯನ್ನು ಈ ಕೆಳಗಿನ ಶಿರ್ಷಿಕೆಗಳಡಿಯಲ್ಲಿ ಕೋಷ್ಟಕಗಳ ಮೂಲಕ ಅಭಿವ್ಯಕ್ತಗೊಳಿಸಲಾಗಿದೆ.

೧. ಕೌಟುಂಬಿಕ ಹಿನ್ನೆಲೆ – ಪ್ರಶ್ನಾವಳಿ ಉತ್ತರಿಸಿದವರ ವಯಸ್ಸು, ಉದ್ಯೋಗ, ವಾರ್ಷಿಕ ಆದಾಯ ಹಾಗೂ ವಿದ್ಯಾರ್ಹತೆಗೆ ಸಂಬಂಧಿಸಿದಂತೆ ಸಾಮಾನ್ಯ ವಿವರಗಳನ್ನೊಳಗೊಂಡ ಕೋಷ್ಟಕಗಳು.

೨. ಮಹಿಳಾ ಕಾರ್ಮಿಕರ ಮನೆಯ ವಿವರಗಳು

೩. ಮಹಿಳಾ ಕಾರ್ಮಿಕರ ಉದ್ಯೋಗದ ವಿವರಗಳು

೪. ಇತರ ವಿವರಗಳು

೪.೧ ಪ್ರಶ್ನಾವಳಿಗೆ ಉತ್ತರಿಸಿದವರಿಗೆ ಸಂಬಂಧಿಸಿದಂತೆ ಸಾಮಾನ್ಯ ಮಾಹಿತಿಗಳು

ಅಧ್ಯಯನದ ವಿಷಯಕ್ಕೆ ಸಂಬಧಿಸಿದಂತೆ ಮಾಹಿತಿ ಸಂಗ್ರಹಣೆಯ ಸಂದರ್ಭದಲ್ಲಿ ಪ್ರಶ್ನಾವಳಿಗೆ ಉತ್ತರಿಸಿದವರ ಕೌಟುಂಬಿಕ ಹಿನ್ನೆಲೆಯ ಪರಿಚಯ ಮಾಡಿಕೊಳ್ಳುವ

ಪರಿಪಾಠವಿದೆ. ಅದರಂತೆ ಪ್ರಸ್ತುತ ಅಧ್ಯಯನದಲ್ಲಿಯೂ, ಪ್ರಶ್ನಾವಳಿಯ ಆರಂಭದಲ್ಲಿ ಮಾಹಿತಿದಾರರ (ಉತ್ತರಿಸಿದವರ) ಹೆಸರು, ವಯಸ್ಸು, ಉದ್ಯೋಗ, ವಾಸಸ್ಥಳ, ಆದಾಯ ಹಾಗೂ ವಿದ್ಯಾರ್ಹತೆಗಳಿಗೆ ಸಂಬಂಧಿಸಿದಂತೆ ಸಾಮಾನ್ಯ ಮಾಹಿತಿಯನ್ನು ಸಂಗ್ರಹಿಸಲಾಗಿದೆ. ಮಾತ್ರವಲ್ಲದೆ ಅವರ ಉದ್ಯೋಗದ ಬಗ್ಗೆ ಹಾಗೂ ಸಂಘ-ಸಂಸ್ಥೆಗಳಲ್ಲಿ ಅವರ ಭಾಗವಹಿಸುವಿಕೆ ಇತ್ಯಾದಿ ವಿಷಯಗಳ ಬಗ್ಗೆ ಮಾಹಿತಿ ಸಂಗ್ರಹಿಸಲಾಗಿದೆ. ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಬಂಟ್ವಾಳ ತಾಲೂಕಿನ ಕೆಲವು ಗ್ರಾಮಗಳಲ್ಲಿ ಪ್ರಶ್ನಾವಳಿಯನ್ನು ಆಯ್ದ ೧೦೦ ಮಹಿಳೆಯರಿಗೆ ಹಂಚಲಾಯಿತು. ಅವರಲ್ಲಿ ಕೇವಲ ೮೮ ಮಹಿಳೆಯರು ಮಾತ್ರ ಉತ್ತರಿಸಿದ್ದಾರೆ. ಈ ಪ್ರಶ್ನಾವಳಿಗೆ ಉತ್ತರಿಸಿದವರಲ್ಲಿ ಈ ಕೆಳಕಂಡ ವಯೋಮಾನ ಗುಂಪುಗಳಿಗೆ ಸೇರಿದವರಿದ್ದಾರೆ.

ಕೋಷ್ಟಕ ೪.೧.೧: ಮಾಹಿತಿದಾರರ ವಯೋಮಾನ ವರ್ಗೀಕರಣ

ಕ್ರಮ. ಸಂಖ್ಯೆ	ವಯೋಮಾನ	ಸಂಖ್ಯೆ	ಶೇಕಡಾವಾರು ಪ್ರಮಾಣ
೧	೧೮-೩೦	೨೨	೨೫
೨	೩೧-೪೪	೪೮	೫೪.೫೫
೩	೪೫-೫೪	೧೬	೧೮.೧೮
೪	೫೫ ರಿಂದ ಮೇಲ್ಪಟ್ಟು	೦೨	೨.೨೭
	ಒಟ್ಟು	೮೮	೧೦೦

ಮೂಲ: ಸಂಶೋಧಕರ ಕ್ಷೇತ್ರಕಾರ್ಯಾಧಾರಿತ ಮಾಹಿತಿ

ಕೋಷ್ಟಕ ೪.೧.೧ ದ ಪ್ರಕಾರ ಒಟ್ಟು ೮೮ ಮಹಿಳೆಯರಲ್ಲಿ ಶೇಕಡಾ ೫೪.೫೫ರಷ್ಟು ಮಹಿಳೆಯರು ೩೧ ರಿಂದ ೪೪ ಒಳಗಿನ ವಯಸ್ಸಿನವರೇ ಹೆಚ್ಚಿನ ಸಂಖ್ಯೆಯಲ್ಲಿ ಕ್ಷೇತ್ರಕಾರ್ಯದಲ್ಲಿ ಸಂಶೋಧಕರಿಗೆ ಲಭಿಸಿರುತ್ತಾರೆ. ಇದರಿಂದಾಗಿ ನಡು ವಯಸ್ಸಿನ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಅಸಂಘಟಿತ ವಲಯದಲ್ಲಿ ದುಡಿಯುತ್ತಿದ್ದಾರೆ ಎಂಬುದು ಇಲ್ಲಿ ತಿಳಿದುಬರುತ್ತದೆ. ಬದಲಾವಣೆಯ ಪ್ರಮುಖ ಅಸ್ತ್ರ ಶಿಕ್ಷಣ. ಶಿಕ್ಷಣವು ಹೆಣ್ಮಕ್ಕಳನ್ನು ಆರ್ಥಿಕ ಮತ್ತು ಸಮಾಜಿಕ ಸಬಲೀಕರಣದೆಡೆಗೆ ಕೊಂಡೊಯ್ಯಬಲ್ಲುದು. ಈ ಕ್ಷೇತ್ರಕಾರ್ಯದ

ಸಂದರ್ಭದಲ್ಲಿ ವಿವಿಧ ಮಟ್ಟದ ವಿದ್ಯಾರ್ಹತೆಯನ್ನು ಹೊಂದಿರುವ ಮಾಹಿತಿದಾರರನ್ನು ಅಧ್ಯಯನಕ್ಕೊಳಪಡಿಸಿರುವುದು ಈ ಕೋಷ್ಟಕ ೪.೧.೨ ದಲ್ಲಿ ಅಭಿವ್ಯಕ್ತಗೊಂಡಿದೆ.

ಕೋಷ್ಟಕ ೪.೧.೨: ಮಾಹಿತಿದಾರರ ವಿದ್ಯಾರ್ಹತೆ ನೆಲೆಯಲ್ಲಿ

ಕ್ರಮ. ಸಂಖ್ಯೆ	ವಿದ್ಯಾರ್ಹತೆ	ಸಂಖ್ಯೆ	ಶೇಕಡಾವಾರು ಪ್ರಮಾಣ
೧	ಅನಕ್ಷರಸ್ಥ	೪೪	೫೦.೦೦
೨	ಪ್ರಾಥಮಿಕ ಶಿಕ್ಷಣ	೧೨	೧೩.೬೪
೩	ಪ್ರೌಢ ಶಿಕ್ಷಣ	೨೨	೨೫.೦೦
೪	ಪದವಿ ಪೂರ್ವ ಶಿಕ್ಷಣ	೧೦	೧೧.೩೬
೫	ಪದವಿ ಶಿಕ್ಷಣ	--	--
	ಒಟ್ಟು	೮೮	೧೦೦

ಮೂಲ : ಸಂಶೋಧಕರ ಕ್ಷೇತ್ರಕಾರ್ಯಾಧಾರಿತ ಮಾಹಿತಿ

ಅಧ್ಯಯನಕ್ಕೆ ಒಳಪಡಿಸಿರುವ ಮಹಿಳೆಯರಲ್ಲಿ ಅನಕ್ಷರಸ್ಥರು ಹೆಚ್ಚಿನ ಸಂಖ್ಯೆಯಲ್ಲಿರುವುದು ಕಂಡು ಬರುತ್ತದೆ. ನಂತರದ ಸ್ಥಾನದಲ್ಲಿ ಕ್ರಮವಾಗಿ, ಪ್ರೌಡ ಶಿಕ್ಷಣ, ಪ್ರಾಥಮಿಕ ಶಿಕ್ಷಣ ಹಾಗೂ ಪದವಿ ಪೂರ್ವ ಶಿಕ್ಷಣ ಪಡೆದವರಿದ್ದಾರೆ. ಇದರಿಂದ ಹೆಚ್ಚಾಗಿ ಅನಕ್ಷರಸ್ಥ ಮಹಿಳೆಯರೇ ಕಾರ್ಮಿಕರಾಗಿ ದುಡಿಯುತ್ತಿರುವುದನ್ನು ಕೋಷ್ಟಕವು ಪುಷ್ಟೀಕರಿಸುತ್ತದೆ. ಪ್ರತಿಯೊಬ್ಬ ಮನುಷ್ಯನ ಅಭಿವೃದ್ಧಿಯಲ್ಲಿ ಆರ್ಥಿಕ ಅಭಿವೃದ್ಧಿ ಬಹು ಮುಖ್ಯ ಪಾತ್ರವಹಿಸುತ್ತದೆ. ಆರ್ಥಿಕ ಅಭಿವೃದ್ಧಿಯಲ್ಲಿ ಆದಾಯವು ಪ್ರಮುಖವಾಗಿರುತ್ತದೆ. ಆದುದರಿಂದ ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಅಧ್ಯಯನಕ್ಕೆ ಒಳಪಡಿಸಿರುವ ಮಹಿಳಾ ಕಾರ್ಮಿಕರ ಆದಾಯಕ್ಕೆ ಸಂಬಂಧಿಸಿದ ಮಾಹಿತಿಯನ್ನು ತಿಳಿಯುವುದು ಅಗತ್ಯವೆನಿಸುತ್ತದೆ. ಕೋಷ್ಟಕ ೪.೧.೩ ದಲ್ಲಿ ಮಾಹಿತಿದಾರರ ಆದಾಯಾಧರಿತ ಮಾಹಿತಿ ನೀಡಲಾಗಿದೆ.

ಕೋಷ್ಟಕ ೪.೧.೩: ಮಾಹಿತಿದಾರರ ವರಮಾನಾಧಾರಿತ ವರ್ಗೀಕರಣ

ಕ್ರಮ. ಸಂಖ್ಯೆ	ವರಮಾನ ಗುಂಪು	ಸಂಖ್ಯೆ	ಶೇಕಡಾವಾರು ಪ್ರಮಾಣ
೧	ರೂ. ೧೦೦೦/ದಿಂದ ರೂ. ೧೦,೦೦೦/-	೪	೪.೫೫
೨	ರೂ. ೧೦,೦೦೦/- ದಿಂದ ರೂ. ೨೦,೦೦೦/-	೬೬	೭೫.೦೦
೩	ರೂ. ೨೦,೦೦೦/- ದಿಂದ ಮೇಲ್ಪಟ್ಟು	೧೮	೨೦.೪೫
	ಒಟ್ಟು	೮೮	೧೦೦

ಮೂಲ : ಸಂಶೋಧಕರ ಕ್ಷೇತ್ರಕಾರ್ಯಾಧಾರಿತ ಮಾಹಿತಿ

ಮೇಲಿನ ಕೋಷ್ಟಕದಲ್ಲಿ ಒಟ್ಟು ೮೮ ಮಾಹಿತಿದಾರರಲ್ಲಿ ೬೬ ಮಂದಿಯ ವಾರ್ಷಿಕ ಆದಾಯವು ರೂ.೧೦,೦೦೦/- ದಿಂದ ೨೦,೦೦೦/- ಮಧ್ಯೆ ಇದೆ. ಇದರಿಂದ ತಿಳಿಯುವುದೇನೆದರೆ ಹೆಚ್ಚಿನ ಮಹಿಳಾ ಕಾರ್ಮಿಕರು ಮಧ್ಯಮ ವರ್ಗಕ್ಕೆ ಸೇರಿರುತ್ತಾರೆ. ಉಳಿದಂತೆ ಶೇಕಡಾ ೨೦.೪೫ ರಷ್ಟು ಮಹಿಳೆಯರ ವಾರ್ಷಿಕ ಆದಾಯವು ರೂ.೨೦೦೦೦/-ಕ್ಕಿಂತ ಮೇಲ್ಪಟ್ಟಿದೆ.

ಮಾಹಿತಿದಾರರಲ್ಲಿ ನೀವು ವಾಸವಾಗಿರುವ ಪ್ರದೇಶ ಯಾವುದು? ಎಂದು ಕೇಳಿದಾಗ, ೮೮ ಮಾಹಿತಿದಾರರಲ್ಲಿ ೮೫ ಮಂದಿ ಗ್ರಾಮಾಂತರ ಪ್ರದೇಶದವರೆಂದೂ, ಕೇವಲ ೩ ಮಂದಿ ನಗರ ಪ್ರದೇಶದವರೆಂದೂ ತಿಳಿಸಿರುತ್ತಾರೆ. ಆದುದರಿಂದ ಹೆಚ್ಚಿನ ಮಹಿಳಾ ಕಾರ್ಮಿಕರು ಗ್ರಾಮಾಂತರ ಪ್ರದೇಶಕ್ಕೆ ಸೇರಿದವರಾಗಿರುತ್ತಾರೆ ಎಂಬುದನ್ನು ಕೋಷ್ಟಕ ೪.೧.೪ ದಿಂದ ತಿಳಿಯಬಹುದು.

ಕೋಷ್ಟಕ ೪.೧.೪ : ವಾಸವಾಗಿರುವ ಪ್ರದೇಶ

ಕ್ರಮ. ಸಂಖ್ಯೆ	ಪ್ರದೇಶ	ಸಂಖ್ಯೆ	ಶೇಕಡಾವಾರು ಪ್ರಮಾಣ
೧	ಗ್ರಾಮಾಂತರ	೮೫	೯೬.೫೯
೨	ನಗರ	೩	೩.೪೧
	ಒಟ್ಟು	೮೮	೧೦೦

ಮೂಲ : ಸಂಶೋಧಕರ ಕ್ಷೇತ್ರಕಾರ್ಯಾಧಾರಿತ ಮಾಹಿತಿ

೪.೨. ಮಹಿಳಾ ಕಾರ್ಮಿಕರ ಮನೆಯ ವಿವರಗಳು

ಮಹಿಳಾ ಕಾರ್ಮಿಕರ ಮನೆಯ ವಿವರಗಳನ್ನು ಪಡೆಯುವುದರಿಂದ ಅವರ ಸಾಂಪ್ರದಾಯಿಕ ಉದ್ಯೋಗ, ವಾಸವಾಗಿರುವ ಮನೆ, ಮನೆಗೆ ಕುಡಿಯುವ ನೀರಿನ ವ್ಯವಸ್ಥೆ, ವಿದ್ಯುತ್ ಸಂಪರ್ಕ ಇತ್ಯಾದಿ ವಿಷಯಗಳ ಬಗ್ಗೆ ಮಾಹಿತಿ ಸಂಗ್ರಹಿಸಬಹುದಾಗಿದೆ.

ಪ್ರಾಥಮಿಕ ಮಹಿತಿಯನ್ನು ಸಂಗ್ರಹಿಸುವಾಗ ಮಾಹಿತಿದಾರರಲ್ಲಿ ನೀವು ವಾಸಿಸುವ ಮನೆ ಎಂತಹುದು? ಎಂದು ಕೇಳಿದಾಗ ಒಟ್ಟು ೮೮ ಮಂದಿಯಲ್ಲಿ ೮೪ ಮಂದಿ ಹಂಚಿನ ಮನೆಯಲ್ಲಿ, ಹಾಗೂ ೪ ಮಂದಿ ತಾರಸಿ ಮನೆಯಲ್ಲಿರುವುದು ತಿಳಿದು ಬರುತ್ತದೆ. ಕೋಷ್ಟಕ ೪.೨.೧ವು ಮೇಲೆ ನೀಡಿದ ಮಾಹಿತಿಯನ್ನು ಪುಷ್ಟೀಕರಿಸುತ್ತದೆ.

ಕೋಷ್ಟಕ ೪.೨.೧: ಸದಸ್ಯರಾಗಿರುವ ಪ್ರಧಾನ ಉದ್ದೇಶ

ಕ್ರಮ. ಸಂಖ್ಯೆ	ವಾಸ್ತವ್ಯ	ಸಂಖ್ಯೆ	ಶೇಕಡಾವಾರು ಪ್ರಮಾಣ
೧	ಹುಲ್ಲಿನ ಮಾಡು	-	-
೨	ಹಂಚಿನ ಮಾಡು	೮೪	೯೫.೪೫
೩	ತಾರಸಿ ಮನೆ	೪	೪.೫೫
	ಒಟ್ಟು	೮೮	೧೦೦

ಮೂಲ: ಸಂಶೋಧಕರ ಕ್ಷೇತ್ರಕಾರ್ಯಾಧಾರಿತ ಮಾಹಿತಿ

ಅಧ್ಯಯನಕ್ಕೊಳಪಡಿಸಿದ ೮೮ ಮಹಿಳೆಯರಲ್ಲಿ ಕೇವಲ ೪ ಮಂದಿ ವಲಸೆ ಬಂದವರಾಗಿದ್ದು, ಅವರು ಕೆಲಸ ಹಾಗೂ ಮಕ್ಕಳ ಶಿಕ್ಷಣದ ದೃಷ್ಟಿಯಿಂದ ವಲಸೆ ಬಂದು

ಬಂಟ್ವಾಳ ತಾಲೂಕಿನಲ್ಲಿ ನೆಲೆಸಿದ್ದಾರೆಂಬುದು ಸಂಶೋಧಕರಿಗೆ ತಿಳಿದು ಬಂದಿರುತ್ತದೆ. ಅಧ್ಯಯನಕ್ಕೊಳಪಡಿಸಿದ ಪ್ರತಿಪಾದಕರಲ್ಲಿ ಮನೆಗೆ ಕುಡಿಯುವ ನೀರಿನ ಸೌಲಭ್ಯ ಹಾಗೂ ವಿದ್ಯುತ್ ಸೌಕರ್ಯ ಹೊಂದಿರುವುದು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಸಂಶೋಧಕರಿಗೆ ತಿಳಿದುಬರುತ್ತದೆ.

ಗ್ರಾಮೀಣ ಪ್ರದೇಶದ ಜನರು ಒಂದಲ್ಲ ಒಂದು ಕಾರಣಕ್ಕಾಗಿ ಪಟ್ಟಣದ ಜೊತೆ ಸಂಪರ್ಕ ಹೊಂದಿರಲೇಬೇಕು. ಬಂಟ್ವಾಳ ತಾಲೂಕಿನ ಕೆಲವು ಹಳ್ಳಿಗಳಲ್ಲಿ ಸಾರಿಗೆ ವ್ಯವಸ್ಥೆಯು ಉತ್ತಮ ಮಟ್ಟದಲ್ಲಿ ಇಲ್ಲದೆ ಇರುದರಿಂದ ಗ್ರಾಮೀಣ ಪ್ರದೇಶದ ಜನರಿಗೆ ಪಟ್ಟಣಕ್ಕೆ ತೆರಳಲು ಸೂಕ್ತ ವಾಹನ ವ್ಯವಸ್ಥೆ ಇಲ್ಲ ಎಂಬುದು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಸಂಶೋಧಕರಿಗೆ ತಿಳಿದುಬಂದ ಮಾಹಿತಿಯಾಗಿದೆ. ಅಧ್ಯಯನಕ್ಕೊಳಪಡಿಸಿದ ಪ್ರತಿಪಾದಕರಲ್ಲಿ ನಿಮ್ಮ ವಾಸ್ತವ್ಯ ಪ್ರದೇಶದಿಂದ ಪಟ್ಟಣಕ್ಕೆ ಹೋಗಲು ಸೂಕ್ತ ವಾಹನ ಸೌಕರ್ಯವಿದೆಯೇ? ಎಂದು ಕೇಳಿದಾಗ ಅವರು ನೀಡಿದ ಮಾಹಿತಿಯನ್ನು ಕೋಷ್ಟಕ ೪.೨.೨ದಲ್ಲಿ ನೀಡಲಾಗಿದೆ. ಕೋಷ್ಟಕದ ಪ್ರಕಾರ ಒಟ್ಟು ೬೮ ಮಂದಿ ಸೂಕ್ತ ವಾಹನ ಸೌಕರ್ಯ ಇದೆ ಎಂದೂ, ೨೦ ಮಂದಿ ಪಟ್ಟಣಕ್ಕೆ ಹೋಗಲು ಸೂಕ್ತ ವಾಹನ ವ್ಯವಸ್ಥೆ ಇಲ್ಲ ಎಂದು ತಿಳಿಸಿರುತ್ತಾರೆ.

048803

ಕೋಷ್ಟಕ ೪.೨.೨: ವಾಹನ ಸೌಕರ್ಯ

ಕ್ರಮ. ಸಂಖ್ಯೆ	ವಾಹನ ಸೌಕರ್ಯ	ಸಂಖ್ಯೆ	ಶೇಕಡಾವಾರು ಪ್ರಮಾಣ
೧	ಇದೆ	೬೮	೭೭.೨೭
೨	ಇಲ್ಲ	೨೦	೨೨ .೭೩
	ಒಟ್ಟು	೮೮	೧೦೦

ಮೂಲ : ಸಂಶೋಧಕರ ಕ್ಷೇತ್ರಕಾರ್ಯಾಧಾರಿತ ಮಾಹಿತಿ

ಪ್ರತಿಪಾದಕರಲ್ಲಿ ನೀವು ಆಧಾರ್ ಕಾರ್ಡ್ ಹೊಂದಿರುವ ಬಗ್ಗೆ ಕೇಳಿದಾಗ ೮೬ ಮಂದಿ ಇಲ್ಲ ಎಂದೂ ಮತ್ತು ಕೇವಲ ೨ ಜನ ಹೊಂದಿದ್ದೇವೆ ಎಂದಿದ್ದಾರೆ. ಇದರಿಂದಾಗಿ ಸರಕಾರದ ಕೆಲವೊಂದು ಸವಲತ್ತುಗಳು ಗ್ರಾಮೀಣ ಪ್ರದೇಶಗಳನ್ನು ತಲುಪುತ್ತಿಲ್ಲ ಎಂಬುದು ಸ್ಪಷ್ಟವಾಗುತ್ತದೆ. ಈ ಮೇಲೆ ತಿಳಿಸಿರುವ ಮಾಹಿತಿಯನ್ನು ಕೋಷ್ಟಕ ೪.೨.೩ವು ಪುಷ್ಟೀಕರಿಸುತ್ತದೆ.

ಕೋಷ್ಟಕ ೪.೨.೩: ಆಧಾರ್ ಕಾರ್ಡ್

ಕ್ರಮ. ಸಂಖ್ಯೆ	ಆಧಾರ್ ಕಾರ್ಡ್	ಸಂಖ್ಯೆ	ಶೇಕಡಾವಾರು ಪ್ರಮಾಣ
೧	ಹೊಂದಿದ್ದೇವೆ	೨	೨.೨೭
೨	ಹೊಂದಿಲ್ಲ	೮೬	೯೭.೭೩
	ಒಟ್ಟು	೮೮	೧೦೦

ಮೂಲ: ಸಂಶೋಧಕರ ಕ್ಷೇತ್ರಕಾರ್ಯಾಧಾರಿತ ಮಾಹಿತಿ

೪.೩. ಮಹಿಳಾ ಕಾರ್ಮಿಕರ ಉದ್ಯೋಗದ ವಿವರಗಳು

ಈ ಸ್ಪರ್ಧಾತ್ಮಕ ಜಗತ್ತಿನಲ್ಲಿ ಉದ್ಯೋಗ ದೊರೆಯುವುದು ಬಹಳ ಕಷ್ಟಕರವಾಗಿದೆ. ಈ ನಿಟ್ಟಿನಲ್ಲಿ ಮಾಹಿದಾರರಲ್ಲಿ ನಿಮಗೆ ಉದ್ಯೋಗ ಹೇಗೆ ದೊರೆಯಿತು? ಎಂದು ಕೇಳಿದಾಗ ದೊರೆತಂತಹ ಮಾಹಿತಿಯನ್ನು ಈ ಕೆಳಗಿನ ಕೋಷ್ಟಕದಿಂದ ತಿಳಿಯಬಹುದಾಗಿದೆ.

ಕೋಷ್ಟಕ ೪.೩.೧: ಮಾಹಿತಿದಾರರಿಗೆ ಉದ್ಯೋಗ ದೊರೆತ ಮಾಹಿತಿ

ಕ್ರಮ. ಸಂಖ್ಯೆ	ಉದ್ಯೋಗ ದೊರಕಿದ್ದು	ಸಂಖ್ಯೆ	ಶೇಕಡಾವಾರು ಪ್ರಮಾಣ
೧	ಹೆತ್ತವರ ಮತ್ತು ಸಂಬಂಧಿಕರ ನೆರವಿನಿಂದ	೧೭	೧೯.೩೨
೨	ಸ್ನೇಹಿತರ ಮೂಲಕ	೪೧	೪೬.೫೯
೩	ಉದ್ಯೋಗ ವಿನಿಮಯ ಕೇಂದ್ರದ ಮೂಲಕ	--	--
೪	ಸ್ವಂತ ಪ್ರಯತ್ನದಿಂದ	೩೦	೩೪.೦೯
೫	ಇತರೆ	--	--
	ಒಟ್ಟು	೮೮	೧೦೦

ಮೂಲ: ಸಂಶೋಧಕರ ಕ್ಷೇತ್ರಕಾರ್ಯಾಧಾರಿತ ಮಾಹಿತಿ

ಕೋಷ್ಟಕ ೪.೩.೧ ದ ಪ್ರಕಾರ ಕ್ಷೇತ್ರಕಾರ್ಯದಲ್ಲಿ ಪರಿಗಣಿಸಿದ ಒಟ್ಟು ೮೮ ಪ್ರತಿಪಾದಕರಲ್ಲಿ ೪೧ ಮಂದಿ ತಮ್ಮ ಸ್ನೇಹಿತರ ಮೂಲಕ ಉದ್ಯೋಗ ದೊರೆಯಿತೆಂದೂ, ೩೦ ಮಂದಿ ಸ್ವಂತ ಪ್ರಯತ್ನದಿಂದ ಹಾಗೂ ೧೭ ಮಂದಿ ಹೆತ್ತವರ ಹಾಗೂ ಸಂಬಂಧಿಕರ ನೆರವಿನಿಂದ ಉದ್ಯೋಗ ದೊರೆಯಿತೆಂದೂ ಸಂಶೋಧಕರಿಗೆ ತಿಳಿಸಿರುತ್ತಾರೆ. ಮಾಹಿತಿದಾರರು ಉದ್ಯೋಗಕ್ಕೆ ಹೋಗುವ ಕಾರಣವು ಕೋಷ್ಟಕ ೪.೩.೨ದಲ್ಲಿ ಅಭಿವ್ಯಕ್ತಗೊಂಡಿದೆ.

ಕೋಷ್ಟಕ ೪.೩.೨: ಮಾಹಿತಿದಾರರು ಉದ್ಯೋಗಕ್ಕೆ ಹೋಗುವ ಕಾರಣ

ಕ್ರಮ. ಸಂಖ್ಯೆ	ಉದ್ಯೋಗಕ್ಕೆ ಹೋಗಲು ಕಾರಣ	ಸಂಖ್ಯೆ	ಶೇಕಡಾವಾರು ಪ್ರಮಾಣ
೧	ಹಣಕಾಸಿನ ಅವಶ್ಯಕತೆ	೭೩	೮೨.೯೫
೨	ಬೇರೆ ಯಾವುದೇ ಕೆಲಸ ಸಿಗದಿರುವುದು	೧೫	೧೭.೦೫
೩	ಇತರೆ	--	--
	ಒಟ್ಟು	೮೮	೧೦೦

ಮೂಲ : ಸಂಶೋಧಕರ ಕ್ಷೇತ್ರಕಾರ್ಯಾಧಾರಿತ ಮಾಹಿತಿ

ಅಧ್ಯಯನಕ್ಕೊಳಪಡಿಸಿದ ಮಾಹಿತಿದಾರರಲ್ಲಿ ೭೩ ಮಂದಿ ಹಣಕಾಸಿನ ಅವಶ್ಯಕತೆಗಾಗಿ ಹಾಗೂ ೧೫ ಮಂದಿ ಬೇರೆ ಕೆಲಸ ಸಿಗದಿರುವುದರಿಂದ ಉದ್ಯೋಗಕ್ಕೆ ಸೇರಿರುವುದು ಸ್ಪಷ್ಟವಾಗಿರುತ್ತದೆ. ಇದರಿಂದ ತಿಳಿದು ಬರುವುದೇನೆಂದರೆ, ಹೆಚ್ಚಿನ ಮಹಿಳಾ ಕಾರ್ಮಿಕರು ಆರ್ಥಿಕವಾಗಿ ಹಿಂದುಳಿದಿರುವುದರಿಂದ ಹಣಕಾಸಿನ ಅವಶ್ಯಕತೆಗಾಗಿ ಉದ್ಯೋಗಕ್ಕೆ ಸೇರಿರುವ ಮಾಹಿತಿ ಸಂಶೋಧಕರಿಗೆ ಲಭ್ಯವಾಗಿರುತ್ತದೆ. ಪ್ರತಿಪಾದಕರಲ್ಲಿ ೫ ವರ್ಷಗಳಲ್ಲಿ ಉದ್ಯೋಗ ಬದಲಾವಣೆ ಮಾಡಿರುವಿರಾ ಎಂದು ಕೇಳಿದಕ್ಕೆ ೬೯ ಮಂದಿ ಬದಲಾಯಿಸಿದ್ದೇವೆಂದೂ ,೧೯ ಮಂದಿ ಬದಲಾಯಿಸಿಲ್ಲವೆಂದೂ ತಿಳಿಸಿರುತ್ತಾರೆ. ಅಧಿಕ ಹಣದ ಅವಶ್ಯಕತೆ, ಕೆಲಸದ ಅವಧಿ, ಉತ್ತಮ ವಾತಾವರಣದ ದೃಷ್ಟಿಯಿಂದ ಅಸಂಘಟಿತ ವಲಯದ ಕಾರ್ಮಿಕರು ಪದೇ ಪದೇ

ತಮ್ಮ ಉದ್ಯೋಗವನ್ನು ಬದಲಾಯಿಸಿರುತ್ತಾರೆಂಬುದು ಅಧ್ಯಯನದಿಂದ ತಿಳಿದುಬಂದಿದೆ. ಈ ಮೇಲೆ ತಿಳಿಸಿರುವ ಮಾಹಿತಿಯನ್ನು ಕೋಷ್ಟಕ ೪.೩.೩ ದಿಂದ ಸ್ಪಷ್ಟಪಡಿಸಿಕೊಳ್ಳಬಹುದು.

ಕೋಷ್ಟಕ ೪.೩.೩: ೫ ವರ್ಷಗಳಲ್ಲಿ ಉದ್ಯೋಗ ಬದಲಾವಣೆ ಮಾಡಿರುವ ಬಗ್ಗೆ

ಕ್ರಮ. ಸಂಖ್ಯೆ	ಉದ್ಯೋಗ ಬದಲಾವಣೆ	ಸಂಖ್ಯೆ	ಶೇಕಡಾವಾರು ಪ್ರಮಾಣ
೧	ಬದಲಾಯಿಸಲಾಗಿದೆ	೬೯	೭೮.೪೧
೨	ಬದಲಾಯಿಸಲಿಲ್ಲ	೧೯	೨೧.೫೯
	ಒಟ್ಟು	೮೮	೧೦೦

ಮೂಲ : ಸಂಶೋಧಕರ ಕ್ಷೇತ್ರಕಾರ್ಯಾಧಾರಿತ ಮಾಹಿತಿ

ಮಾಹಿತಿದಾರರಲ್ಲಿ ನೀವು ಉದ್ಯೋಗ ಮಾಡುವಲ್ಲಿ ಪುರುಷ ಕಾರ್ಮಿಕರು ಇದ್ದಾರೆಯೇ? ಎಂದು ಕೇಳಿದಾಗ ೮೧ ಮಹಿಳೆಯರು ಪುರುಷ ಕಾರ್ಮಿಕರು ಇದ್ದಾರೆ ಎಂದೂ, ಕೇವಲ ೭ ಮಂದಿ ತಾವು ಕೆಲಸ ಮಾಡುವಲ್ಲಿ ಪುರುಷ ಕಾರ್ಮಿಕರು ಇಲ್ಲವೆಂದು ಹೇಳಿರುತ್ತಾರೆ. ಇದರಿಂದ ತಿಳಿದು ಬರುವುದೇನೆಂದರೆ ಮಹಿಳೆಯರು ಹಾಗೂ ಪುರುಷರು ಹೆಚ್ಚಿನ ಕಡೆಗಳಲ್ಲಿ ಒಟ್ಟಿಗೆ ಕೆಲಸ ಮಾಡುತ್ತಾರೆಂಬುದು ಸ್ಪಷ್ಟವಾಗುತ್ತದೆ.

ಕೋಷ್ಟಕ ೪.೩.೪: ಉದ್ಯೋಗ ಮಾಡುವಲ್ಲಿ ಪುರುಷ ಕಾರ್ಮಿಕರು

ಕ್ರಮ. ಸಂಖ್ಯೆ	ಪುರುಷ ಕಾರ್ಮಿಕರು	ಸಂಖ್ಯೆ	ಶೇಕಡಾವಾರು ಪ್ರಮಾಣ
೧	ಇದ್ದಾರೆ	೮೧	೯೨.೦೫
೨	ಇಲ್ಲ	೭	೭.೯೫
	ಒಟ್ಟು	೮೮	೧೦೦

ಮೂಲ : ಸಂಶೋಧಕರ ಕ್ಷೇತ್ರಕಾರ್ಯಾಧಾರಿತ ಮಾಹಿತಿ

ಮಹಿಳಾ ಕಾರ್ಮಿಕರು ಹಾಗೂ ಪುರುಷ ಕಾರ್ಮಿಕರ ನಡುವೆ ಇರುವ ತಾರತಮ್ಯದ ಬಗ್ಗೆ ಮಾಹಿತಿದಾರರು ನೀಡಿದ ಅಭಿಪ್ರಾಯವನ್ನು ಈ ಕೆಳಗಿನ ಕೋಷ್ಟಕದಲ್ಲಿ ಅಭಿವ್ಯಕ್ತ ಗೊಳಿಸಲಾಗಿದೆ. ಪ್ರತಿಪಾದಕರಲ್ಲಿ ನಿಮಗೆ ಹಾಗೂ ಪುರುಷ ಕಾರ್ಮಿಕರಿಗೆ ಉದ್ಯೋಗದಲ್ಲಿ ತಾರತಮ್ಯವಿದೆಯೇ? ಎಂದು ಕೇಳಿದಾಗ ೭೯ ಮಂದಿ ಇದೆ ಎಂದೂ, ಕೇವಲ ೯ ಮಂದಿ ಇಲ್ಲವೆಂದೂ ಸಂಶೋಧಕರಿಗೆ ತಿಳಿಸಿರುತ್ತಾರೆ. ಇದರಿಂದ ತಿಳಿದು ಬರುವುದೇನೆಂದರೆ, ಇಂದಿಗೂ ಮಹಿಳಾ ಕಾರ್ಮಿಕರು ಪುರುಷ ಕಾರ್ಮಿಕರೊಂದಿಗೆ ಉದ್ಯೋಗದಲ್ಲಿ ತಾರತಮ್ಯವನ್ನು ಎದುರಿಸುತ್ತಾರೆ ಎಂಬುದು ಸ್ಪಷ್ಟವಾಗುತ್ತದೆ. ಹೆಚ್ಚಿನ ಕೃಷಿ ಕೆಲಸಗಳು ಮಹಿಳೆಯರನ್ನು ಆಧರಿಸಿದೆ. ಮಹಿಳೆಯರು ಪುರುಷರಿಗಿಂತ ಅಧಿಕ ಹಾಗೂ ಅತ್ಯಂತ ಕಷ್ಟಕರವಾದ ಕೆಲಸವನ್ನೂ ದಕ್ಷತೆಯಿಂದ ನಿರ್ವಹಿಸುತ್ತಾರೆ.

ಕೋಷ್ಟಕ ೪.೩.೫: ಪುರುಷ ಕಾರ್ಮಿಕರೊಂದಿಗೆ ಉದ್ಯೋಗದಲ್ಲಿರುವ ತಾರತಮ್ಯ

ಕ್ರಮ. ಸಂಖ್ಯೆ	ಉದ್ಯೋಗದಲ್ಲಿ ತಾರತಮ್ಯ	ಸಂಖ್ಯೆ	ಶೇಕಡಾವಾರು ಪ್ರಮಾಣ
೧	ಇದೆ	೭೯	೮೯.೭೭
೨	ಇಲ್ಲ	೯	೧೦.೨೩
	ಒಟ್ಟು	೮೮	೧೦೦

ಮೂಲ: ಸಂಶೋಧಕರ ಕ್ಷೇತ್ರಕಾರ್ಯಾಧಾರಿತ ಮಾಹಿತಿ

ಮಾಹಿತಿದಾರರಲ್ಲಿ ನಿಮ್ಮ ದುಡಿಮೆಯಿಂದ ಬಂದ ಹಣವನ್ನು ಖರ್ಚು ಮಾಡಲು ನಿಮಗೆ ಆರ್ಥಿಕ ಸ್ವಾತಂತ್ರ್ಯವಿದೆಯೇ? ಎಂದು ಕೇಳಿದಾಗ ೮೮ ಪ್ರತಿಪಾದಕರಲ್ಲಿ ೮೫ ಮಂದಿ ಇದೆಯೆಂದೂ ೩ ಮಂದಿ ಇಲ್ಲವೆಂದೂ ತಿಳಿಸಿರುತ್ತಾರೆ. ಪುರುಷ ಕಾರ್ಮಿಕರೊಂದಿಗೆ ವೇತನದಲ್ಲಿರುವ ತಾರತಮ್ಯದ ಬಗ್ಗೆ ಪ್ರತಿಪಾದಕರು ನೀಡಿದ ಅಭಿಪ್ರಾಯವನ್ನು ಕೋಷ್ಟಕ ೪.೩.೬ ದಲ್ಲಿ ಸ್ಪಷ್ಟಪಡಿಸಲಾಗಿದೆ.

ಕೋಷ್ಟಕ ೪.೩.೬: ಪುರುಷ ಕಾರ್ಮಿಕರೊಂದಿಗೆ ವೇತನದಲ್ಲಿನ ತಾರತಮ್ಯ

ಕ್ರಮ. ಸಂಖ್ಯೆ	ವೇತನ ತಾರತಮ್ಯ	ಸಂಖ್ಯೆ	ಶೇಕಡಾವಾರು ಪ್ರಮಾಣ
೧	ಇದೆ	೮೭	೯೮.೮೬
೨	ಇಲ್ಲ	೨	೧.೧೪
	ಒಟ್ಟು	೮೮	೧೦೦

ಮೂಲ: ಸಂಶೋಧಕರ ಕ್ಷೇತ್ರಕಾರ್ಯಾಧಾರಿತ ಮಾಹಿತಿ

ಕೋಷ್ಟಕ ೪.೩.೬ ದಿಂದ ತಿಳಿದು ಬರುವುದೇನೆಂದರೆ ಮಹಿತಿದಾರರಲ್ಲಿ ಶೇಕಡಾ ೯೮.೮೬ ರಷ್ಟು ಮಹಿಳೆಯರು ಪುರುಷ ಕಾರ್ಮಿಕರೊಂದಿಗೆ ವೇತನದಲ್ಲಿ ತಾರತಮ್ಯ ಇದೆಯೆಂದೂ ಕೇವಲ ಶೇಕಡಾ ೧.೧೪ ರಷ್ಟು ಮುಹಿಳೆಯರು ವೇತನದಲ್ಲಿ ತಾರತಮ್ಯ ಇಲ್ಲವೆಂದೂ ಸಂಶೋಧಕರಿಗೆ ತಿಳಿಸಿರುತ್ತಾರೆ. ಆದುದರಿಂದ ಹೆಚ್ಚಿನ ಮಹಿಳಾ ಕಾರ್ಮಿಕರು ಇಂದಿಗೂ ಸಮಾನ ಕೆಲಸಕ್ಕೆ ಪುರುಷ ಕಾರ್ಮಿಕರಿಗಿಂತ ಕಡಿಮೆ ಆದಾಯ ಪಡೆಯುತ್ತಾರೆ ಎಂಬುದು ಸ್ಪಷ್ಟವಾಗುತ್ತದೆ. ಪುರುಷ ಕಾರ್ಮಿಕರೊಂದಿಗೆ ಕೆಲಸದ ಅವಧಿಯಲ್ಲಿ ತಾರತಮ್ಯವಿದೆಯೇ? ಎಂದು ಪ್ರಶ್ನಿಸಿದಾಗ ಎಲ್ಲಾ ಮಾಹಿತಿದಾರರು ಇಲ್ಲ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಈ ಮೇಲಿನ ಅಂಶಗಳನ್ನು ಗಮನಿಸಿದಾಗ ಮಹಿಳೆಯರು ಹಂತ ಹಂತವಾಗಿ ಉದ್ಯೋಗದಲ್ಲಿ, ವೇತನದಲ್ಲಿ, ಪುರುಷ ಕಾರ್ಮಿಕರೊಂದಿಗೆ ತಾರತಮ್ಯವನ್ನು ಎದುರಿಸುತ್ತಿದ್ದಾರೆ ಎಂಬುದು ತಿಳಿದು ಬರುತ್ತದೆ. ಮಾತ್ರವಲ್ಲದೆ, ಮಹಿಳೆಯರು ಮಾಡುವ ಕೆಲಸವನ್ನು ಕೌಶಲ್ಯ ರಹಿತ ಕೆಲಸ ಎಂದು ಕರೆಯಲಾಗುತ್ತದೆ.

ಕೆಲಸ ಮಾಡುವಲ್ಲಿಯ ನಿಯಮ ಹಾಗೂ ಶರತ್ತುಗಳ ಬಗ್ಗೆ ಕೆಲಸಕ್ಕೆ ಸೇರುವ ಮುಂಚೆಯೇ ನಿಮಗೆ ಮುನ್ಸೂಚನೆ ಇತ್ತೋ? ಎಂದು ಕೇಳಿದಾಗ ೫೯ ಮಂದಿ ಇತ್ತು ಎಂದೂ, ೨೯ ಮಂದಿ ಇಲ್ಲ ಎಂದೂ ತಿಳಿಸಿರುತ್ತಾರೆ. ನಿಯಮ ಹಗೂ ಶರತ್ತುಗಳ ಬಗ್ಗೆ ಮುನ್ಸೂಚನೆ ಯಾಕೆ ಇರಲಿಲ್ಲ ಎಂದು ಕೇಳಿದಾಗ ತಮಗಿರುವ ಅನಕ್ಷರತೆಯೇ ಕಾರಣವೆಂದು ತಿಳಿಸಿರುತ್ತಾರೆ.

ಪ್ರತಿಪಾದಕರಲ್ಲಿ ನೀವು ಮಾಡುತ್ತಿರುವ ಕೆಲಸ ಒಳಾಂಗಣದಲ್ಲಿಯೇ ಅಥವಾ ಹೊರಾಂಗಣದಲ್ಲಿಯೇ? ಎಂದು ಕೇಳಿದ ಪ್ರಶ್ನೆಗೆ ಶೇಕಡಾ ೭೭.೨೭ ಮಂದಿ

ಒಳಾಂಗಣವೆಂದೂ, ಶೇಕಡಾ ೨೨.೭೩ ರಷ್ಟು ಮಂದಿ ಹೊರಾಂಗಣವೆಂದೂ ತಿಳಿಸಿರುತ್ತಾರೆ. ಒಳಾಂಗಣದಲ್ಲಿ ಬೆಳಕಿನ ವ್ಯವಸ್ಥೆ ತೃಪ್ತಿಕರವಾಗಿದೆಯೇ? ಎಂದು ಕೇಳಿದಾಗ, ಎಲ್ಲಾ ಮಾಹಿತಿದಾರರು ತೃಪ್ತಿಕರವಾಗಿದೆಯೆಂದು ಹೇಳಿರುತ್ತಾರೆ. ತೃಪ್ತಿಕರವಾಗಿಲ್ಲ ಎಂಬ ಅಭಿಪ್ರಾಯವನ್ನು ಯಾರೂ ಕೂಡಾ ವ್ಯಕ್ತಪಡಿಸಿಲ್ಲ. ಹಾಗೆಯೇ ಒಳಾಂಗಣದಲ್ಲಿ ವಾಯುಸಂಚಾರ ತೃಪ್ತಿಕರವಾಗಿದೆಯೇ? ಎಂದು ಕೇಳಿದಾಗ ಶೇಕಡಾ ೯೪.೩೨ ರಷ್ಟು ಮಂದಿ ತೃಪ್ತಿಕರವಾಗಿದೆ ಎಂದೂ, ಶೇಕಡಾ ೫.೬೮ ರಷ್ಟು ಮಂದಿ ವಾಯುಸಂಚಾರ ತೃಪ್ತಿಕರವಾಗಿಲ್ಲ ಎಂದೂ ಸಂಶೋಧಕರಿಗೆ ತಿಳಿಸಿರುತ್ತಾರೆ.

ದುಡಿಯುವಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಚೆನ್ನಾಗಿದೆಯೇ? ಎಂದು ಕೇಳಿದಾಗ ೮೮ ಮಾಹಿತಿದಾರರಲ್ಲಿ ೭೭ ಮಂದಿ ಚೆನ್ನಾಗಿದೆ ಎಂದೂ, ೧೧ ಮಂದಿ ಕುಡಿಯುವ ನೀರಿನ ವ್ಯವಸ್ಥೆ ಚೆನ್ನಾಗಿಲ್ಲ ಎಂದೂ ತಿಳಿಸಿರುತ್ತಾರೆ. ಹಾಗಯೇ ದುಡಿಯುವಲ್ಲಿನ ಶೌಚಾಲಯದ ವ್ಯವಸ್ಥೆಯ ಬಗ್ಗೆ ಪ್ರಶ್ನಿಸಿದಾಗ ಮಾಹಿತಿದಾರರು ನೀಡಿದ ಅಭಿಪ್ರಾಯವನ್ನು ಈ ಕೆಳಗಿನ ಕೋಷ್ಟಕದಲ್ಲಿ ಅಭಿವ್ಯಕ್ತಗೊಳಿಸಲಾಗಿದೆ.

ಕೋಷ್ಟಕ ೪.೩.೭: ದುಡಿಯುವಲ್ಲಿ ಶೌಚಾಲಯದ ವ್ಯವಸ್ಥೆ

ಕ್ರಮ. ಸಂಖ್ಯೆ	ಶೌಚಾಲಯದ ವ್ಯವಸ್ಥೆ	ಸಂಖ್ಯೆ	ಶೇಕಡಾವಾರು ಪ್ರಮಾಣ
೧	ಇದೆ	೭೦	೭೯.೫೫
೨	ಇಲ್ಲ	೧೮	೨೦.೪೫
	ಒಟ್ಟು	೮೮	೧೦೦

ಮೂಲ: ಸಂಶೋಧಕರ ಕ್ಷೇತ್ರಕಾರ್ಯಾಧಾರಿತ ಮಾಹಿತಿ

ಕೋಷ್ಟಕ ೪.೩.೭ದಿಂದ ತಿಳಿದು ಬರುವುದೇನೆಂದರೆ, ಮಾಹಿತಿದಾರರಲ್ಲಿ ಶೇಕಡಾ ೭೯.೫೫ ರಷ್ಟು ಮಂದಿ ತಾವು ದುಡಿಯುವಲ್ಲಿ ಸೂಕ್ತ ಶೌಚಾಲಯದ ವ್ಯವಸ್ಥೆ ಇದೆಯೆಂದೂ, ಶೇಕಡಾ ೨೦.೪೫ ರಷ್ಟು ಮಂದಿ ಸೂಕ್ತ ಶೌಚಾಲಯದ ವ್ಯವಸ್ಥೆಯೇ ಇಲ್ಲವೆಂದೂ, ಇದರಿಂದ ನಾವು ತುಂಬಾ ತೊಂದರೆ ಅನುಭವಿಸುತ್ತಿದ್ದೇವೆ ಎಂದು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿರುತ್ತಾರೆ. ಪ್ರತಿಪಾದಕರಲ್ಲಿ ನೀವು ಕೆಲಸ ಮಾಡುವ ವೇಳೆ ಯಾವ

ನಿಲುವಿನಲ್ಲಿರುತ್ತೀರಿ? ಎಂದು ಕೇಳಿದ ಪ್ರಶ್ನೆಗೆ ಪ್ರತಿಪಾದಕರು ನೀಡಿದ ಅಭಿಪ್ರಾಯವನ್ನು ಈ ಕೆಳಗಿನ ಕೋಷ್ಟಕದಲ್ಲಿ ಸ್ಪಷ್ಟಪಡಿಸಲಾಗಿದೆ.

ಕೋಷ್ಟಕ ೪.೩.೮: ಕೆಲಸದ ವೇಳೆ ಯಾವ ನಿಲುವಿನಲ್ಲಿರುತ್ತೀರಿ?

ಕ್ರಮ. ಸಂಖ್ಯೆ	ನಿಲುವು	ಸಂಖ್ಯೆ	ಶೇಕಡಾವಾರು ಪ್ರಮಾಣ
೧	ಆಸನದಲ್ಲಿ ಕೂತು	೫	೫.೬೮
೨	ನಡೆದಾಡಿ	೬೫	೭೩.೮೬
೩	ನಿಂತುಕೊಂಡು	೪	೪.೫೫
೪	ನೆಲದಮೇಲೆ ಕೂತು	೧೪	೧೫.೯೧
	ಒಟ್ಟು	೮೮	೧೦೦

ಮೂಲ: ಸಂಶೋಧಕರ ಕ್ಷೇತ್ರಕಾರ್ಯಾಧಾರಿತ ಮಾಹಿತಿ

ಕೋಷ್ಟಕ ೪.೩.೮ದಿಂದ ತಿಳಿದುಬರುವುದೇನೆಂದರೆ ಒಟ್ಟು ಮಾಹಿತಿದಾರರಲ್ಲಿ ಶೇಕಡಾ ೭೩.೮೬ ರಷ್ಟು ಮಂದಿ ನಡೆದಾಡಿ ಕೆಲಸ ನಿರ್ವಹಿಸುತ್ತಾರೆ. ಉಳಿದಂತೆ ಶೇಕಡಾ ೧೫.೯೧ ರಷ್ಟು ಮಂದಿ ನೆಲದ ಮೇಲೆ ಕೂತು, ಶೇಕಡಾ ೪.೫೫ ರಷ್ಟು ಮಂದಿ ನಿಂತುಕೊಂಡು ತಮ್ಮ ಕಾರ್ಯ ನಿರ್ವಹಿಸುತ್ತಾರೆ. ಕೇವಲ ಶೇಕಡಾ ೫.೬೮ ರಷ್ಟು ಮಂದಿ ಮಾತ್ರ ಆಸನದಲ್ಲಿ ಕುಳಿತು ಕೆಲಸ ಮಾಡುತ್ತಾರೆ. ಆದುದರಿಂದ ಹೆಚ್ಚಿನ ಎಲ್ಲಾ ಮಹಿಳಾ ಕಾರ್ಮಿಕರು ಅಧಿಕ ಶ್ರಮಪಟ್ಟು ದುಡಿಮೆ ಮಾಡುತ್ತಾರೆ ಎಂಬುದು ಈ ಮೂಲಕ ಸ್ಪಷ್ಟವಾಗುತ್ತದೆ.

ಕೋಷ್ಟಕ ೪.೩.೯: ಕೆಲಸ ಸಂಬಂಧಿತ ಆರೋಗ್ಯ ಬಾಧೆಗಳು

ಕ್ರಮ. ಸಂಖ್ಯೆ	ರೋಗ	ಸಂಖ್ಯೆ	ಶೇಕಡಾವಾರು ಪ್ರಮಾಣ
೧	ಇದೆ	೫೨	೫೯.೦೯
೨	ಇಲ್ಲ	೩೬	೪೦.೯೧
	ಒಟ್ಟು	೮೮	೧೦೦

ಮೂಲ : ಸಂಶೋಧಕರ ಕ್ಷೇತ್ರಕಾರ್ಯಾಧಾರಿತ ಮಾಹಿತಿ

ಕೋಷ್ಟಕ ೪.೩.೯ದ ಪ್ರಕಾರ, ಪ್ರತಿಪಾದಕರಲ್ಲಿ ನಿಮಗೆ ಕೆಲಸ ಸಂಬಂಧಿತ ಆರೋಗ್ಯ ಬಾಧೆಗಳಿವೆಯೇ? ಎಂದು ಕೇಳಿದಾಗ ಶೇಕಡಾ ೫೯.೦೯ ರಷ್ಟು ಮಹಿಳೆಯರು ಇದೆ ಎಂದೂ, ಶೇಕಡಾ ೪೦.೯೧ ರಷ್ಟು ಇಲ್ಲವೆಂದು ಉತ್ತರಿಸಿರುತ್ತಾರೆ. ಇದರಿಂದ ಹೆಚ್ಚಿನ ಮಹಿಳಾ ಕಾರ್ಮಿಕರು ತಮಗೆ ಕೆಲಸ ಸಂಬಂಧಿತ ರೋಗಗಳಿವೆಯೆಂದು ತಿಳಿದಿದ್ದರೂ, ಬಡತನದ ನಿವಾರಣೆಗೆ ಹಾಗೂ ಆರ್ಥಿಕ ಅವಶ್ಯಕತೆಗಾಗಿ ಯಾವುದನ್ನೂ ಲೆಕ್ಕಿಸದೆ ಕೆಲಸಕ್ಕೆ ಹೋಗುತ್ತಾರೆ ಎಂಬುದು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಸಂಶೋಧಕರಿಗೆ ತಿಳಿದು ಬಂದಿರುತ್ತದೆ.

ನಿಮಗೆ ದುಡಿಮೆಗೆ ತಕ್ಕ ವೇತನ ದೊರಕುತ್ತಿದೆಯೇ? ಎಂದು ಪ್ರಶ್ನಿಸಿದಾಗ ೮೮ ಮಾಹಿತಿದಾರರಲ್ಲಿ ಶೇಕಡಾ ೩೪.೦೯ ರಷ್ಟು ಮಂದಿ ದೊರಕುತ್ತಿದೆಯೆಂದೂ, ಶೇಕಡಾ ೬೫.೯೧ರಷ್ಟು ಮಂದಿ ಸೂಕ್ತ ವೇತನ ದೊರಕುತ್ತಿಲ್ಲವೆಂದೂ ತಿಳಿಸಿರುತ್ತಾರೆ.

ಕೋಷ್ಟಕ ೪.೩.೧೦: ಸೂಕ್ತ ವೇತನ ದೊರಕುತ್ತಿದೆಯೇ?

ಕ್ರಮ. ಸಂಖ್ಯೆ	ಸೂಕ್ತ ವೇತನ	ಸಂಖ್ಯೆ	ಶೇಕಡಾವಾರು ಪ್ರಮಾಣ
೧	ದೊರಕುತ್ತಿದೆ	೩೦	೩೪.೦೯
೨	ದೊರಕುತ್ತಿಲ್ಲ	೫೮	೬೫.೯೧
	ಒಟ್ಟು	೮೮	೧೦೦

ಮೂಲ : ಸಂಶೋಧಕರ ಕ್ಷೇತ್ರಕಾರ್ಯಾಧಾರಿತ ಮಾಹಿತಿ

ದುಡಿಮೆಗೆ ತಕ್ಕ ವೇತನ ದೊರಕದಿದ್ದರೂ, ಬೇರೆ ದಾರಿ ಇಲ್ಲದೆ ಹಾಗೂ ಅನಕ್ಷರತೆ, ಕಡಿಮೆ ಶಿಕ್ಷಣದ ಕಾರಣ ಇತರ ಕ್ಷೇತ್ರಗಳಲ್ಲಿ ಅವಕಾಶ ಗಿಟ್ಟಿಸಿಕೊಳ್ಳಲು ಸಾಧ್ಯವಾಗದೆ, ಅದೇ ಕ್ಷೇತ್ರದಲ್ಲಿ ದುಡಿಯುತ್ತಾರೆ ಎಂಬುದು ತಿಳಿದುಬಂದಿರುತ್ತದೆ. ಮಾಹಿತಿದಾರರ ವೇತನದ ವಿನಿಯೋಗಿಸಲ್ಪಡುವಿಕೆಯ ಬಗ್ಗೆ ನೀಡಿದ ಮಾಹಿತಿಯನ್ನು ಕೋಷ್ಟಕ ೪.೩.೧೧ ದಲ್ಲಿ ನೀಡಲಾಗಿದೆ.

ಕೋಷ್ಟಕ ೪.೩.೧೧: ವೇತನದ ವಿನಿಯೋಗಿಸಲ್ಪಡುವಿಕೆ

ಕ್ರಮ. ಸಂಖ್ಯೆ	ವಿನಿಯೋಗ	ಸಂಖ್ಯೆ	ಶೇಕಡಾವಾರು ಪ್ರಮಾಣ
೧	ಮಕ್ಕಳ ವಿದ್ಯಾಭ್ಯಾಸಕ್ಕಾಗಿ	೧೭	೧೯.೩೨
೨	ಮನೆ ಖರ್ಚಿಗಾಗಿ	೬೮	೭೭.೨೭
೩	ಸ್ವಂತಕ್ಕಾಗಿ	೩	೩.೪೧
೪	ಇತರೆ	--	--
	ಒಟ್ಟು	೮೮	೧೦೦

ಮೂಲ: ಸಂಶೋಧಕರ ಕ್ಷೇತ್ರಕಾರ್ಯಾಧಾರಿತ ಮಾಹಿತಿ

ಕೋಷ್ಟಕ ೪.೩.೧೧ದ ಪ್ರಕಾರ ಶೇಕಡಾ ೧೯.೩೨ರಷ್ಟು ಮಹಿಳೆಯರು ವೇತನವನ್ನು ಮಕ್ಕಳ ವಿದ್ಯಾಭ್ಯಾಸಕ್ಕಾಗಿ, ಶೇಕಡಾ ೭೭.೨೭ರಷ್ಟು ಮಹಿಳೆಯರು ಮನೆ ಖರ್ಚಿಗಾಗಿ ವಿನಿಯೋಗ ಮಾಡುತ್ತಾರೆ. ಆದರೆ ಕೇವಲ ಶೇಕಡಾ ೩.೪೧ ರಷ್ಟು ಮಹಿಳೆಯರು ಮಾತ್ರ ಸ್ವಂತಕ್ಕಾಗಿ ವೇತನವನ್ನು ಉಪಯೋಗಿಸಿಕೊಳ್ಳುತ್ತಾರೆ ಎಂಬುದು ಕ್ಷೇತಕಾರ್ಯದ ಸಂದರ್ಭದಲ್ಲಿ ಸಂಶೋಧಕರಿಗೆ ತಿಳಿದು ಬಂದಿರುತ್ತದೆ. ಆದ್ದರಿಂದ ಹೆಚ್ಚಿನ ಮಹಿಳೆಯರು ಮನೆ ಖರ್ಚಿಗಾಗಿ ಹಾಗೂ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ದುಡಿದ ವೇತನವನ್ನು ವಿನಿಯೋಗಿಸುತ್ತಾರೆ ಎಂಬುದು ಸ್ಪಷ್ಟವಾಗುತ್ತದೆ.

ಪ್ರತಿಪಾದಕರಲ್ಲಿ ವೇತನ ಉಳಿತಾಯ ಮಾಡುವಿರಾ? ಎಂದು ಕೇಳಿದ ಪ್ರಶ್ನೆಗೆ ೪೩ ಮಂದಿ ವೇತನ ಉಳಿತಾಯ ಮಾಡುತ್ತೇವೆ ಎಂದೂ, ಉಳಿದ ೪೫ ಮಂದಿ ಉಳಿತಾಯ ಮಾಡುವುದಿಲ್ಲವೆಂದು ತಿಳಿಸಿರುತ್ತಾರೆ. ಉಳಿತಾಯ ಮಾಡದಿರಲು ಕಾರಣ ಕೇಳಿದಾಗ, ಸಿಗುವ ಅತ್ಯಲ್ಪ ವೇತನ ಮಕ್ಕಳಿಗೆ ಹಾಗೂ ಮನೆಖರ್ಚಿಗಾಗಿ ವಿನಿಯೋಗವಾಗುವುದರಿಂದ ಉಳಿತಾಯ ಮಾಡಲು ಏನೂ ಉಳಿಯುವುದಿಲ್ಲವೆಂಬುದನ್ನು ತಿಳಿಸಿರುತ್ತಾರೆ. ಮೇಲೆ ತಿಳಿಸಿದ ಮಾಹಿತಿಯನ್ನು ಕೋಷ್ಟಕ ೪.೩.೧೨ ದಿಂದ ಸ್ಪಷ್ಟವಾಗಿ ತಿಳಿಯಬಹುದಾಗಿದೆ.

ಕೋಷ್ಟಕ ೪.೩.೧೨: ವೇತನ ಉಳಿತಾಯ ಮಾಡುವ ಬಗ್ಗೆ

ಕ್ರಮ. ಸಂಖ್ಯೆ	ಉಳಿತಾಯ	ಸಂಖ್ಯೆ	ಶೇಕಡಾವಾರು ಪ್ರಮಾಣ
೧	ಮಾಡುತ್ತೇವೆ	೪೩	೪೮.೮೬
೨	ಮಾಡುವುದಿಲ್ಲ	೪೫	೫೧.೧೪
	ಒಟ್ಟು	೮೮	೧೦೦

ಮೂಲ: ಸಂಶೋಧಕರ ಕ್ಷೇತ್ರಕಾರ್ಯಾಧಾರಿತ ಮಾಹಿತಿ

ಮಾಹಿತಿದಾರರಲ್ಲಿ ನಿಮ್ಮ ಮನೆಯ ಗಂಡಸರು ದುಡಿಯುವರೇ? ಎಂದು ಕೇಳಿದಾಗ ೮೦ ಮಂದಿ ದುಡಿಯುವರು ಎಂದೂ,ಉಳಿದ ೮ ಮಂದಿ ದುಡಿಯುವುದಿಲ್ಲವೆಂದೂ ಉತ್ತರಿಸಿರುತ್ತಾರೆ. ಹಾಗೆಯೇ ಇದ್ದ ಕೆಲಸವನ್ನು ಮುಂದುವರಿಸುವಿರಾ ಎಂಧು ಕೇಳಿದಾಗ ಶೇಕಡಾ ೯೭.೭೩ರಷ್ಟು ಪ್ರತಿಪಾದಕರು ಮುಂದುವರಿಸುತ್ತೇವೆಂದೂ, ಕೇವಲ ಶೇಕಡಾ ೨.೨೭ಮಂದಿ ಕೆಲಸದ ಬದಲಾವಣೆ ಮಾಡುತ್ತೇವೆ ಎಂದೂ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಪ್ರತಿಪಾದಕರಲ್ಲಿ ನೀವು ಮಾಡುವ ಕೆಲಸದಲ್ಲಿ ಅಧಿಕ ದೈಹಿಕ ಶ್ರಮವನ್ನು ಉಪಯೋಗಿಸಬೇಕಾ? ಎಂದು ಕೇಳಿದಾಗ ಶೇಕಡಾ ೯೨.೦೫ ರಷ್ಟು ಮಂದಿ ಹೌದು ಎಂದೂ, ಶೇಕಡಾ ೭.೯೫ರಷ್ಟು ಮಂದಿ ಇಲ್ಲವೆಂದೂ ತಿಳಿಸಿರುತ್ತಾರೆ.

ಕೋಷ್ಟಕ ೪.೩.೧೩: ಕೆಲಸದಲ್ಲಿ ಅಧಿಕ ದೈಹಿಕ ಶ್ರಮದ ಉಪಯೋಗ

ಕ್ರಮ. ಸಂಖ್ಯೆ	ಅಧಿಕ ದೈಹಿಕ ಶ್ರಮ	ಸಂಖ್ಯೆ	ಶೇಕಡಾವಾರು ಪ್ರಮಾಣ
೧	ಉಪಯೋಗಿಸುತ್ತೇವೆ	೮೧	೯೨.೦೫
೨	ಉಪಯೋಗಿಸುವುದಿಲ್ಲ	೭	೭.೯೫
	ಒಟ್ಟು	೮೮	೧೦೦

ಮೂಲ : ಸಂಶೋಧಕರ ಕ್ಷೇತ್ರಕಾರ್ಯಾಧಾರಿತ ಮಾಹಿತಿ

ಕೋಷ್ಟಕ ೪.೩.೧೩ದಿಂದ ತಿಳಿದು ಬರುವುದೇನೆಂದರೆ, ಅಸಂಘಟಿತ ವಲಯದಲ್ಲಿ ದುಡಿಯುವ ಹೆಚ್ಚಿನ ಮಹಿಳಾ ಕಾರ್ಮಿಕರು ಅಧಿಕ ದೈಹಿಕ ಶ್ರಮವನ್ನು ಉಪಯೋಗಿಸಬೇಕಾಗುತ್ತದೆ. ಪ್ರತಿಪಾದಕರಲ್ಲಿ ಕೆಲಸಮಾಡುವಲ್ಲಿ ಮಾನಸಿಕ ಒತ್ತಡವನ್ನು ಅನುಭವಿಸುವ ಬಗ್ಗೆ ಪ್ರಶ್ನಿಸಿದಾಗ ಅವರು ನೀಡಿದ ಉತ್ತರವನ್ನು ಈ ಕೆಳಗಿನ ಕೋಷ್ಟಕದಲ್ಲಿ ನೀಡಲಾಗಿದೆ.

ಕೋಷ್ಟಕ ೪.೩.೧೪: ಕೆಲಸ ಮಾಡುವಲ್ಲಿ ಮಾನಸಿಕ ಒತ್ತಡ

ಕ್ರಮ. ಸಂಖ್ಯೆ	ಮಾನಸಿಕ ಒತ್ತಡ	ಸಂಖ್ಯೆ	ಶೇಕಡಾವಾರು ಪ್ರಮಾಣ
೧	ಇದೆ	೬೧	೬೯.೩೨
೨	ಇಲ್ಲ	೨೭	೩೦.೬೮
	ಒಟ್ಟು	೮೮	೧೦೦

ಮೂಲ : ಸಂಶೋಧಕರ ಕ್ಷೇತ್ರಕಾರ್ಯಾಧಾರಿತ ಮಾಹಿತಿ

ಕೋಷ್ಟಕ ೪.೩.೧೪ದಿಂದ ಅಧ್ಯಯನಕ್ಕೆ ಒಳಪಡಿಸಿದ ಪ್ರತಿಪಾದಕರಲ್ಲಿ ಶೇಕಡಾ ೬೨.೩೨ರಷ್ಟು ಮಹಿಳೆಯರು ಕೆಲಸ ಮಾಡುವಲ್ಲಿ ಮಾನಸಿಕ ಒತ್ತಡವನ್ನು ಅನುಭವಿಸುತ್ತೇವೆ ಎಂದೂ, ಶೇಕಡಾ ೩೦.೬೮ ರಷ್ಟು ಮಂದಿ ತಾವು ಕೆಲಸ ಮಾಡುವಲ್ಲಿ ಯಾವುದೇ ರೀತಿಯ ಮಾನಸಿಕ ಒತ್ತಡವನ್ನು ಎದುರಿಸುತ್ತಿಲ್ಲವೆಂದು ತಿಳಿಸಿರುತ್ತಾರೆ. ಆದ್ದರಿಂದ ಹೆಚ್ಚಿನ ಮಹಿಳಾ ಕಾರ್ಮಿಕರು ತಾವು ದುಡಿಯುವಲ್ಲಿ ಹೆಚ್ಚಿನ ಮಾನಸಿಕ ಒತ್ತಡಕ್ಕೆ ಗುರಿಯಾಗುತ್ತಾರೆ ಎಂಬುದು ಸ್ಪಷ್ಟವಾಗುತ್ತದೆ.

ದುಡಿಮೆಯ ಬಗ್ಗೆ ನಿಮಗೆ ಆತ್ಮಾಭಿಮಾನ ಇದೆಯೇ? ಎಂದು ಪ್ರಶ್ನಸಿದಾಗ ಶೇಕಡಾ ೮೪.೦೯ರಷ್ಟು ಪ್ರತಿಪಾದಕರು ಇದೆ ಎಂದೂ, ಉಳಿದ ಶೇಕಡಾ ೧೫.೯೧ರಷ್ಟು ಮಂದಿ ನಮಗೆ ದುಡಿಮೆಯ ಬಗ್ಗೆ ಆತ್ಮಾಭಿಮಾನ ಇಲ್ಲ ಎಂದೂ ತಿಳಿಸಿರುತ್ತಾರೆ. ಮಾತ್ರವಲ್ಲದೆ, ಹಣಕಾಸಿನ ಸಮಸ್ಯೆಯನ್ನು ಸ್ವಲ್ಪ ಮಟ್ಟಿಗಾದರೂ ನಿವಾರಿಸಬೇಕು ಎಂಬ ದೃಷ್ಟಿಯಿಂದ ಕೆಲಸಕ್ಕೆ ಹೋಗುತ್ತಿರುವುದು ಎಂದೂ ಕ್ಷೇತ್ರಕಾರ್ಯದ ಸಂದರ್ಭದಲ್ಲಿ ತಿಳಿಸಿರುತ್ತಾರೆ.

ಪ್ರತಿಪಾದಕರಲ್ಲಿ ಉದ್ಯೋಗಕ್ಕೆ ಹೋಗಲು ಸ್ವಂತ ಸಮಸ್ಯೆ ಏನಾದರೂ ಇದೆಯೇ? ಎಂದು ಪ್ರಶ್ನಿಸಿದಾಗ ೮೨ ಮಂದಿ ಇದೆಯೆಂದೂ ಕೇವಲ ೬ ಮಂದಿ ತಮಗೆ ಯಾವುದೇ ಸಮಸ್ಯೆ ಇಲ್ಲವೆಂದೂ ತಿಳಿಸಿರುತ್ತಾರೆ. ಹೆಚ್ಚಿನವರು ಬಡವರಾಗಿದ್ದು, ಆರ್ಥಿಕವಾಗಿ ಸ್ವಾವಲಂಬಿಗಳಾಗಲು ದುಡಿಯುತ್ತೇವೆ ಎಂದು ತಿಳಿಸಿರುತ್ತಾರೆ.

ಮಾಹಿತಿದಾರರಲ್ಲಿ ನಿಮಗೆ ಉದ್ಯೋಗಕ್ಕೆ ಹೋಗಲು ಕೌಟುಂಬಿಕ ಸಮಸ್ಯೆ ಏನಾದರೂ ಇದೆಯೇ? ಎಂದು ಪ್ರಶ್ನಿಸಿದಾಗ, ಶೇಕಡಾ ೯೪.೩೨ರಷ್ಟು ಮಂದಿ ಇದೆ ಎಂದೂ, ಶೇಕಡಾ ೫.೬೮ರಷ್ಟು ಮಂದಿ ಇಲ್ಲ ಎಂದೂ ತಿಳಿಸಿರುತ್ತಾರೆ. ಮೇಲಿನ ಮಾಹಿತಿಯನ್ನು ಈ ಕೆಳಗಿನ ಕೋಷ್ಟಕದಲ್ಲಿ ಸ್ಪಷ್ಟಪಡಿಸಲಾಗಿದೆ.

ಕೋಷ್ಟಕ ೪.೩.೧೫: ಕೌಟುಂಬಿಕ ಸಮಸ್ಯೆ

ಕ್ರಮ. ಸಂಖ್ಯೆ	ಸಮಸ್ಯೆ	ಸಂಖ್ಯೆ	ಶೇಕಡಾವಾರು ಪ್ರಮಾಣ
೧	ಇದೆ	೮೩	೯೪.೩೨
೨	ಇಲ್ಲ	೫	೫.೬೮
	ಒಟ್ಟು	೮೮	೧೦೦

ಮೂಲ : ಸಂಶೋಧಕರ ಕ್ಷೇತ್ರಕಾರ್ಯಾಧಾರಿತ ಮಾಹಿತಿ

ಗ್ರಾಮೀಣ ಪ್ರದೇಶವು ಸಂಪ್ರದಾಯಗಳಿಂದ ಕೂಡಿದ್ದು, ಹೆಚ್ಚಿನ ಕುಟುಂಬಗಳ ಮಹಿಳೆಯರನ್ನು ಕೆಲಸಕ್ಕೆ ಹೋಗಲು ಬಿಡುವುದಿಲ್ಲ. ಕೆಲವು ಕುಟುಂಬಗಳು ಮನೆಯಿಂದ ಅಧಿಕ ದೂರದಲ್ಲಿರುವ ಕೆಲಸಕ್ಕೆ ಹೋಗಲು ಬಿಡದ ಕಾರಣ ಅನೇಕ ಮಹಿಳೆಯರು ಕೆಲಸದಿಂದ ವಂಚಿತರಾಗುತ್ತಾರೆ ಎಂಬುದು ತಿಳಿದು ಬಂದಿರುವ ವಿಚಾರವಾಗಿದೆ. ಪ್ರತಿಪಾದಕರು ಕೆಲಸದ ನಂತರ ಮನೆಯಲ್ಲಿ ಸ್ವಂತ ದುಡಿಮೆ ಮಾಡುವ ವಿಷಯವನ್ನು ಕೋಷ್ಟಕ ೪.೩.೧೬ದಲ್ಲಿ ತಿಳಿಸಲಾಗಿದೆ.

ಕೋಷ್ಟಕ ೪.೩.೧೬: ಕೆಲಸದ ನಂತರ ಮನೆಯಲ್ಲಿ ಸ್ವಂತ ದುಡಿಮೆ ಮಾಡುವ ಬಗ್ಗೆ

ಕ್ರಮ. ಸಂಖ್ಯೆ	ಸ್ವಂತ ದುಡಿಮೆ	ಸಂಖ್ಯೆ	ಶೇಕಡಾವಾರು ಪ್ರಮಾಣ
೧	ಮಾಡುತ್ತೇವೆ	೭೫	೮೫.೨೩
೨	ಮಾಡುವುದಿಲ್ಲ	೧೩	೧೪.೭೭
	ಇದ್ದರೆ; ಹಿತವೇ	--	--
	ಒತ್ತಡವೇ	೮೮	೧೦೦
	ಒಟ್ಟು	೮೮	೧೦೦

ಮೂಲ: ಸಂಶೋಧಕರ ಕ್ಷೇತ್ರಕಾರ್ಯಾಧಾರಿತ ಮಾಹಿತಿ

ಒಟ್ಟು ಮಾಹಿತಿದಾರರಲ್ಲಿ ಶೇಕಡಾ ೮೫.೨೩ರಷ್ಟು ಮಹಿಳೆಯರು ಕೆಲಸದ ನಂತರ ಮನೆಯಲ್ಲಿ ಸ್ವಂತ ದುಡಿಮೆ ಮಾಡುತ್ತೇವೆ ಎಂದೂ, ಶೇಕಡಾ ೧೪.೭೭ರಷ್ಟು ಮಹಿಳೆಯರು ಸ್ವಂತ ದುಡಿಮೆ ಮಾಡುವುದಿಲ್ಲವೆಂಬುದು ಇಲ್ಲಿ ತಿಳಿದು ಬರುವ ವಿಷಯವಾಗಿದೆ. ಕೆಲಸದ ನಂತರ ಮನೆಯಲ್ಲಿ ಸ್ವಂತ ದುಡಿಮೆ ಹಿತವೇ? ಒತ್ತಡವೇ? ಎಂದು ಪ್ರಶ್ನಿಸಿದಾಗ ಎಲ್ಲಾ ಮಾಹಿತಿದಾರರು ಒತ್ತಡವೆಂದೂ ಹಣದ ಅವಶ್ಯಕತೆಗಾಗಿ ಸ್ವಂತ ದುಡಿಮೆ ಮಾಡುತ್ತೇವೆ ಎಂದು ತಿಳಿಸಿರುತ್ತಾರೆ.

ಸ್ವಂತ ಉದ್ಯಮದ ಆಲೋಚನೆ ಇದೆಯೇ? ಎಂದು ಮಾಹಿತಿದಾರರನ್ನು ಪ್ರಶ್ನಿಸಿದಾಗ ಶೇಕಡಾ ೨೬.೧೪ರಷ್ಟು ಮಹಿಳೆಯರು ಸ್ವಂತ ಉದ್ಯಮ ಮಾಡುವ ಆಲೋಚನೆ ಇದೆ ಎಂದೂ ಶೇಕಡಾ೭೩.೮೬ರಷ್ಟು ಮಹಿಳೆಯರು ಸ್ವಂತ ಉದ್ಯಮದ ಆಲೋಚನೆ ಇಲ್ಲವೆಂದು ತಿಳಿಸಿರುತ್ತಾರೆ.

ಪ್ರತಿಪಾದಕರರಲ್ಲಿ ಮನೆಯಲ್ಲಿ ಮಕ್ಕಳ ಸಮಸ್ಯೆ ಇದೆಯೇ? ಎಂದು ಪ್ರಶ್ನೆ ಮಾಡಿದಾಗ, ಶೇಕಡಾ ೮೯.೭೭ ರಷ್ಟು ಮಹಿಳೆಯರು ಇದೆ ಎಂದು ಉತ್ತರಿಸಿದ್ದು, ಕೇವಲ ಶೇಕಡಾ ೧೦.೨೩ ರಷ್ಟು ಮಹಿಳೆಯರು ಯಾವುದೇ ಸಮಸ್ಯೆ ಇಲ್ಲ ಎಂದು ಉತ್ತರಿಸಿರುತ್ತಾರೆ. ಹಾಗೆಯೇ ಗ್ರಾಮಪಂಚಾಯತಿಯಲ್ಲಿ ನಾಯಕತ್ವ ಹೊಂದಿರುವ ಬಗ್ಗೆ ಕೇಳಿದಾಗ ಗ್ರಾಮಪಂಚಾಯತಿಯಲ್ಲಿ ನಾಯಕತ್ವವನ್ನು ಹೊಂದಿದ್ದೇವೆ ಎಂದು ಮಾಹಿತಿದಾರರಲ್ಲಿ ಯಾರೂ ಕೂಡಾ ತಿಳಿಸಿರುವುದಿಲ್ಲ.

ಬಂಟ್ವಾಳ ತಾಲೂಕಿನ ಅಭಿವೃದ್ಧಿಯ ಬಗ್ಗೆ ಮಾಹಿತಿದಾರರಲ್ಲಿ ಪ್ರಶ್ನಿಸಿದಾಗ ಅವರು ನೀಡಿದ ಅಭಿಪ್ರಾಯವನ್ನು ಕೋಷ್ಟಕ ೪.೩.೧೭ದಲ್ಲಿ ಸ್ಪಷ್ಟಪಡಿಸಲಾಗಿದೆ.

ಕೋಷ್ಟಕ ೪.೩.೧೭: ಬಂಟ್ವಾಳ ತಾಲೂಕಿನ ಅಭಿವೃದ್ಧಿ ಬಗ್ಗೆ ಮಾಹಿತಿ

ಕ್ರಮ. ಸಂಖ್ಯೆ	ಬಂಟ್ವಾಳ ಅಭಿವೃದ್ಧಿ ಹೊಂದಿದೆಯೇ?	ಸಂಖ್ಯೆ	ಶೇಕಡಾವಾರು ಪ್ರಮಾಣ
೧	ಹೊಂದಿದೆ	೮೮	೧೦೦
೨	ಹೊಂದಿಲ್ಲ	--	--
ಅಭಿವೃದ್ಧಿ ಹೊಂದಿದ್ದರೆ ಯಾರಿಂದ?			
	ಸಮುದಾಯದಿಂದ	೭೮	೮೮.೬೪
	ಸರಕಾರದಿಂದ	೧೦	೧೧.೩೬
	ಒಟ್ಟು	**೮೮**	**೧೦೦**

ಮೂಲ : ಸಂಶೋಧಕರ ಕ್ಷೇತ್ರಕಾರ್ಯಾಧಾರಿತ ಮಾಹಿತಿ

ಒಟ್ಟು ೮೮ ಪ್ರತಿಪಾದಕರಲ್ಲಿ ಬಂಟ್ವಾಳ ತಾಲೂಕು ಹಿಂದಿನ ದಿನಗಳಿಗಿಂತ ಈಗ ಅಭಿವೃದ್ಧಿ ಹೊಂದಿದೆಯಾ? ಎಂದು ಕೇಳಿದ ಪ್ರಶ್ನೆಗೆ, ಎಲ್ಲರೂ , ಬಂಟ್ವಾಳ ತಾಲೂಕು ಈಗ ಅಭಿವೃದ್ಧಿ ಹೊಂದಿದೆ ಎಂದು ಸಂಶೋಧಕರಿಗೆ ತಿಳಿಸಿರುತ್ತಾರೆ.

ಬಂಟ್ವಾಳ ತಾಲೂಕು ಅಭಿವೃದ್ಧಿ ಹೊಂದಲು ಸಮುದಾಯ ಹಾಗೂ ಸರಕಾರ, ಯಾರಿಂದ ಸಾಧ್ಯವಾಯಿತು ಎಂದು ಪ್ರಶ್ನೆ ಮಾಡಿದಾಗ, ಶೇಕಡಾ ೮೮.೬೪ರಷ್ಟು ಮಾಹಿತಿದಾರರು ಸಮುದಾಯದಿಂದ ಎಂದೂ, ಶೇಕಡಾ ೧೧.೩೬ರಷ್ಟು ಮಾಹಿತಿದಾರರು ಸರಕಾರದಿಂದ ಅಭಿವೃದ್ಧಿ ಹೊಂದಿದೆ ಎಂದೂ ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಸಂಶೋಧಕರಿಗೆ ತಿಳಿಸಿರುತ್ತಾರೆ. ಆದ್ದರಿಂದ ಬಂಟ್ವಾಳ ತಾಲೂಕು ಹಿಂದಿನ ದಿನಗಳಿಗಿಂತ ಈಗಿನ ದಿನಗಳಲ್ಲಿ ಸಮುದಾಯದಿಂದ ಹಾಗೂ ಸರ್ಕಾರದಿಂದ ಅಭಿವೃದ್ಧಿ ಹೊಂದುತ್ತಿದೆ ಎಂಬುದು ಈ ಮೂಲಕ ತಿಳಿದು ಬರುತ್ತದೆ.

ಕೆಲಸ ಹಾಗೂ ಊರು ತೃಪ್ತಿಕರವಾಗದೆ, ಬಂಟ್ವಾಳ ತಾಲೂಕಿನಿಂದ ಹೊರಡುವ ಮನೋಸ್ಥಿತಿಯಲ್ಲಿದ್ದೀರಾ? ಎಂದು ಕೇಳಿದ ಪ್ರಶ್ನೆಗೆ ಒಟ್ಟು ೮೮ ಮಾಹಿತಿದಾರರಲ್ಲಿ ೮೫

ಮಂದಿ ಇಲ್ಲ ಎಂದು ಉತ್ತರಿಸಿದರೆ, ಕೇವಲ ೩ ಮಂದಿ ಬಂಟ್ವಾಳ ಬಿಟ್ಟು ಹೋಗುವ ಮನೋಸ್ಥಿತಿಯಲ್ಲಿದ್ದೇವೆ ಎಂದು ತಿಳಿಸಿರುತ್ತಾರೆ.

ಮಾಹಿತಿದಾರರಲ್ಲಿ ನಿಮಗೆ ವಿಮಾ ಸೌಲಭ್ಯ ಇದೆಯೇ? ಎಂದು ಪ್ರಶ್ನಿಸಿದಾಗ, ನಮಗೆ ವಿಮಾ ಸೌಲಭ್ಯ ಇದೆ ಎಂದು ಯಾರೊಬ್ಬರೂ ತಿಳಿಸಿರುವುದಿಲ್ಲ. ಅಂತೆಯೇ, ಸರಕಾರವು ಕಾರ್ಮಿಕರಿಗಾಗಿ ಅದರಲ್ಲೂ ಮಹಿಳಾ ಕಾರ್ಮಿಕರಿಗೆಂದು ಹಲವಾರು ರೀತಿಯ ವಿಮಾ ಯೋಜನೆಗಳನ್ನು ಜಾರಿಗೆ ತಂದಿದೆ, ಮಾತ್ರವಲ್ಲದೆ ಈ ಸೌಲಭ್ಯ ಗ್ರಾಮೀಣ ಜನತೆಗೆ ತಲುಪಿಸಲು ಸರಕಾರವು ಸದಸ್ಯರನ್ನು ನೇಮಕಮಾಡಿದೆ. ಇಷ್ಟಾದರೂ, ಗ್ರಾಮೀಣ ಜನತೆಗೆ ಸರಕಾರದ ಹಲವಾರು ಸೌಲಭ್ಯ ತಲುಪುತ್ತಿಲ್ಲ ಎಂಬುದು ಈ ಮೂಲಕ ಸ್ಪಷ್ಟವಾಗುತ್ತದೆ.

ಸ್ವ-ಸಹಾಯ ಸಂಘ, ಸ್ತ್ರೀ ಶಕ್ತಿ ಗುಂಪುಗಳ ಸದಸ್ಯೆಯಾಗಿರುವಿರಾ? ಎಂದು ಮಾಹಿತಿದಾರರಲ್ಲಿ ಕೇಳಿದಾಗ, ಪ್ರತಿಯೊಬ್ಬ ಮಾಹಿತಿದಾರರೂ ಈ ಗುಂಪುಗಳ ಸದಸ್ಯರಾಗಿರುವುದು ತಿಳಿದು ಬಂದಿರುತ್ತದೆ. ಇದರಿಂದ ತಿಳಿದು ಬರುವುದೇನೆಂದರೆ, ಸ್ವ-ಸಹಾಯ ಸಂಘ ಹಾಗೂ ಸ್ತ್ರೀ ಶಕ್ತಿ ಗುಂಪುಗಳು ಮಹಿಳಾ ಸಬಲೀಕರಣಧಲ್ಲಿ ಪ್ರಮುಖ ಪಾತ್ರವಹಿಸುತ್ತಿವೆ. ಗ್ರಾಮೀಣ ಮಹಿಳೆಯರು ಈ ಗುಂಪುಗಳಲ್ಲಿ ತಮ್ಮನ್ನು ತಾವು ಸಕ್ರೀಯವಾಗಿ ತೊಡಗಿಸಿಕೊಳ್ಳುತ್ತಿದ್ದಾರೆ ಎಂಬುದು ಈ ಮೂಲಕ ಸ್ಪಷ್ಟವಾಗುತ್ತದೆ.

ಪ್ರತಿಪಾದಕರಲ್ಲಿ ನಿಮ್ಮ ಹಿಂದಿನ ಸ್ಥಿತಿಗಿಂತ ಈಗಿನ ಸ್ಥಿತಿ ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಉತ್ತಮವಾಗಿದೆಯೇ? ಎಂದು ಕೇಳಿದ ಪ್ರಶ್ನೆಗೆ, ಶೇಕಡಾ ೯೩.೧೮ರಷ್ಟು ಮಹಿಳೆಯರು ಹಿಂದಿಗಿಂತ ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಉತ್ತಮ ಸ್ಥಿತಿಯಲ್ಲಿದ್ದೇವೆ ಎಂದೂ, ಉಳಿದ ೬.೮೨ರಷ್ಟು ಮಹಿಳೆಯರು ತಾವು ಉತ್ತಮ ಸ್ಥಿತಿಯಲ್ಲಿ ಇಲ್ಲ ಎಂದೂ ತಮ್ಮ ಅಭಿಪ್ರಾಯುವನ್ನು ವ್ಯಕ್ತಪಡಿಸುತ್ತಾರೆ. ಮಾತ್ರವಲ್ಲದೆ, ತಮ್ಮ ಈ ಪ್ರಗತಿ ಸಂಘ-ಸಂಸ್ಥೆಗಳ ಸಹಕಾರದಿಂದ ಸಾಧ್ಯವಾಗಿದೆ ಎಂದು ತಿಳಿಸಿರುತ್ತಾರೆ. ಈ ಮಾಹಿತಿಯನ್ನು ಕೋಷ್ಟಕ ೪.೩.೧೮ದಲ್ಲಿ ಸ್ಪಷ್ಟಪಡಿಸಲಾಗಿದೆ.

ಕೋಷ್ಟಕ ೪.೩.೧೮: ಹಿಂದಿನ ಹಾಗೂ ಇಂದಿನ ಆರ್ಥಿಕ-ಸಾಮಾಜಿಕ ಸ್ಥಿತಿ

ಕ್ರಮ. ಸಂಖ್ಯೆ	ಸ್ಥಿತಿ	ಸಂಖ್ಯೆ	ಶೇಕಡಾವಾರು ಪ್ರಮಾಣ
೧	ಆರ್ಥಿಕ-ಸಾಮಾಜಿಕವಾಗಿ ಉತ್ತಮವಾಗಿದೆ	೮೨	೯೩.೧೮
೨	ಆರ್ಥಿಕ-ಸಾಮಾಜಿಕವಾಗಿ ಉತ್ತಮವಾಗಿದೆ.	೬	೬.೮೨
	ಒಟ್ಟು	೮೮	೧೦೦

ಮೂಲ: ಸಂಶೋಧಕರ ಕ್ಷೇತ್ರಕಾರ್ಯಾಧಾರಿತ ಮಾಹಿತಿ

ಮಾಹಿತಿದಾರರಲ್ಲಿ, ಸಮಾಜದಲ್ಲಿರುವ ಮಹಿಳೆಯರಿಗೆ ನಿಮ್ಮ ದೃಷ್ಟಿಕೋನದಲ್ಲಿ ದುಡಿಮೆಯ ಬಗ್ಗೆ ಹೇಳುವ ಮಾತುಗಳಾವುವು? ಎಂದು ಪ್ರಶ್ನಿಸಿದಾಗ, ಹೆಚ್ಚಿನ ಮಾಹಿತಿದಾರರು ತಾವು ಮಾಡುವ ಕೆಲಸವು ತುಂಬಾ ಕಷ್ಟಕರವಾಗಿದ್ದು, ಹೆಚ್ಚಿನಶ್ರಮವಹಿಸಬೇಕಾಗುತ್ತದೆ, ಮಾತ್ರವಲ್ಲದೆ, ವೇತನದಲ್ಲಿಯೂ ತಾರತಮ್ಯವನ್ನು ಅನುಭವಿಸುವುದರಿಂದ ಕಡಿಮೆ ವೇತನವನ್ನು ಪಡೆಯಬೇಕಾಗುತ್ತದೆ. ವಿದ್ಯಾವಂತರಾಗಿ ಉತ್ತಮ ಕೆಲಸವನ್ನು ಪಡೆದರೆ ಮಾತ್ರ ಸಮಾಜದಲ್ಲಿ ಸ್ವಾವಲಂಬಿಯಾಗಿ ಬದುಕಲು ಸಾಧ್ಯ ಎಂದು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ.

೪.೪. ಇತರ ವಿಷಯಗಳು

ಮಾಹಿತಿದಾರರಲ್ಲಿ ಪಟ್ಟಣಕ್ಕೆ ಹೋಗುವ ಪರಿಪಾಠ ಇದೆಯೇ? ಎಂದು ಕೇಳಿದಾಗ ೨೮ ಮಂದಿ ಇದೆ ಎಂದೂ, ೬೦ ಮಂದಿ ಇಲ್ಲ ಎಂದೂ ತಿಳಿಸಿರುತ್ತಾರೆ. ಪ್ರತಿಪಾದಕರು ತಮ್ಮ ಕೆಲಸದ ಕಾರಣದಿಂದಾಗಿ ಹಾಗೂ ಸಂಬಂಧಿಕರ ಮನೆಗೆ ಹೋಗಲು ಪಟ್ಟಣಕ್ಕೆ ಬರುತ್ತಾರೆ.

ಮಾಹಿತಿದಾರರಲ್ಲಿ, ಸಮಾಜದಲ್ಲಿರುವ ಮಹಿಳೆಯರಿಗೆ ನಿಮ್ಮ ದೃಷ್ಟಿಕೋನದಲ್ಲಿ ದುಡಿಮೆಯ ಬಗ್ಗೆ ಹೇಳುವ ಮಾತುಗಳಾವುವು? ಎಂದು ಪ್ರಶ್ನಿಸಿದಾಗ, ಹೆಚ್ಚಿನ ಮಾಹಿತಿದಾರರು ತಾವು ಮಾಡುವ ಕೆಲಸವು ತುಂಬಾ ಕಷ್ಟಕರವಾಗಿದ್ದು, ಹೆಚ್ಚಿನಶ್ರಮವಹಿಸಬೇಕಾಗುತ್ತದೆ, ಮಾತ್ರವಲ್ಲದೆ,

ವೇತನದಲ್ಲಿಯೂ ತಾರತಮ್ಯವನ್ನು ಅನುಭವಿಸುವುದರಿಂದ ಕಡಿಮೆ ವೇತನವನ್ನು ಪಡೆಯಬೇಕಾಗುತ್ತದೆ. ವಿದ್ಯಾವಂತರಾಗಿ ಉತ್ತಮ ಕೆಲಸವನ್ನು ಪಡೆದರೆ ಮಾತ್ರ ಸಮಾಜದಲ್ಲಿ ಸ್ವಾವಲಂಬಿಯಾಗಿ ಬದುಕಲು ಸಾಧ್ಯ ಎಂದು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ.

ಅಧ್ಯಾಯ–೫
ಅಧ್ಯಯನದ ಫಲಿತಗಳು

ಅಧ್ಯಾಯ ೫

ಅಧ್ಯಯನದ ಫಲಿತ, ಸಾರಾಂಶಗಳು ಮತ್ತು ಉಪಸಂಹಾರ

೫.೧ ಅಧ್ಯಯನದ ಫಲಿತಾಂಶಗಳು

ಹಿಂದಿನ ಅಧ್ಯಯಗಳ ಅಧ್ಯಯನದ ಆಧಾರದಲ್ಲಿ ಸಾರಾಂಶ ಮತ್ತು ಫಲಿತಗಳನ್ನು ಕೊನೆಯಲ್ಲಿ ನೀಡಲಾಗಿರುತ್ತದೆ. ಪ್ರಸ್ತುತ ಅಧ್ಯಯನದಲ್ಲಿ ಗ್ರಂಥಗಳು, ಲೇಖನಗಳು, ವರದಿಗಳು ಮತ್ತು ಪೂರ್ವಾರ್ಧ್ಯಯನಗಳ ಪರಾಮರ್ಶೆಯ ಮೂಲಕ ವಿಶ್ಲೇಷಣೆ ಮಾಡಿ ಮಾಹಿತಿ ಸಂಗ್ರಹಣೆ ಮಾಡುವುದರ ಜೊತೆಗೆ ಕ್ಷೇತ್ರಾಧಾರಿತ ಅಧ್ಯಯನವನ್ನು ಮಾಡಲಾಗಿದೆ. ಈ ಅಧ್ಯಾಯದಲ್ಲಿ ಅಧ್ಯಯನದ ಆವಿಷ್ಕಾರಗಳ ಮತ್ತು ಅವಲೋಕನಗಳ ಆಧಾರದ ಮೇಲೆ ಮಹಿಳಾ ಕಾರ್ಮಿಕರ ಅಭಿವೃದ್ಧಿಗೆ ಸಲಹೆಗಳನ್ನು, ಭವಿಷ್ಯದ ಸಂಶೋಧನಾ ಸಾಧ್ಯತೆಗಳನ್ನು ಹಾಗೂ ಉಪಸಂಹಾರವನ್ನು ನೀಡಲಾಗಿದೆ.

ನಮ್ಮ ಸಮಾಜದಲ್ಲಿ ಬದಲಾವಣೆಯ ಗಾಳಿ ಬೀಸುತ್ತಿದೆ. ಈ ಸಂದರ್ಭದಲ್ಲಿ ಮಹಿಳೆ ವೃತ್ತಿಪರಳಾಗಿ ಗುರುತಿಸಿಕೊಳ್ಳುವಂತೆ ಮಾನಸಿಕ, ಕೌಟುಂಬಿಕ, ಸಾಂಸ್ಥಿಕ ಹಾಗೂ ಸಮಾಜಮಟ್ಟಗಳೆಲ್ಲದರಲ್ಲಿಯೂ ಪುರುಷ ಪಾತ್ರ ಬದಲಾವಣೆಗೊಳ್ಳಬೇಕು. ಮಗನಾಗಿ, ತಂದೆಯಾಗಿ ಗಂಡಿಸಿನ ಪಾತ್ರದಲ್ಲಿ ಸುಧಾರಣೆ ಮಹಿಳೆಯರನ್ನು ಹೆಚ್ಚು ಸಬಲರನ್ನಾಗಿ ಮಾಡುತ್ತದೆ. ಕುಟುಂಬ ಹಾಗೂ ಸಮಾಜ ಗಂಡು ಹೆಣ್ಣಿಗೆ ಸಮಾನ ಅವಕಾಶಗಳು, ಸಾಮಾನ್ಯ ಜವಾಬ್ದಾರಿಗಳಿವೆ ಎಂಬ ಅಂಶವನ್ನು ಅರಿಯಬೇಕಾಗುತ್ತದೆ.

ಗ್ರಾಮೀಣ ಮಹಿಳಾ ಕಾರ್ಮಿಕರ ಸಮಸ್ಯೆಗಳನ್ನು ಅಧ್ಯಯನಕ್ಕೆ ಒಳಪಡಿಸಿದಾಗ ಕೆಲಸದಲ್ಲಿ, ದೊರೆಯುವ ವೇತನದಲ್ಲಿ ಪುರುಷ ಕಾರ್ಮಿಕರೊಂದಿಗೆ ತಾರತಮ್ಯವನ್ನು ಎದುರಿಸುತ್ತಿದ್ದಾರೆ, ಎಂಬುದು ಸ್ಪಷ್ಟವಾಗುವ ಅಂಶವಾಗಿದೆ ಹಾಗೂ ಸ್ವ-ಉದ್ಯೋಗ, ಸ್ವ-ಸಹಾಯ ಸಂಘಗಳು ಸ್ತ್ರೀಶಕ್ತಿ ಗುಂಪುಗಳು ಇತ್ಯಾದಿಗಳ ಮೂಲಕ ಮಹಿಳಾ ಕಾರ್ಮಿಕರು ಗ್ರಾಮೀಣ ಅಭಿವೃದ್ಧಿಯಲ್ಲಿ ಸಕ್ರೀಯವಾಗಿ ಪಾಲ್ಗೊಳ್ಳುತ್ತಿದ್ದಾರೆ ಎಂಬುದು ಅಧ್ಯಯನದ ಊಹೆಯಾಗಿದ್ದು, ಈ ಊಹೆಯನ್ನು ಕ್ಷೇತ್ರಾಧ್ಯಯನದ ಮಾಹಿತಿಗಳು ಸ್ಪಷ್ಟೀಕರಿಸುತ್ತವೆ.

ಗ್ರಾಮೀಣ ಮಹಿಳಾ ಕಾರ್ಮಿಕರ ಸಮಸ್ಯೆಗಳನ್ನು ಹೋಗಲಾಡಿಸಲು ಸರಕಾರವು ಹಲವಾರು ಕಾರ್ಯಕ್ರಮಗಳನ್ನು ರೂಪಿಸಿದ್ದರೂ ಈ ಎಲ್ಲಾ ಕಾರ್ಯಕ್ರಮಗಳು ಗ್ರಾಮೀಣ

ಪ್ರದೇಶವನ್ನು ತಲುಪುತ್ತಿಲ್ಲ ಎಂಬುದು ಕ್ಷೇತ್ರ ಕಾರ್ಯದ ಸಂದರ್ಭದಲ್ಲಿ ತಿಳಿದು ಬಂದಿದೆ. ಗ್ರಾಮೀಣ ಮಹಿಳೆಯರ ಸಾಮಾಜಿಕ – ಆರ್ಥಿಕ ಪರಿಸ್ಥಿತಿಯು ಇನ್ನೂ ಹಿಂದುಳಿದೆ ಎನ್ನುವುದು ಅಧ್ಯಯನದ ಊಹೆಯಾಗಿದ್ದರೂ, ಕ್ಷೇತ್ರ ಕಾರ್ಯದ ಸಂದರ್ಭದಲ್ಲಿ ಮಹಿಳಾ ಕಾರ್ಮಿಕರು ತಮ್ಮ ಸಾಮಾಜಿಕ–ಆರ್ಥಿಕ ಸ್ಥಿತಿ ಉತ್ತಮವಾಗಿದೆ ಎಂದು ತಿಳಿಸಿರುತ್ತಾರೆ. ಆದರೆ ಮಾಹಿತಿದಾರರು ತಮ್ಮ ಸಾಮಾಜಿಕ ಮತ್ತು ಆರ್ಥಿಕ ಪರಿಸ್ಥಿತಿಯು ಉತ್ತಮವಾಗಿರಲು ಸರಕಾರದಿಂದ ಯಾವುದೇ ರೀತಿಯ ಸಾಲ ಸೌಲಭ್ಯಗಳು ದೊರೆತ್ತಿಲ್ಲ ಎಂಬುದನ್ನು ತಿಳಿಸಿರುತ್ತಾರೆ.

ಬಂಟ್ವಾಳ ತಾಲೂಕಿನಲ್ಲಿರುವ ಅಸಂಘಟಿತ ವಲಯದಲ್ಲಿ ದುಡಿಯುತ್ತಿರುವ ಮಹಿಳಾ ಕಾರ್ಮಿಕರು ಹಂತ ಹಂತವಾಗಿ ಪ್ರತಿಯೊಂದು ರೀತಿಯಲ್ಲಿಯೂ ತಾರತಮ್ಯವನ್ನು ಅನುಭವಿಸುತ್ತಿದ್ದಾರೆ. ಮುಖ್ಯವಾಗಿ ಹೇಳುವುದಾದರೆ ಪುರುಷ ಕಾರ್ಮಿಕರೊಂದಿಗೆ ಕೆಲಸದಲ್ಲಿ ಹಾಗೂ ವೇತನದಲ್ಲಿ ತಾರತಮ್ಯವನ್ನು ಅನುಭವಿಸುತ್ತಿದ್ದಾರೆ ಎನ್ನುವುದು ಅಧ್ಯಯನದಿಂದ ತಿಳಿದುಬಂದಿರುವ ವಿಷಯವಾಗಿದೆ. ಮಹಿಳಾ ಕಾರ್ಮಿಕರು ದಿನಕ್ಕೆ ರೂ.೮೦ ಸಂಬಳ ಪಡೆದರೆ ಪುರುಷ ಕಾರ್ಮಿಕರು ೧೬೦ ರೂ.ಗಳನ್ನು ಪಡೆಯುತ್ತಾರೆ.

ಅಧ್ಯಯನಕ್ಕೆ ಒಳಪಡಿಸಿರುವ ಕಾರ್ಮಿಕರು ತಮಗೆ ಸರಕಾರದಿಂದ ಸ್ಮಾರ್ಟ್ ಕಾರ್ಡ್, ವಿಮಾ ಯೋಜನೆ ಮುಂತಾದ ಸೌಲಭ್ಯಗಳು ದೊರೆಯುತ್ತಿಲ್ಲವೆಂಬುದನ್ನೂ ಮಾತ್ರವಲ್ಲದೆ ಸರಕಾರವು ಮಹಿಳಾ ಕಾರ್ಮಿಕರಿಗೆಂದು ಹಲವಾರು ಯೋಜನೆಗಳನ್ನು ಹಮ್ಮಿಕೊಂಡಿದ್ದರೂ ಇದು ಗ್ರಾಮೀಣ ಜನರನ್ನು ತಲುಪುವಲ್ಲಿ ವಿಫಲವಾಗಿದೆ ಎಂದು ತಿಳಿಸಿರುತ್ತಾರೆ. ಸರಕಾರವು ಕಾರ್ಮಿಕರ ಅಭಿವೃದ್ಧಿಗಾಗಿ ಸಾಲ ಸೌಲಭ್ಯಗಳನ್ನು ಒದಗಿಸಿದರೆ ಹಾಗೂ ಸರಕಾರದ ಯೋಜನೆಗಳನ್ನು ಪ್ರತಿಯೊಬ್ಬರಿಗೂ ತಲುಪುವಂತೆ ಮಾಡಿದರೆ ಕಾರ್ಮಿಕರು ಸಾಮಾಜಿಕವಾಗಿ ಹಾಗೂ ಆರ್ಥಿಕವಾಗಿ ಇನ್ನಷ್ಟೂ ಪ್ರಗತಿ ಹೊಂದಲು ಸಾಧ್ಯವಾಗಬಹುದು.

ಬಂಟ್ವಾಳ ತಾಲೂಕಿನಲ್ಲಿ ಒಟ್ಟು ಜನಸಂಖ್ಯೆಯಲ್ಲಿ ಶೇಕಡಾ ೫೦ರಷ್ಟು ಮಹಿಳೆಯರಿದ್ದಾರೆ. ೮೪ ಗ್ರಾಮಗಳನ್ನು ಒಳಗೊಂಡ ಈ ತಾಲೂಕಿನಲ್ಲಿ ಅಸಂಘಟಿತ ವಲಯದಲ್ಲಿ ದುಡಿಯುವ ಮಹಿಳೆಯರು ಹೆಚ್ಚಾಗಿದ್ದು, ಸ್ವ–ಸಹಾಯ ಸಂಘ ಸ್ತ್ರೀಶಕ್ತಿ ಗುಂಪುಗಳು ಯುವತಿ ಮಂಡಳಗಳು ಮುಂತಾದ ಸಂಘ – ಸಂಸ್ಥೆಗಳಲ್ಲಿ ತಮ್ಮನ್ನು ತಾವು ಸಕ್ರೀಯವಾಗಿ ತೊಡಗಿಸಿಕೊಂಡು ಸ್ವಾವಲಂಬಿಯಾಗಿ ಬದುಕಲು ಪ್ರಯತ್ನಿಸುತ್ತಿದ್ದಾರೆ ಎಂಬುದು ಅಧ್ಯಯನದಿಂದ ತಿಳಿದು ಬಂದಿರುವ ಅಂಶವಾಗಿದೆ. ಸ್ವ–ಸಹಾಯ, ಸ್ತ್ರೀಶಕ್ತಿ

ಗುಂಪು ಹಾಗೂ ಇನ್ನಿತರ ಸಂಘಗಳು ಗ್ರಾಮೀಣ ಮಹಿಳೆಯರ ಸಬಲೀಕರಣದಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ.

ಹೆಚ್ಚಿನ ಮಹಿಳಾ ಕಾರ್ಮಿಕರು ಅನಕ್ಷರಸ್ಥರು ಅಥವಾ ಕಡಿಮೆ ಶಿಕ್ಷಣವನ್ನು ಪಡೆದವರಾಗಿತ್ತಾರೆ ಎಂಬುದು ಕ್ಷೇತ್ರ ಕಾರ್ಯಧಾರಿತ ಅಂಕಿ ಅಂಶಗಳ ಆಧಾರದಲ್ಲಿ ತಿಳಿದು ಬಂದ ಅಂಶವಾಗಿದೆ. ಆದರೆ ಈ ಮಹಿಳೆಯರು ತಮ್ಮ ಮಕ್ಕಳ ವಿದ್ಯಾಭ್ಯಾಸಕ್ಕೆ ಹೆಚ್ಚಿನ ಒತ್ತು ನೀಡುತ್ತಾರೆ. ಬಂಟ್ವಾಳ ತಾಲೂಕಿನ ಕೆಲವು ಹಳ್ಳಿಗಳಿಂದ ಪ್ರಾಥಮಿಕ ಆರೋಗ್ಯ ಕೇಂದ್ರ ಬಹೂ ದೂರದಲ್ಲಿದೆ ಮಾತ್ರವಲ್ಲದೆ ಸಾರಿಗೆ ವ್ಯವಸ್ಥೆಯು ಉತ್ತಮ ಮಟ್ಟದಲ್ಲಿ ಇಲ್ಲದೆ ಇರುವುದರಿಂದ ಗ್ರಾಮೀಣ ಜನರು ಪಟ್ಟಣಕ್ಕೆ ಬರಲು ತೊಂದರೆಗಳನ್ನು ಅನುಭವಿಸುತ್ತಾರೆ. ತಮ್ಮ ಮತ್ತು ತಮ್ಮ ಪ್ರದೇಶದ (ಹಳ್ಳಿ) ಅಭಿವೃದ್ಧಿಗಾಗಿ ಅನಗತ್ಯವಾಗಿ ನಗರಗಳಿಗೆ ವಲಸೆ ಹೋಗದೆ ಸಂತುಲಿತ ಅಭಿವೃದ್ಧಿಯ ಪಯಣವನ್ನು ಸಾಗಿಸಬೇಕು. ಇಂದು ಗುಣಮಟ್ಟ-ಸ್ವಾತಂತ್ರ್ಯವನ್ನು ಮೌಲ್ಯಗಳೆಂದು ಮಹಿಳೆ'ಯರೂ ಪುರುಷರೂ ಗುರುತಿಸುತ್ತಿದ್ದಾರೆ. ತೆರೆದ ಅರ್ಥಿಕತೆ-ಸಮಾಜದಲ್ಲಿ ಸಮಾನತೆಯ ಹಾದಿಯಲ್ಲಿ ಹಿಂಸೆ, ಕೃತಿಮ ತಾರತಮ್ಯತೆ, ಅನಗತ್ಯ ಒತ್ತಡ ನಿವಾರಿಸಿ, ಜೀವನದ ಸುಖ-ನೆಮ್ಮದಿ ಮತ್ತು ಭದ್ರತೆ ಹೊಂದುವಲ್ಲಿ, ಮಹಿಳೆಯರೂ ನಿರ್ವಹಣಾ-ನಿಪುಣರಾಗಬೇಕು. ಆ ನಿಟ್ಟಿನಲ್ಲಿ ಇಂಥ ಅಧ್ಯಯನಗಳೂ ಸೇರಿದಂತೆ ನಿರಂತರ ಪ್ರಯತ್ನ ಇರಬೇಕು (ಡಿ'ಸೋಜ, ೨೦೧೧).

೫.೨ ಮಹಿಳಾ ಕಾರ್ಮಿಕರ ಅಭಿವೃದ್ಧಿಗೆ ಸಲಹೆ ಸೂಚನೆಗಳು

೧. ಕಾರ್ಮಿಕರ ಕಲ್ಯಾಣಕ್ಕಾಗಿ ಸರಕಾರವು ಹಲವಾರು ಯೋಜನೆಗಳನ್ನು ಹಮ್ಮಿಕೊಂಡಿದ್ದರೂ ಗ್ರಾಮೀಣ ಪ್ರದೇಶಗಳಿಗೆ ಈ ಯೊಜನೆಗಳು ತಲುಪುವಂತೆ ಕ್ರಮ ಕೈಗೊಳ್ಳುವುದು.

೨. ಹಳ್ಳಿ ಹಳ್ಳಿಗೂ ಸಾರಿಗೆ ವ್ಯವಸ್ಥೆಯನ್ನು ಉತ್ತಮಗೊಳಿಸಲು ಸರಕಾರವು ಸೂಕ್ತ ಕ್ರಮಗಳನ್ನು ಕೈಗೊಂಡರೆ ಮಹಿಳಾ ಅಭಿವೃದ್ಧಿಗೆ ಸಹಾಯಕವಾಗಿದೆ.

೩. ಸಂಘ-ಸಂಸ್ಥೆಗಳು ಇನ್ನಷ್ಟು ಉತ್ತಮ ರೀತಿಯಲ್ಲಿ ಕಾರ್ಯ ನಿರ್ವಹಿಸುವಂತೆ ಕ್ರಮಕೈಗೊಳ್ಳುವುದು.

೪. ಬದಲಾವಣೆಯ ಗಾಳಿ ತಂತ್ರಜ್ಞಾನದ ರೂಪದಲ್ಲೂ ಬೀಸುತ್ತಿದೆ. ನಮ್ಮ ಮಹಿಳಾ ಕಾರ್ಮಿಕರು ಕೃಷಿ, ಕೃಷಿ-ಸಂಬಂಧಿ ಮತ್ತು ಇತರ ಗ್ರಾಮೀಣ

ಚಟುವಟಿಕೆಗಳಲ್ಲಿ ಮಾಹಿತಿ-ಸಂಪರ್ಕ ತಂತ್ರಜ್ಞಾನದಲ್ಲೂ (ICT) ಮುಂದುವರೆಯಬೇಕು. ಹಪ್ಪಳ, ಉಪ್ಪಿನಕಾಯಿ ಉದ್ದಿಮೆಯಲ್ಲದೆ ಎಲೆಕ್ಟ್ರೋನಿಕ್ಸ್ ಬಗ್ಗೆಯೂ ತಿಳಿದುಕೊಳ್ಳಬೇಕು. ಸೀಮಿತ ಅಭಿವೃದ್ಧಿ ಸಮತಾ ಅಭಿವೃದ್ಧಿ ಅಲ್ಲ. ಮೂಲಸೌಲಭ್ಯ, ಸಾಮಾಜಿಕ ಬಂಡವಾಳ-ಉದ್ಯಮಶೀಲತೆಗೆ ಈ ಹೊಸ ಮುಖ/ಜಾಲ-ನಿರೀಕ್ಷೆ ಹಳ್ಳಿ-ನಗರ, ಬಡವ-ಶ್ರೀಮಂತ ಅಂತರ ನಿವಾರಣೆಯಲ್ಲಿ ಕಾರ್ಯಮಾಡುತ್ತಿದೆ. (ಹನ್ಸ್, ೨೦೧೨).

೫.೩ ಭವಿಷ್ಯದ ಸಂಶೋಧನಾ ಸಾಧ್ಯತೆಗಳು

ಪ್ರತಿಯೊಂದು ಸಂಶೋಧನಾ ಅಧ್ಯಯನದಲ್ಲಿ ಆಯ್ದುಕೊಂಡ ವಿಷಯದ ಬಗ್ಗೆ ಹೊಸ ಹೊಸ ವಿಷಯಗಳನ್ನು ತಿಳಿಯುವ ಪ್ರಯತ್ನ ಮಾಡಲಾಗುತ್ತದೆ. ಅಂತೆಯೇ ವಿಷಯಕ್ಕೆ ಸಂಬಂಧಿಸಿದಂತೆ ಮುಂದಿನ ಅಧ್ಯಯನಗಳ ಸಾಧ್ಯತೆಯ ಬಗ್ಗೆಯೂ ಹೇಳಬಹುದಾಗಿದೆ. ಈ ಹಿನ್ನೆಲೆಯಲ್ಲಿ ಈ ಅಧ್ಯಯನಕ್ಕೆ ಸಂಬಂಧಿಸಿದಂತೆ ಮುಂದಿನ ಅಧ್ಯಯನ/ಸಂಶೋಧನೆಗಳ ಸಾಧ್ಯತೆಯ ವಿಚಾರವನ್ನು ಈ ಕೆಳಗಿನಂತೆ ಗುರುತಿಸಬಹುದು.

- ಗ್ರಾಮೀಣ ಮಹಿಳಾ ಕಾರ್ಮಿಕರ ಸಮಸ್ಯೆಗಳನ್ನು ಇನ್ನಿತರ ತಾಲೂಕಿನ ಮಹಿಳಾ ಕಾರ್ಮಿಕರ ಸಮಸ್ಯೆಗಳೊಂದಿಗೆ ತುಲನಾತ್ಮಕ ಅಧ್ಯಯನ ನಡೆಸಬಹುದು.
- ಅಧ್ಯಯನಕ್ಕೆ ಒಳಪಡಿಸಿರುವ ತಾಲೂಕಿನಲ್ಲಿ ದುಡಿಯುತ್ತಿರುವ ಇತರ ಕಾರ್ಮಿಕರೊಂದಿಗೆ ಈ ಅಧ್ಯಯನಕ್ಕೆ ಒಳಪಡಿಸಿರುವ ಕಾರ್ಮಿಕರ ಆಗು-ಹೋಗುಗಳನ್ನು ಹೋಲಿಕೆ ಮಾಡಿ ಅಧ್ಯಯನ ಮಾಡಬಹುದು.
- ಸ್ವ-ಸಹಾಯ ಸಂಘ, ಸ್ತ್ರಿಶಕ್ತಿ ಗುಂಪು ಹಾಗೂ ಇನ್ನಿತರ ಸಂಸ್ಥೆಗಳಿಂದ ಮಹಿಳಾ ಕಾರ್ಮಿಕರು ಆರ್ಥಿಕವಾಗಿ ಹಾಗೂ ಸಾಮಾಜಿಕವಾಗಿ ಎಷ್ಟರ ಮಟ್ಟಿಗೆ ಅಭಿವೃದ್ಧಿ ಹೊಂದಿದ್ದಾರೆ ಎಂಬುದನ್ನು ವಿಸ್ತಾರವಾಗಿ ತಿಳಿದುಕೊಳ್ಳಬಹುದು.

೫.೪ ಸಾರಾಂಶ

ಮೊದಲನೆ ಅಧ್ಯಾಯದಲ್ಲಿ ಪೀಠಿಕೆ, ಗ್ರಾಮೀಣ ಮಹಿಳೆ, ಗ್ರಾಮೀಣ ಅಭಿವೃದ್ಧಿ, ಪ್ರಸ್ತುತ ಅಧ್ಯಯನದ ಉದ್ದೇಶ, ಸಮಸ್ಯೆ, ವಿಧಾನಗಳು, ವ್ಯಾಪ್ತಿ, ಗ್ರಂಥ ಪರಾಮರ್ಶೆ ಇತಿಮಿತಿಗಳನ್ನು ನೀಡಲಾಗಿದೆ. ಎರಡನೇ ಅಧ್ಯಾಯದಲ್ಲಿ ಸಂಶೋಧನಾ ಪ್ರದೇಶವಾದ

ಬಂಟ್ವಾಳ ತಾಲೂಕಿನ ಸಾಮಾಜಿಕ, ರಾಜಕೀಯ, ಆರ್ಥಿಕ ಮತ್ತು ಭೌಗೋಳಿಕವಾದ ಪರಿಚಯ ನೀಡಲಾಗಿದೆ. ಮೂರನೇ ಅಧ್ಯಾಯದಲ್ಲಿ ಭಾರತದಲ್ಲಿ, ರಾಜ್ಯದಲ್ಲಿ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹಾಗೂ ಬಂಟ್ವಾಳ ತಾಲೂಕಿನಲ್ಲಿರುವ ಗ್ರಾಮೀಣ ಮಹಿಳಾ ಕಾರ್ಮಿಕರು ಎದುರಿಸುತ್ತಿರುವ ಸಮಸ್ಯೆಗಳನ್ನು ಅನುಷಂಗಿಕ ಮೂಲಗಳನ್ನು ಅನುಸರಿಸಿ ಸಂಗ್ರಹಿಸಲಾಗಿದೆ. ನಾಲ್ಕನೇಯ ಅಧ್ಯಾಯದಲ್ಲಿ ಪ್ರಾಥಮಿಕ ದತ್ತಾಂಶದ ವಿಶ್ಲೇಷಣೆ ಇದೆ. ಕೊನೆಯ ಅಧ್ಯಾಯದಲ್ಲಿ ಅಧ್ಯಯನದ ಫಲಿತಾಂಶಗಳು, ಭವಿಷ್ಯದಲ್ಲಿನ ಸಂಶೋಧನಾ ಸಾಧ್ಯತೆಗಳು, ಸಲಹೆ ಸೂಚನೆಗಳನ್ನು ನೀಡಲಾಗಿದೆ. ಕೊನೆಯಲ್ಲಿ ಪರಾಮರ್ಶನ ಗ್ರಂಥ ಅನುಬಂಧ ಹಾಗೂ ಪ್ರಶ್ನಾವಳಿಯ ಬಗ್ಗೆ ವಿವರಣೆ ನೀಡಲಾಗಿದೆ.

೫.೫. ಉಪಸಂಹಾರ

ಇದು ಗ್ರಾಮೀಣ ಮಹಿಳಾ ಕಾರ್ಮಿಕರ ಸಮಸ್ಯೆಗಳ ಅಧ್ಯಯನವಾಗಿದೆ. ಬಂಟ್ವಾಳ ತಾಲೂಕಿನಲ್ಲಿ ಕೈಗೊಂಡ ಪ್ರಕರಣ ಅಧ್ಯಯನವು ಬಂಟ್ವಾಳ ತಾಲೂಕಿನ ಆಯ್ದ ಗ್ರಾಮಗಳಿಗೆ ಸಂದರ್ಶವಿತ್ತು ಅಲ್ಲಿನ ಮಹಿಳಾ ಕಾರ್ಮಿಕರೊಂದಿಗೆ ಸಮಾಲೋಚನೆ ನಡೆಸಿ ಅವರಿಂದ ಮಾಹಿತಿ ಸಂಗ್ರಹಿಸಿ ಮಾಡಿದ ಅಧ್ಯಯನವಾಗಿದೆ. ೨೧ನೇ ಶತಮಾನದಲ್ಲಿ ಅತೀ ವೇಗದಲ್ಲಿ ಸಾಗುತ್ತಿರುವ ಜಗತ್ತಿನಲ್ಲಿ ಗ್ರಾಮೀಣ ಮಹಿಳಾ ಕಾರ್ಮಿಕರು ಸ್ವಾವಲಂಬಿಯಾಗಿ ಬದುಕುವುದು ಅತೀ ಅವಶ್ಯಕವಾಗಿದೆ. ಸರಕಾರ ಹಾಗೂ ಸಂಘ ಸಂಸ್ಥೆಗಳ ಆರ್ಥಿಕ ನೆರವಿನಿಂದ ಕಾರ್ಮಿಕರನ್ನು ಆರ್ಥಿಕವಾಗಿ ಹಾಗೂ ಸಾಮಾಜಿಕವಾಗಿ ಸಬಲರನ್ನಾಗಿ ಮಾಡಬಹುದು. ಅಸಂಘಟಿತ ವಲಯದ ಕಾರ್ಮಿಕರಲ್ಲಿ ಕೃಷಿ ಕಾರ್ಮಿಕರು ಹೆಚ್ಚಾಗಿದ್ದು, ದೇಶದ ಅಭಿವೃದ್ಧಿಗಾಗಿ ಅಪಾರವಾದ ಸೇವೆಯನ್ನು ಸಲ್ಲಿಸುತ್ತಿದ್ದಾರೆ. ಅವರನ್ನು ಗುರುತಿಸುವ, ಗೌರವದಿಂದ ಕಾಣುವ ಅವರ ಆರ್ಥಿಕ ಕೊಡುಗೆಗಳನ್ನು ಮಾನ್ಯ-ಮಾಪನ ಮಾಡುವ ಮತ್ತು ಅವರ ಮುಂದಿನ ಪ್ರಗತಿಗೆ ಪ್ರೋತ್ಸಾಹ, ಉತ್ತೇಜಕಗಳನ್ನು ಕೊಡುವ ಮನಸ್ಸು, ನಿರ್ಧಾರ ನಮ್ಮೆಲ್ಲರದಾಗಬೇಕು. ಎಲ್ಲಾ ಮಹಿಳೆಯರು ಸಮಾಜದ ಮುಖ್ಯವಾಹಿನಿಗೆ ಬರುವುದು ಇಂದಿನ ಅಗತ್ಯ; ಅದಕ್ಕೆ ಗ್ರಾಮೀಣ ಮಹಿಳಾ ಕಾರ್ಮಿಕರ ಆರ್ಥಿಕ ಸೇರ್ಪಡೆ ಬೇಗ ಆಗಬೇಕು. ಆಗ ನಮ್ಮ ಸಮಾಜೋ-ಆರ್ಥಿಕ ಅಭಿವೃದ್ಧಿಯ ಅಧ್ಯಯನಗಳು, ನೀತಿ-ನಿರೂಪಣೆಗಳು, ದೃಷ್ಟಿ ಧೋರಣೆಗಳು, ಕಾರ್ಯಗಳು, ಕ್ರಮಗಳು ಸೂಕ್ತ ಮತ್ತು ಫಲಭರಿತವಾಗಬಲ್ಲವು.

ಅನುಬಂಧಗಳು

ಅನುಬಂಧ ೧ ಕೋಷ್ಟಕಗಳ ಪಟ್ಟಿ

ಕ್ರಮ ಸಂಖ್ಯೆ	ಕೋಷ್ಟಕ	ವಿಷಯ
೧	ಕೋಷ್ಟಕ ೪.೧.೧	ಮಾಹಿತಿದಾರರ ವಯೋಮಾನ ವರ್ಗೀಕರಣ
೨	ಕೋಷ್ಟಕ ೪.೧.೨	ಮಾಹಿತಿದಾರರ ವಿದ್ಯಾರ್ಹತೆ ನೆಲೆಯಲ್ಲಿ
೩	ಕೋಷ್ಟಕ ೪.೧.೩	ಮಾಹಿತಿದಾರರ ವರಮಾನಾಧಾರಿತ ವರ್ಗೀಕರಣ
೪	ಕೋಷ್ಟಕ ೪.೧.೪	ವಾಸವಾಗಿರುವ ಪ್ರದೇಶ
೫	ಕೋಷ್ಟಕ ೪.೨.೧	ಸದಸ್ಯರಾಗಿರುವ ಪ್ರಧಾನ ಉದ್ದೇಶ
೬	ಕೋಷ್ಟಕ ೪.೨.೨	ವಾಹನ ಸೌಕರ್ಯ
೭	ಕೋಷ್ಟಕ ೪.೨.೩	ಆಧಾರ್ ಕಾರ್ಡ್
೮	ಕೋಷ್ಟಕ ೪.೩.೧	ಮಾಹಿತಿದಾರರಿಗೆ ಉದ್ಯೋಗ ದೊರೆತ ಮಾಹಿತಿ
೯	ಕೋಷ್ಟಕ ೪.೩.೨	ಮಾಹಿತಿದಾರರು ಉದ್ಯೋಗಕ್ಕೆ ಹೋಗುವ ಕಾರಣ
೧೦	ಕೋಷ್ಟಕ ೪.೩.೩	೫ ವರ್ಷಗಳಲ್ಲಿ ಉದ್ಯೋಗ ಬದಲಾವಣೆ ಮಾಡಿರುವ ಬಗ್ಗೆ
೧೧	ಕೋಷ್ಟಕ ೪.೩.೪	ಉದ್ಯೋಗ ಮಾಡುವಲ್ಲಿ ಪುರುಷ ಕಾರ್ಮಿಕರು
೧೨	ಕೋಷ್ಟಕ ೪.೩.೫	ಪುರುಷ ಕಾರ್ಮಿಕರೊಂದಿಗೆ ಉದ್ಯೋಗದಲ್ಲಿರುವ ತಾರತಮ್ಯ
೧೩	ಕೋಷ್ಟಕ ೪.೩.೬	ಪುರುಷ ಕಾರ್ಮಿಕರೊಂದಿಗೆ ವೇತನದಲ್ಲಿನ ತಾರತಮ್ಯ
೧೪	ಕೋಷ್ಟಕ ೪.೩.೭	ದುಡಿಯುವಲ್ಲಿ ಶೌಚಾಲಯದ ವ್ಯವಸ್ಥೆ
೧೫	ಕೋಷ್ಟಕ ೪.೩.೮	ಕೆಲಸದ ವೇಳೆ ಯಾವ ನಿಲುವಿನಲ್ಲಿರುತ್ತೀರಿ?

೧೬	ಕೋಷ್ಟಕ ೪.೩.೯	ಕೆಲಸ ಸಂಬಂಧಿತ ಆರೋಗ್ಯ ಬಾಧೆಗಳು
೧೭	ಕೋಷ್ಟಕ ೪.೩.೧೦	ಸೂಕ್ತ ವೇತನ ದೊರಕುತ್ತಿದೆಯೇ?
೧೮	ಕೋಷ್ಟಕ ೪.೩.೧೧	ವೇತನದ ವಿನಿಯೋಗಿಸಲ್ಪಡುವಿಕೆ
೧೯	ಕೋಷ್ಟಕ ೧.೩.೧೨	ವೇತನ ಉಳಿತಾಯ ಮಾಡುವ ಬಗ್ಗೆ
೨೦	ಕೋಷ್ಟಕ ೪.೩.೧೩	ಕೆಲಸದಲ್ಲಿ ಅಧಿಕ ದೈಹಿಕ ಶ್ರಮದ ಉಪಯೋಗ
೨೧	ಕೋಷ್ಟಕ ೪.೩.೧೪	ಕೆಲಸ ಮಾಡುವಲ್ಲಿ ಮಾನಸಿಕ ಒತ್ತಡ
೨೨	ಕೋಷ್ಟಕ ೪.೩.೧೫	ಕೌಟುಂಬಿಕ ಸಮಸ್ಯೆ
೨೩	ಕೋಷ್ಟಕ ೪.೩.೧೬	ಕೆಲಸದ ನಂತರ ಮನೆಯಲ್ಲಿ ಸ್ವಂತ ದುಡಿಮೆ ಮಾಡುವ ಬಗ್ಗೆ
೨೪	ಕೋಷ್ಟಕ ೪.೩.೧೭	ಬಂಟ್ವಾಳ ತಾಲೂಕಿನ ಅಭಿವೃದ್ಧಿ ಬಗ್ಗೆ ಮಾಹಿತಿ
೨೫	ಕೋಷ್ಟಕ ೪.೩.೧೮	ಹಿಂದಿನ ಹಾಗೂ ಇಂದಿನ ಆರ್ಥಿಕ-ಸಾಮಾಜಿಕ ಸ್ಥಿತಿ

ಅನುಬಂಧ ೨ ಪ್ರಶ್ನಾವಳಿ

ಗ್ರಾಮೀಣ ಮಹಿಳಾ ಕಾರ್ಮಿಕರ ಸಮಸ್ಯೆಗಳು – ಬಂಟ್ವಾಳ ತಾಲೂಕಿನಲ್ಲಿ ಒಂದು ಪ್ರಕರಣ ಅಧ್ಯಯನ

ಪೀಠಿಕೆ

ಪ್ರಸ್ತುತ ಅಧ್ಯಯನದ ಮುಖ್ಯ ಉದ್ದೇಶವೇನೆಂದರೆ, ಗ್ರಾಮೀಣ ಮಹಿಳಾ ಕಾರ್ಮಿಕರು ಎದುರಿಸುತ್ತಿರುವ ಸಮಸ್ಯೆಗಳನ್ನು ಅಧ್ಯಯನ ಮಾಡುವುದು ಮತ್ತು ಆರ್ಥಿಕ ಅಭಿವೃದ್ಧಿಯಲ್ಲಿ ಗ್ರಾಮೀಣ ಮಹಿಳೆಯರು ನೀಡುವ ಕೊಡುಗೆ ಬಗ್ಗೆ ಪರಾಮರ್ಶೆ ನಡೆಸುವುದು.

ಸೂಚನೆಗಳು

ಈ ಪ್ರಶ್ನಾವಳಿಯಲ್ಲಿ ವಿವಿಧ ಪ್ರಕಾರದ ಪ್ರಶ್ನೆಗಳಿವೆ. ಕೆಲವು ಪ್ರಶ್ನೆಗಳಿಗೆ ಚುಟುಕಾಗಿ ಉತ್ತರಿಸಬಹುದು. ಇನ್ನು ಕೆಲವು ಪ್ರಶ್ನೆಗಳಿಗೆ ಕೊಟ್ಟ ಉತ್ತರದಲ್ಲಿ ಸರಿಯಾದುದನ್ನು ಉತ್ತರಿಸಿದರಾಯಿತು.

- ಈ ಸಮೀಕ್ಷೆಯನ್ನು ಕೇವಲ ಅಧ್ಯಯನ ಉದ್ದೇಶಕ್ಕಾಗಿ ಮಾತ್ರ ಮಾಡಲಾಗುತ್ತಿದೆ.
- ನೀವು ವ್ಯಕ್ತಪಡಿಸಿರುವ ಅಭಿಪ್ರಾಯಗಳ ಗೌಪ್ಯತೆಯನ್ನು ಕಾಪಾಡಲಾಗುವುದು.
- ನಿಮ್ಮ ಇತರೆ ಉಪಯುಕ್ತ ಸಲಹೆ ಮತ್ತು ಪೂರಕ ಅಭಿಪ್ರಾಯವಿದ್ದಲ್ಲಿ ಕೃತಜ್ಞತಾಪೂರ್ವಕವಾಗಿ ಸ್ವೀಕರಿಸಲಾಗುವುದು.
- ನಿಮ್ಮ ಸಹಕಾರಕ್ಕಾಗಿ ಅನಂತ ಕೃತಜ್ಞತೆಗಳು.

ಭಾಗ – ೧ – ಸಾಮಾನ್ಯ ಮಾಹಿತಿಗಳು

೧. ಹೆಸರು :

೨. ವಯಸ್ಸು : ಅ. ೧೮–೩೦ ☐ ಆ ೩೧–೪೪ ☐

ಇ. ೪೫–೫೪ ☐ ಈ . ೫೫ ಮತ್ತು ಮೇಲ್ಪಟ್ಟು ☐

೩. ವಿದ್ಯಾರ್ಹತೆ : ಅ. ಅನಕ್ಷರಸ್ಥ ☐ ಆ. ಪ್ರಾಥಮಿಕ ಶಿಕ್ಷಣ ☐

ಇ. ಪ್ರೌಢ ಶಿಕ್ಷಣ ☐ ಈ. ಪದವಿ ಪೂರ್ವ ಶಿಕ್ಷಣ ☐

ಉ. ಪದವಿ ಶಿಕ್ಷಣ ☐

(೧). ಉನ್ನತ ವ್ಯಾಸಂಗ/ಹೆಚ್ಚಿನ ಶಿಕ್ಷಣದ ಅಗತ್ಯ, ಆಸೆ ಇದೆಯೇ ?

ಅ. ಇದೆ ☐ ಆ. ಇಲ್ಲ ☐

೪. ಉದ್ಯೋಗ :

೫. ಜಿಲ್ಲೆ :

೬. ತಾಲೂಕು:

೭. ವಾಸಸ್ಥಳ :

೮. ವಾರ್ಷಿಕ ಆದಾಯ (₹): ಅ. ೧,೦೦೦ ದಿಂದ ೧೦,೦೦೦ ☐

ಆ. ೧೦,೦೦೦ ದಿಂದ ೨೦,೦೦೦ ☐

ಇ. ೨೦,೦೦೦ ದಿಂದ ಮೇಲ್ಪಟ್ಟು ☐

೯. ನೀವು ಹುಟ್ಟಿದ ಊರು ಯಾವುದು?

ಅ. ಗ್ರಾಮಾಂತರ ☐ ಆ. ನಗರ ☐

೧೦. ನಿಮ್ಮ ಹವ್ಯಾಸಗಳು :

ಭಾಗ – ೨ ಮನೆಯ ವಿವರಗಳು

೧೧. ನಿಮ್ಮ ಸಾಂಪ್ರದಾಯಿಕ ಉದ್ಯೋಗ ಯಾವುದು?

೧೨. ನೀವು ವಾಸವಾಗಿರುವ ಮನೆ ಎಂತಹುದು?

ಅ. ಹುಲ್ಲಿನ ಮಾಡು ☐ ಆ. ಹಂಚಿನ ಮನೆ ☐ ಇ. ತಾರಸಿ ಮನೆ ☐

೧೩. ನೀವು ವಲಸೆ ಬಂದವರೇ?

ಅ. ಹೌದು ☐ ಆ. ಇಲ್ಲ ☐

(೧) ವಲಸೆ ಬಂದಿದ್ದರೆ ಅದಕ್ಕೆ ಕಾರಣವೇನು?

ಅ. ಕೆಲಸ ☐ ಆ. ಶಿಕ್ಷಣ ☐ ಇ. ಇತರೆ ☐

೧೪. ಮನೆಗೆ ವಿದ್ಯುತ್ ಸೌಕರ್ಯ ಇದೆಯೇ?

ಅ. ಹೌದು ☐ ಆ. ಇಲ್ಲ ☐

೧೫. ಮನೆಗೆ ಕುಡಿಯುವ ನೀರಿನ ಸೌಕರ್ಯವಿದೆಯೇ?

ಅ. ಹೌದು ☐ ಆ. ಇಲ್ಲ ☐

೧೬. ನಿಮ್ಮ ಮಕ್ಕಳ ಭವಿಷ್ಯದ ಬಗ್ಗೆ ಇರುವ ಕನಸು ಏನು?

೧೭. ಮನೆಯ ಒಳಗೆ ಸೂಕ್ತ ಬೆಳಕಿನ ವ್ಯವಸ್ಥೆ ಇದೆಯೇ?

ಅ. ಇದೆ ☐ ಆ. ಇಲ್ಲ ☐

೧೮. ಮನೆಯ ಒಳಗೆ ತೃಪ್ತಿಕರವಾದ ವಾಯುಸಂಚಾರ ಇದೆಯೇ?

ಅ. ಇದೆ ☐ ಆ. ಇಲ್ಲ ☐

೧೯. ಮನೆಯಿಂದ ಪೇಟೆಗೆ ಹೋಗಲು ಸೂಕ್ತ ವಾಹನ ಸೌಕರ್ಯ ಇದೆಯೇ?

ಅ. ಇದೆ ☐ ಆ. ಇಲ್ಲ ☐

೨೦. ಮನೆಯಿಂದ ಆಸ್ಪತ್ರೆ/ಪ್ರಾಥಮಿಕ ಆರೋಗ್ಯ ಕೇಂದ್ರ ಎಷ್ಟು ದೂರದಲ್ಲಿದೆ?

೨೧. ಬಂಟ್ವಾಳದಿಂದ ಹೊರಗೆ (ಪಟ್ಟಣಕ್ಕೆ) ಹೋಗುವ ಪರಿಪಾಠ ಇದೆಯೇ?

ಅ. ಇದೆ ☐ ಆ. ಇಲ್ಲ ☐

(೧) ಯಾವ ಕಾರಣಕ್ಕಾಗಿ?

(೨) ಎಷ್ಟು ಸಲ?

೨೨. ನೀವು ಆಧಾರ್ ಕಾರ್ಡನ್ನು ಹೊಂದಿರುವಿರಾ ?

ಅ. ಹೌದು ☐ ಆ.ಇಲ್ಲ ☐

ಭಾಗ ೩ : ಉದ್ಯೋಗದ ವಿವರಗಳು

೨೩. ನಿಮಗೆ ಉದ್ಯೋಗ ಹೇಗೆ ದೊರಕಿತು?

ಅ. ಹೆತ್ತವರ ಮತ್ತು ಸಂಬಂಧಿಕರ ನೆರವಿನಿಂದ ☐ ಆ. ಸ್ನೇಹಿತರ ಮೂಲಕ ☐

ಇ. ಉದ್ಯೋಗ ವಿನಿಮಯ ಕೇಂದ್ರದ ಮೂಲಕ ☐ ಈ. ಸ್ವಂತ ಪ್ರಯತ್ನದಿಂದ ☐

ಉ. ಇತರೆ ☐

೨೪. ನೀವು ಈ ಉದ್ಯೋಗವನ್ನು ಪಡೆಯಲು ಕಾರಣವೇನು?

ಅ. ಹಣಕಾಸಿನ ಅವಶ್ಯಕತೆ ☐ ಆ. ಬೇರೆ ಯಾವುದೇ ಕೆಲಸ ಸಿಗದಿರುವುದು ☐

ಇ. ಇತರೆ ☐

೨೫. ಕಳೆದ ಐದು ವರ್ಷಗಳಲ್ಲಿ ನೀವು ಉದ್ಯೋಗವನ್ನು ಬದಲಾಯಿಸಿರುವಿರಾ?

ಅ. ಹೌದು ☐ ಆ. ಇಲ್ಲ ☐

(೧) ಹೌದಾದರೆ ಅದಕ್ಕೆ ಕಾರಣಗಳು?

೨೬. ನೀವು ಉದ್ಯೋಗದಲ್ಲಿರುವಲ್ಲಿ ಒಟ್ಟು ಎಷ್ಟು ಮಂದಿ ನೌಕರರಿದ್ದಾರೆ?

೨೭. ನೀವು ಉದ್ಯೋಗ ಮಾಡುವಲ್ಲಿ ಪುರುಷ ಕಾರ್ಮಿಕರು ಇದ್ದಾರೆಯೇ?

ಅ. ಹೌದು ☐ ಆ. ಇಲ್ಲ ☐

(೧) ಎಷ್ಟು ಜನ ಪುರುಷ ಕಾರ್ಮಿಕರಿದ್ದಾರೆ?

(೨) ಎಷ್ಟು ಜನ ಮಹಿಳಾ ಕಾರ್ಮಿಕರಿದ್ದಾರೆ?

೨೮. ನೀವು ಉದ್ಯೋಗಕ್ಕೆ ಸೇರಿದ ಉದ್ದೇಶವೇನು?

೨೯. ನಿಮಗೆ ಹಾಗೂ ಪುರುಷ ಕಾರ್ಮಿಕರಿಗೆ ಕೆಲಸದಲ್ಲಿ ತಾರತಮ್ಯವಿದೆಯೇ?

ಅ. ಇದೆ ☐ ಆ. ಇಲ್ಲ ☐

೩೦. ನಿಮಗೆ ಆರ್ಥಿಕ ಸ್ವಾತಂತ್ರ್ಯ ಇದೆಯೇ?

ಅ. ಇದೆ ☐ ಆ. ಇಲ್ಲ ☐

೩೧. ನಿಮಗೆ ಹಾಗೂ ಪುರುಷ ಕಾರ್ಮಿಕರಿಗೆ ವೇತನದಲ್ಲಿ ತಾರತಮ್ಯವಿದೆಯೇ?

ಅ. ಇದೆ ☐ ಆ. ಇಲ್ಲ ☐

೩೨. ನಿಮಗೆ ಹಾಗೂ ಪುರುಷ ಕಾರ್ಮಿಕರಿಗೆ ಕೆಲಸದ ಅವಧಿಯಲ್ಲಿ ತಾರತಮ್ಯವಿದೆಯೇ?

ಅ. ಇದೆ ☐ ಆ. ಇಲ್ಲ ☐

೩೩. ನಿಮ್ಮ ಕೆಲಸದ ನಿಯಮ ಹಾಗೂ ಶರತ್ತುಗಳ ಬಗ್ಗೆ ನೀವು ಕೆಲಸಕ್ಕೆ ಸೇರುವ ಮೊದಲು ತಿಳಿದಿತ್ತೇ?

ಅ. ಹೌದು ☐ ಆ. ಇಲ್ಲ ☐

(೧) ಇಲ್ಲವಾದರೆ ಕಾರಣವೇನು?

೩೪. ಊಟದ ಸಮಯ ಹೊರತು ಪಡಿಸಿ ನೀವು ದಿನ ಒಂದಕ್ಕೆ ಎಷ್ಟು ಗಂಟೆ ದುಡಿಯುತ್ತೀರಿ?

೩೫. ಮಧ್ಯಾಹ್ನದ ಸಮಯದಲ್ಲಿ ಎಷ್ಟು ಗಂಟೆ ವಿಶ್ರಾಂತಿ ಪಡೆಯುತ್ತೀರಿ?

೩೬. ನಿಮ್ಮ ಮನೆಯಿಂದ ನೀವು ಕೆಲಸ ಮಾಡುವಲ್ಲಿಗೆ ಎಷ್ಟು ದೂರ ಇದೆ?

೩೭. ನೀವು ಒಳಾಂಗಣದಲ್ಲಿ ದುಡಿಯುವವರೇ? ಅಥವಾ ಹೊರಾಂಗಣದಲ್ಲಿ ದುಡಿಯುವವರೇ?

(೧) ಸೂಕ್ತ ಬೆಳಕಿನ ವ್ಯವಸ್ಥೆ (ಒಳಾಂಗಣವಾದರೆ)

ಅ. ತೃಪ್ತಿಕರವಾಗಿದೆ ☐ ಆ. ತೃಪ್ತಿಕರವಾಗಿಲ್ಲ ☐

(೨) ವಾಯು ಸಂಚಾರ (ಒಳಾಂಗಣವಾದರೆ)

ಅ. ತೃಪ್ತಿಕರವಾಗಿದೆ ☐ ಆ. ತೃಪ್ತಿಕರವಾಗಿಲ್ಲ ☐

೩೮. ನೀವು ದುಡಿಯುವಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಇದೆಯೇ?

ಅ. ಹೌದು ☐ ಆ. ಇಲ್ಲ ☐

೩೯. ನೀವು ದುಡಿಯುವಲ್ಲಿ ಶೌಚಾಲಯದ ವ್ಯವಸ್ಥೆ ಇದೆಯೇ?

ಅ. ಹೌದು ☐ ಆ. ಇಲ್ಲ ☐

೪೦. ನೀವು ಸಾಮಾನ್ಯವಾಗಿ ಕೆಲಸ ಮಾಡುವ ವೇಳೆ ಯಾವ ನಿಲುವಿನಲ್ಲಿರುತ್ತೀರಿ?

ಅ. ಆಸನದಲ್ಲಿ ಕೂತು ☐ ಆ. ನಡೆದಾಡಿ ☐

ಇ. ನಿಂತುಕೊಂಡು ☐ ಈ. ನೆಲದ ಮೇಲೆ ಕೂತು ☐

೪೧. ನಿಮಗೆ ಕೆಲಸ ಸಂಬಂಧಿತ ಆರೋಗ್ಯ ಭಾದೆಗಳಿವೆಯೇ?

ಅ. ಹೌದು ☐ ಆ. ಇಲ್ಲ ☐

(೧) ಇದ್ದರೆ ಯಾವುದು?

೪೨. ನಿಮ್ಮ ಸೇವಾನುಭವ ಎಷ್ಟು ವರ್ಷ?

೪೩. ನಿಮ್ಮ ಮಾಸಿಕ ವೇತನ ಎಷ್ಟು?

೪೪. ನಿಮಗೆ ಸೂಕ್ತ ವೇತನ ದೂರಕುತ್ತಿದೆಯೇ?

ಅ. ಹೌದು ☐ ಆ. ಇಲ್ಲ ☐

೪೫. ನಿಮಗೆ ದೊರೆತ ವೇತನವನ್ನು ಯಾವುದಕ್ಕೆ ವಿನಿಯೋಗಿಸುತ್ತೀರಿ?

ಅ. ಮಕ್ಕಳ ವಿದ್ಯಾಭ್ಯಾಸಕ್ಕಾಗಿ ☐ ಆ. ಮನೆ ಖರ್ಚಿಗಾಗಿ ☐

ಇ. ಸ್ವಂತಕ್ಕಾಗಿ ☐ ಈ. ಇತರೆ ☐

೪೬. ನಿಮಗೆ ದೊರೆತ ವೇತನವನ್ನು ಉಳಿತಾಯ ಮಾಡುತ್ತೀರಾ?

ಅ. ಹೌದು ☐ ಆ. ಇಲ್ಲ ☐

೪೭. ನಿಮ್ಮ ಮನೆಯ ಗಂಡಸರು ದುಡಿಯುವರೇ?

ಅ. ಹೌದು ☐ ಆ. ಇಲ್ಲ ☐

೪೮. ನೀವು ಇದೇ ಕೆಲಸವನ್ನು ಮುಂದುವರಿಸುವಿರಾ?

ಅ. ಹೌದು ☐ ಆ. ಇಲ್ಲ ☐

೪೯. ನೀವು ಕೆಲಸ ಮಾಡುವಲ್ಲಿ ಅಧಿಕ ದೈಹಿಕ ಶ್ರಮವನ್ನು ಉಪಯೋಗಿಸಬೇಕಾ?

ಅ. ಹೌದು ☐ ಆ. ಇಲ್ಲ ☐

೫೦. ನೀವು ಕೆಲಸ ಮಾಡುವಲ್ಲಿ ಮಾನಸಿಕ ಒತ್ತಡ ಇದೆಯೇ?

ಅ. ಹೌದು ☐ ಆ. ಇಲ್ಲ ☐

೫೧. ದುಡಿಮೆ ಬಗ್ಗೆ ನಿಮಗೆ ಆತ್ಮಾಭಿಮಾನ ಇದೆಯೇ?

ಅ. ಹೌದು ☐ ಆ. ಇಲ್ಲ ☐

೫೨. ಉದ್ಯೋಗಕ್ಕೆ ಹೋಗಲು ಸ್ವಂತ ಸಮಸ್ಯೆ ಇದೆಯೇ?

ಅ. ಹೌದು ☐ ಆ. ಇಲ್ಲ ☐

೫೩. ಉದ್ಯೋಗಕ್ಕೆ ಹೋಗಲು ಕೌಟುಂಬಿಕ ಸಮಸ್ಯೆಗಳು ಇವೆಯೇ?

ಅ. ಇವೆ ☐ ಆ. ಇಲ್ಲ ☐

೫೪. ಕೆಲಸ ಮುಗಿದ ಬಳಿಕ ಮನೆಯಲ್ಲಿ ಸ್ವಂತ ದುಡಿಮೆ ಮಾಡುತ್ತೀರಾ?

ಅ. ಹೌದು ☐ ಆ. ಇಲ್ಲ ☐

(೧) ಹೌದಾದರೆ ಹಿತವೇ, ಒತ್ತಡವೇ?

೫೫. ನಿಮಗೆ ಸ್ವಂತ ಉದ್ಯಮ ಮಾಡುವ ಆಲೋಚನೆ ಇದೆಯೇ ?

ಅ. ಹೌದು ☐ ಆ. ಇಲ್ಲ ☐

೫೬. ಮನೆಯಲ್ಲಿ ಮಕ್ಕಳ ಸಮಸ್ಯೆ ಇದೆಯೇ?

ಅ. ಹೌದು ☐ ಆ. ಇಲ್ಲ ☐

೫೭. ನೀವು ಗ್ರಾಮ ಪಂಚಾಯತಿಗಳಲ್ಲಿ ನಾಯಕತ್ವವನ್ನು ಹೊಂದಿದ್ದೀರಾ?

ಅ. ಹೌದು ☐ ಆ. ಇಲ್ಲ ☐

೫೮. ನೀವು ಕೆಲಸವನ್ನು ಬಿಡುವ ಆಲೋಚನೆಯಲ್ಲಿದ್ದೀರಾ?

ಅ. ಹೌದು ☐ ಆ. ಇಲ್ಲ ☐

೫೯. ಬಂಟ್ವಾಳ ತಾಲೂಕು ಹಿಂದೆ ಹೇಗಿತ್ತು?

೬೦. ಬಂಟ್ವಾಳ ತಾಲೂಕು ಈಗ ಅಭಿವೃದ್ಧಿ ಹೊಂದಿದೆಯೇ?

ಅ. ಹೌದು ☐ ಆ. ಇಲ್ಲ ☐

(೧) ಹೌದಾದರೆ, ಯಾರಿಂದ?

ಅ. ಸಮುದಾಯದಿಂದ ☐ ಆ. ಸರಕಾರದಿಂದ ☐

೬೧. ನಿಮ್ಮ ತಕ್ಷಣದ ಯಾವ ಸಮಸ್ಯೆಗೆ ಪರಿಹಾರ ಸಿಗಬೇಕು?

೬೨.ನೀವು ಕೆಲಸ/ಊರು ತೃಪ್ತಿಕರವಿಲ್ಲದೆ ಬಂಟ್ವಾಳದಿಂದ ಹೊರಡುವ ಮನೋಸ್ಥಿತಿಯಲ್ಲಿದ್ದೀರಾ?

ಅ. ಹೌದು ☐ ಆ. ಇಲ್ಲ ☐

೬೩. ನಿಮಗೆ ವಿಮಾ ಸೌಲಭ್ಯವಿದೆಯೇ?

ಅ. ಇದೆ ☐ ಆ. ಇಲ್ಲ ☐

೧೪. ನೀವು ಸ್ಮಾರ್ಟ್ ಕಾರ್ಡ್ ಫಲಾನುಭವಿಯೇ?

ಅ. ಹೌದು ☐ ಆ. ಇಲ್ಲ ☐

೧೫. ಕಿರುಹಣಕಾಸು ಸಂಸ್ಥೆಗಳ ಫಲಾನುಭವಿಯೇ?

ಅ. ಹೌದು ☐ ಆ. ಇಲ್ಲ ☐

೧೬. ನೀವು ಸ್ವ-ಸಹಾಯ ಗುಂಪಿನ ಸದಸ್ಯೆಯಾಗಿದ್ದೀರಾ?

ಅ. ಹೌದು ☐ ಆ. ಇಲ್ಲ ☐

೧೭. ನೀವು ಸ್ತ್ರೀ-ಶಕ್ತಿ ಅಥವಾ ಬೇರೆ ಯಾವುದೇ ಸ್ವ-ಸಹಾಯ ಗುಂಪಿನ/ಸಂಸ್ಥೆಯ ಸದಸ್ಯೆಯಾಗಿದ್ದೀರಾ?

ಅ. ಹೌದು ☐ ಆ. ಇಲ್ಲ ☐

೧೮. ನಿಮ್ಮ ಹಿಂದಿನ ಸ್ಥಿತಿಗಿಂತ ಈಗಿನ ಸ್ಥಿತಿ – ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ – ಉತ್ತಮವಾಗಿದೆಯೇ?

ಅ. ಹೌದು ☐ ಆ. ಇಲ್ಲ ☐

೧೯. ಇತರ ಮಹಿಳೆಯರಿಗೆ ನಿಮ್ಮ ದೃಷ್ಟಿಕೋನದಲ್ಲಿ ದುಡಿಮೆಯ ಬಗ್ಗೆ ಹೇಳುವ ಮಾತುಗಳಾವುವು?

೨೦. ಇಂತಹ ಸಂಶೋಧನೆಯ ಬಗ್ಗೆ ನಿಮ್ಮ ಅಭಿಪ್ರಾಯ ?

೨೧. ಇತರ ವಿಷಯಗಳು :

ಸ್ಥಳ :

ದಿನಾಂಕ: ಸಹಿ

ಅನುಬಂಧ ೩

ದಕ್ಷಿಣ ಕನ್ನಡದ ನಕ್ಷೆ



ಅನುಬಂಧ ೪

ಕರ್ನಾಟಕದ ನಕ್ಷೆ



ಪರಾಮರ್ಶನ ಗ್ರಂಥಗಳು

ಅರ್ಚನ ಜಿ ಗುಲಾಲಿ, "ಐ.ಸಿ.ಟಿ ಆ್ಯಂಡ್ ಸಸ್ಟೈನೇಬಲ್ ಡೆವೆಲಪ್‌ಮೆಂಟ್-ಬ್ರಿಡ್ಜಿಂಗ್ ದಿ ಜೆಂಡರ್ ಡಿವೈಡ್", ಕುರುಕ್ಷೇತ್ರ-ಎ ಜರ್ನಲ್ ಆನ್ ರೂರಲ್ ಡೆವೆಲಪ್‌ಮೆಂಟ್, ವೊಲ್ಯುಮ್.೫೯, ನಂ.೬, ಎಪ್ರಿಲ್ ೨೦೧೧.

ಅಂಗಡಿ ಡಿ.ಪಿ ಮತ್ತು ಡಾ॥ ಚಂದ್ರಶೇಖರ ಬಿ., "ಕೃಷಿ ಮತ್ತು ಗ್ರಾಮೀಣಾಭಿವೃದ್ಧಿಯಲ್ಲಿ ಮಹಿಳೆಯರ ಪಾತ್ರ", ಮಹಿಳೆ ಮತ್ತು ಅಭಿವೃದ್ಧಿ, ಜಯಶೀಲ, ಶೌಕತ್ ಅಲಿ ಎಂ. ಮೇಗಲಮನಿ, ಸುಧಾಕರ ಎಸ್. (ಸಂ) ಕಿಸಾನ್ ಪಬ್ಲಿಕೇಶನ್ಸ್, ಮಂಗಳೂರು, ೨೦೦೭.

ಇಂಟರ್ ಆಫ್ರಿಕನ್ ಲೇಬರ್ ಇನ್ಸ್ಟಿಟ್ಯೂಟ್, *ದ ಹ್ಯೂಮನ್ ಫ್ಯಾಕ್ಟರ್ಸ್ ಆಫ್ ಪ್ರೊಡಕ್ಟಿವಿಟಿ ಇನ್ ಆಫ್ರಿಕ: ಎ ಪ್ರೈಮರಿ ಸರ್ವೆ ಕಮೀಶನ್ ಫೋರ್ ಟೆಕ್ನಿಕಲ್ ಕೊ ಒಪರೇಶನ್ ಇನ್ ಆಫ್ರಿಕ, ಸೌತ್ ಆಫ್ ಸಹಾರಾ*, ೧೯೬೦.

ಕಡ್ಚೇಡ್ಕರ್ ಎಲ್.ಎಸ್, *ಆ್ಯಸ್ಪೆಕ್ಟ್ಸ್ ಆಫ್ ಪರ್ಸನೆಲ್ ಮ್ಯಾನೆಜ್ಮೆಂಟ್ ಆ್ಯಂಡ್ ಇಂಡಸ್ಟ್ರಿಯಲ್ ರಿಲೇಶನ್ಸ್*, ಟಾಟಾ ಮ್ಯಾಕ್‌ಗ್ರೊ-ಹಿಲ್ ಪಬ್ಲಿಶಿಂಗ್ ಕಂಪನಿ ಲಿಮಿಟೆಡ್, ನಿವ್‌ಡೆಲ್ಲಿ, ೧೯೭೯.

ಕೆನ್ನತ್ ಲೀ ಡೇವರ್ಸ್, ಡೇವಿಡ್. ಎಲ್. ಬ್ರೌನ್ ಸೋಶಿಯಲ್ ಆ್ಯಂಡ್ ಇಕಾನಿಮಿಕ್ ಟ್ರೆಂಡ್ಸ್ ಇನ್ ರೂರಲ್ ಅಮೇರಿಕಾ, ೧೯೭೯.

ಚಕ್ರವರ್ತಿ, ಅಂಜನ್ ಹ್ಯಾಂಡ್ ದಾರ್, ಅನುಪ್ ಕುಮಾರ್, "ಲೇಬರ್ ಕ್ಲಾಸ್ ಆ್ಯಂಡ್ ಇಕಾನಮಿ: ರಿ ಥಿಂಕಿಂಗ್ ಟ್ರೇಡ್‌ಯೂನಿಯನ್ ಸ್ಟ್ರಗಲ್", *ರಿವ್ಯೂ ಆಫ್ ಲೇಬರ್ ಇಕನೊಮಿಕ್ ಆ್ಯಂಡ್ ಪಾಲಿಟಿಕಲ್ ವೀಕ್ಲಿ*, ವೊಲ್ಯುಮ್ ೪೩, ನಂ.೨೨, ಮೇ ೩೧-ಜೂನ್ ೬, ೨೦೦೮.

ಚಂದ್ರ ಪೂಜಾರಿ.ಎಂ, *ಸಂಶೋಧನೆ ಏನು? ಏಕೆ? ಹೇಗೆ?*, ಪ್ರಸಾರಾಂಗ ಕನ್ನಡ ವಿಶ್ವ ವಿದ್ಯಾಲಯ, ಹಂಪಿ, 2009.

ಜಯಶೀಲ ಮತ್ತು ಸುಧಾಕರ ಎಸ್, "ಗ್ರಾಮೀಣ ಮಹಿಳೆಯರ ವಿವಿಧ ಆಯಾಮಗಳು", ಮಹಿಳೆ ಮತ್ತು ಅಭಿವೃದ್ಧಿ, ಡಾ॥ ಜಯಶೀಲ, ಶೌಕತ್ ಅಲಿ ಎಂ. ಮೇಗಲಮನಿ, ಸುಧಾಕರ ಎಸ್. (ಸಂ) ಕಿಸಾನ್ ಪಬ್ಲಿಕೇಶನ್ಸ್, ಮಂಗಳೂರು, ೨೦೦೭.

ತಿವಾರಿ, ರಾಮ್ ತೆರಾಥ್, *ಲೇಬರ್ ಪ್ರೊಡಕ್ಟಿವಿಟಿ ಇನ್ ಇಂಡಿಯನ್ ಕಾಟನ್ ಟೆಕ್ಸ್‌ಟೈಲ್ ಇಂಡಸ್ಟ್ರಿ*, ಥೀಸಿಸ್ ಸಬ್ಮಿಟೆಡ್ ಟು ದ ಡಿಪಾರ್ಟ್‌ಮೆಂಟ್ ಆಫ್ ಇಕಾನಾಮಿಕ್ಸ್, ಲಕ್ನೊ ಯುನಿವರ್ಸಿಟಿ, ಲಕ್ನೊ, ೧೯೭೧.

ತ್ರಿಪಾತಿ ಎಸ್. ಎನ್. (ಸಂ.), *ಅನ್ ಆರ್ಗನೈಜ್ಡ್ ವಿಮೆನ್ ಲೇಬರ್ ಇನ್ ಇಂಡಿಯಾ*, ಡಿಸ್ಕವರಿ ಪಬ್ಲಿಶಿಂಗ್ ಹೌಸ್, ನಿವ್‌ಡೆಲ್ಲಿ, ೧೯೯೬.

ತುಕಾರಾಂ ಪೂಜಾರಿ, "ಐತಿಹಾಸಿಕ ಮಹತ್ವದ ಪಾಣೆಮಂಗಳೂರು ಸೇತುವೆ", ಬಂಟ್ವಾಳ ಇತಿಹಾಸ ದರ್ಶನ, ತುಕಾರಾಂ ಪೂಜಾರಿ, ಆಶಾಲತ ಎಸ್. ಸುವರ್ಣ (ಸಂ), ರಾಣಿ ಅಬ್ಬಕ್ಕ ತುಳು ಅಧ್ಯಯನ ಕೇಂದ್ರ ಬಂಟ್ವಾಳ ಪಬ್ಲಿಕೇಶನ್ಸ್, ೨೦೦೩.

ದಿನೇಶ ಪಿ.ಟಿ, ಶಿವಚಿತ್ತಪ್ಪ, "ಮಹಿಳೆಯರ ಆರ್ಥಿಕ ಸ್ವಾವಲಂಬನೆಯಲ್ಲಿ ಕಿರುಹಣಕಾಸಿನ ಪಾತ್ರ", ಮಹಿಳೆ ಮತ್ತು ಅಭಿವೃದ್ಧಿ, ಜಯಶೀಲ, ಶೌಕತ್ ಅಲಿ ಎಂ. ಮೇಗಲಮನಿ, ಸುಧಾಕರ ಎಸ್. (ಸಂ) ಕಿಸಾನ್ ಪಬ್ಲಿಕೇಶನ್ಸ್, ಮಂಗಳೂರು, ೨೦೦೭.

ಡಾ॥ ರಾಮಕೃಷ್ಣ ಆಚಾರ್ ಪಾಲ್ತಾಡಿ, "ಬಂಟ್ವಾಳಕ್ಕುಂಟು ಜಾನಪದ ನಂಟು", ಬಂಟ್ವಾಳ ಇತಿಹಾಸ ದರ್ಶನ, ತುಕಾರಾಂ ಪೂಜಾರಿ, ಆಶಾಲತ ಎಸ್. ಸುವರ್ಣ (ಸಂ), ರಾಣಿ ಅಬ್ಬಕ್ಕ ತುಳು ಅಧ್ಯಯನ ಕೇಂದ್ರ ಬಂಟ್ವಾಳ ಪಬ್ಲಿಕೇಶನ್ಸ್, ೨೦೦೩.

ಡಬ್ಲ್ಯುಡಬ್ಲ್ಯುಡಬ್ಲ್ಯು.ಗೂಗಲ್.ಕಾಮ್- ಡಿಸ್ಟ್ರಿಕ್ಟ್ ಇಂಡಿಕೇಟರ್ಸ್ ಸೆನ್ಸಸ್ ೨೦೧೧,ಹ್ಯಾಕ್ಸೆಸ್ಡ್ ಆನ್ ೨೦.೦೨.೨೦೧೧.

ಡಬ್ಲ್ಯುಡಬ್ಲ್ಯುಡಬ್ಲ್ಯು.ಗೂಗಲ್.ಕಾಮ್- ಡಿಸ್ಟ್ರಿಕ್ಟ್ ಪ್ರೊಫಾಯ್ಲ್, ಹ್ಯಾಕ್ಸೆಸ್ಡ್ ಆನ್ ೧೮.೦೨.೨೦೧೧.

ನವಿಲೂರು ತೇಜಸ್ವಿ, *ಮಾಧ್ಯಮದ ಮುಂದಿರುವ ಸವಾಲುಗಳು*, ತ. ರಾ. ಮು. ವಿ.ವಿ ಮೈಸೂರು, ೨೦೦೭.

ಬಿರಾದಾರ್ ಆರ್. ಆರ್. ಮತ್ತು ಎಸ್.ಚಿ. ಬಾಗಲಕೋಟೆ, "ಭಾರತದಲ್ಲಿ ಮಹಿಳೆಯರ ಅಂತಸ್ತು", ಮಹಿಳೆ ಮತ್ತು ಅಭಿವೃದ್ಧಿ, ಜಯಶೀಲ, ಶೌಕತ್ ಅಲಿ ಎಂ. ಮೇಗಲಮನಿ, ಸುಧಾಕರ ಎಸ್. (ಸಂ), ಕಿಸಾನ್ ಪಬ್ಲಿಕೇಶನ್ಸ್, ಮಂಗಳೂರು, ೨೦೦೭.

ಪುಂಡಿಕ್ಕಾ ಗಣಪಯ್ಯ ಭಟ್, "ಐತಿಹಾಸಿಕ ಹಿನ್ನೆಲೆ", ಬಂಟ್ವಾಳ ಇತಿಹಾಸ ದರ್ಶನ, ತುಕಾರಾಂ ಪೂಜಾರಿ, ಆಶಾಲತ ಎಸ್. ಸುವರ್ಣ (ಸಂ), ರಾಣಿ ಅಬ್ಬಕ್ಕ ತುಳು ಅಧ್ಯಯನ ಕೇಂದ್ರ ಬಂಟ್ವಾಳ ಪಬ್ಲಿಕೇಶನ್ಸ್, ೨೦೦೩.

ಪ್ರೇಮಲತಾ ಪೈ, *ಇವ್ಯಾಲ್ಯುಯೇಶನ್ ಆಫ್ ಸೋಶಿಯೋ-ಇಕಾನಾಮಿಕ್ ಕಂಡೀಶನ್ಸ್ ಆಫ್ ರೂರಲ್ ವಿಮೆನ್*, ಮಂಗಳೂರು ವಿಶ್ವವಿದ್ಯಾಲಯಕ್ಕೆ ಎಂ.ಫಿಲ್ ಪದವಿಗಾಗಿ ಸಾದರಪಡಿಸಿದ ಸಂಪ್ರಬಂಧ, ೨೦೧೦.

ಭಟ್ಟಾಚಾರ್ಯ, ವಿವೇಕ್ ರಂಜನ್, "ಸಮ್ ಆ್ಯಸ್ಪೆಕ್ಟ್ಸ್ ಆಫ್ ಸೋಶಿಯಲ್ ಸೆಕ್ಯೂರಿಟಿ ಮೆಜರ್ಸ್ ಇನ್ ಇಂಡಿಯಾ" (ಅನ್‌ಪಬ್ಲಿಶ್ಡ್), ಇಂಡಿಯನ್ ಕಾವ್ನ್ಸಿಲ್ ಆಫ್ ಸೋಶಿಯಲ್ ಸಾಯನ್ಸಸ್ ಆ್ಯಂಡ್ ರಿಸರ್ಚ್, ನಿವ್‌ಡೆಲ್ಲಿ, ೧೯೮೨.

ಮುತಾಲಿಕ್, ದೇಸಾಯಿ ಎಸ್ ಎಸ್ ಮತ್ತು ರೈಸೀಕರ್ ಬಿ. ಆರ್., *ಲೇಬರ್ ವೆಲ್ಫೇರ್, ಇಂಡಸ್ಟ್ರಿಯಲ್ ರಿಲೇಶನ್ಸ್ ಆ್ಯಂಡ್ ಟ್ರೇಡ್ ಯುನಿಯನಿಸಮ್*, ನೋಬಲ್ ಪಬ್ಲಿಶಿಂಗ್ ಹೌಸ್, ಬಾಂಬೆ, ೧೯೮೦.

ಮೇರಿ ಕೇ ಬ್ಲೇಕಿ, *ವರ್ಕಿಂಗ್ ವುಮೆನ್ ಶುಡ್ ಬಿ ದೆಮ್ಸೆಲ್ವ್ಸ್*, ಜರ್ನಲಿಸ್ಟ್,
೧೯೮೪.

ಮುಕುಂದ ಪ್ರಭು, "ಪೋಲಿ. ಅ ಕಮಾಮರೇಟಿವ್ ವೂಲ್ಯುಮ್ ಪೋರ್ ಕೆನರಾ ೨೦೦", ಮ್ಯಾಂಗಲೋರ್ ಡೆಪ್ಯೂಟಿ ಕಮಿಷನರ್ ಆಫೀಸ್, ೨೦೦೨.

ರಶ್ಮಿ ಕುಮಾರಿ ಎ., *ಮಾಧ್ಯಮದಲ್ಲಿ ದುಡಿಯುವ ಮಹಿಳೆಯರು, ದಕ್ಷಿಣ ಕನ್ನಡದಲ್ಲಿ ಒಂದು ಅಧ್ಯಯನ*, ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಎಂ.ಫಿಲ್ ಪದವಿಗಾಗಿ ಸಾದರಪಡಿಸಿದ ಸಂಪ್ರಬಂಧ, ೨೦೧೦.

ರಂಗಸ್ವಾಮಿ, ಎನ್ "ಮಹಿಳೆ ಮತ್ತು ಉನ್ನತ ಶಿಕ್ಷಣ", ಮಹಿಳೆ ಮತ್ತು ಅಭಿವೃದ್ಧಿ, ಜಯಶೀಲ, ಶೌಕತ್ ಅಲಿ ಎಂ. ಮೇಗಲಮನಿ, ಸುಧಾಕರ ಎಸ್. (ಸಂ) ಕಿಸಾನ್ ಪಬ್ಲಿಕೇಶನ್ಸ್, ಮಂಗಳೂರು, ೨೦೦೭.

ರಾಜು. ಗೋವಿಂದ ಬಿ.ಎಂ., "*ಉದ್ಯೋಗ ಮತ್ತು ಮಹಿಳೆ*", ಮಹಿಳೆ ಮತ್ತು ಅಭಿವೃದ್ಧಿ, ಜಯಶೀಲ, ಶೌಕತ್ ಅಲಿ ಎಂ. ಮೇಗಲಮನಿ, ಸುಧಾಕರ ಎಸ್. (ಸಂ), ಕಿಸಾನ್ ಪಬ್ಲಿಕೇಷನ್ಸ್, ಮಂಗಳೂರು, ೨೦೦೭.

ವೈ.ಮುನಿರಾಜು, "ಗ್ರಾಮೀಣ ಮಹಿಳೆಯ ಬದುಕು ಮತ್ತು ಕೌಟುಂಬಿಕ ನಿರ್ವಹಣೆ–ಒಂದು ನೋಟ", ಮಹಿಳೆ ಮತ್ತು ಅಭಿವೃದ್ಧಿ, ಜಯಶೀಲ, ಶೌಕತ್ ಅಲಿ ಎಂ. ಮೇಗಲಮನಿ, ಸುಧಾಕರ ಎಸ್. (ಸಂ.) ಕಿಸಾನ್ ಪಬ್ಲಿಕೇಶನ್ಸ್, ಮಂಗಳೂರು, ೨೦೦೭.

ವಿಜಯ್ ಕುಮಾರ್ ಎಸ್, "೨೦೧೧ ಸೆನ್ಸಸ್–ಎ ರಿವ್ಯೂ", ಕುರುಕ್ಷೇತ್ರ–ಎ ಜರ್ನಲ್ ಆನ್ ರೂರಲ್ ಡೆವೆಲಪ್‌ಮೆಂಟ್, ವೊಲ್ಯುಮ್.೫೯, ನಂ.೮, ಜೂನ್ ೨೦೧೧.

ವೈಕುಂಠೆ ಮತ್ತು ತಲ್ವಾರ್ ಸಾಬಣ್ಣ, "ಭಾರತದಲ್ಲಿ ಮಹಿಳೆಯರ ಆರೋಗ್ಯ", ಮಹಿಳೆ ಮತ್ತು ಅಭಿವೃದ್ಧಿ, ಜಯಶೀಲ, ಶೌಕತ್ ಅಲಿ ಎಂ. ಮೇಗಲಮನಿ, ಸುಧಾಕರ ಎಸ್. (ಸಂ) ಕಿಸಾನ್ ಪಬ್ಲಿಕೇಶನ್ಸ್, ಮಂಗಳೂರು, ೨೦೦೭.

ಸಚ್‌ದೇವ್, *ಸಿಂಪಲ್ ಸ್ಟಡಿ ಆಫ್ ಲೇಬರ್ ಪ್ರಾಬ್ಲಮ್ಸ್*, ಅಂಜತ ಬುಲ್ ಪಬ್ಲಿಶಿಂಗ್ ಹೌಸ್, ೧೯೭೩.

ಸಿಂಗ್ ಬಿ.ಡಿ., *ಲೇಬರ್ ಲಾಸ್ ಫೋರ್ ಮ್ಯಾನೇಜರ್ಸ್*, ಎಕ್ಸೆಲ್ ಬುಕ್ಸ್, ನ್ಯೂಡೆಲ್ಲಿ, ೨೦೦೭.

ಸ್ಟರೂಕ್, ಜೆ, ಮದ್ರಾಸ್ ಡಿಸ್ಟ್ರಿಕ್ಟ್ ಮ್ಯಾನ್ಯುವಲ್ಸ್ ಸೌತ್ ಕೆನರಾ,ಮದ್ರಾಸ್ ದ ಸುಪ್ರಿಂಡೆಂಟ್ ಗವರ್ನಮೆಂಟ್ ಪ್ರೆಸ್, ೧೮೯೪.

ಶರ್ಮ ಎ.ಎಮ್., *ಲೇಬರ್ ಎಡ್ಮಿನಿಸ್ಟ್ರೇಶನ್ ಇನ್ ಇಂಡಿಯಾ*, ಹಿಮಾಲಯ ಪಬ್ಲಿಶಿಂಗ್ ಹೌಸ್, ಬಾಂಬೆ, ೧೯೯೩.

ಶ್ರೀಪ್ರಸಾದ್.ಎಚ್, ಟಿ.ಎಚ್.ಮೂರ್ತಿ, "ಸ್ವ ಉದ್ಯೋಗ ಹಾಗೂ ಮಹಿಳಾ ಸ್ವಾವಲಮಬನೆಯ ಯಶೋಗಾಥೆ", ಮಹಿಳೆ ಮತ್ತು ಅಭಿವೃದ್ಧಿ, ಜಯಶೀಲ, ಶೌಕತ್ ಅಲಿ ಎಂ. ಮೇಗಲಮನಿ, ಸುಧಾಕರ ಎಸ್. (ಸಂ.), ಕಿಸಾನ್ ಪಬ್ಲಿಕೇಷನ್ಸ್ ಮಂಗಳೂರು, ೨೦೦೭.

ಶಂಕರ್ ರಾವ್ ಚ.ನ., *ಭಾರತೀಯ ಸಮಾಜ*, ಜೈ ಭಾರತ ಪ್ರಕಾಶನ ಮಂಗಳೂರು, ೧೯೯೧.

ಶೌಕತ್ ಆಲಿ.ಎಂ. ಮೇಗಲಮನಿ ಮತ್ತು ಪಿ.ಎಂ. ಹೊನಕೇರಿ, "ಸ್ತ್ರೀಯರ ಸಬಲೀಕರಣದಲ್ಲಿ ಶಿಕ್ಷಣದ ಪಾತ್ರ", ಮಹಿಳೆ ಮತ್ತು ಅಭಿವೃದ್ಧಿ, ಜಯಶೀಲ, ಶೌಕತ್ ಅಲಿ ಎಂ. ಮೇಗಲಮನಿ, ಸುಧಾಕರ ಎಸ್. (ಸಂ) ಕಿಸಾನ್ ಪಬ್ಲಿಕೇಶನ್ಸ್, ಮಂಗಳೂರು, ೨೦೦೭.

AKSHARA GRANTHALAYA
ACC.NO. 048803

048803